ಮಂಗಳವಾರ, ಫೆಬ್ರುವರಿ 7, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ
ಮುಂಬೈನಲ್ಲಿ ಸೋಮವಾರ ಆರೇ ಅರಣ್ಯಪ್ರದೇಶದ ಸಂರಕ್ಷಣೆಗೆ ಒತ್ತಾಯಿಸಿ ಬುಡಕಟ್ಟು ಮಹಿಳೆಯರು ಪ್ರತಿಭಟನೆ ನಡೆಸಿದರು



ಲಲಿತಮ್ಮ, ನಾಗೇಶ್‌ಗೆ 'ಎಸ್‌.ಪಿ. ವರದರಾಜು ಪ್ರಶಸ್ತಿ'

ಬೆಂಗಳೂರು: ನಟ ರಾಜ್‌ಕುಮಾರ್ ಅವರ ಸೋದರ ಎಸ್‌.ಪಿ. ವರದರಾಜು ಹೆಸರಿನಲ್ಲಿ ನೀಡಲಾಗುತ್ತಿರುವ 'ಎಸ್‌.ಪಿ. ವರದರಾಜು ಪ್ರಶಸ್ತಿ'ಗೆ ಈ ಬಾರಿ ರಂಗಭೂಮಿ ಕ್ಷೇತ್ರದಲ್ಲಿ ಕಲಾವಿದೆ ಡಿ. ಲಲಿತಮ್ಮ ಮತ್ತು ಚಲನಚಿತ್ರ ಕ್ಷೇತ್ರದಲ್ಲಿ ಕಲಾವಿದ ಬೆಂಗಳೂರು ನಾಗೇಶ್ ಆಯ್ಕೆಯಾಗಿದ್ದಾರೆ.

ವರದರಾಜು ಆತ್ಮೀಯರ ಬಳಗವು ರಂಗಭೂಮಿ ಹಾಗೂ ಸಿನಿಮಾ ಕ್ಷೇತ್ರದ ಸಾಧಕರಿಗೆ ಪ್ರತಿವರ್ಷ ಈ ಪ್ರಶಸ್ತಿ ನೀಡುತ್ತಿದೆ. ಡಿ. ಲಲಿತಮ್ಮ ಅವರು 8 ವರ್ಷದ ಬಾಲಕಿಯಾಗಿದ್ದಾಗಲೇ ರಂಗಭೂಮಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಸಮಾಜ ಸೇವೆಯಲ್ಲೂ ಸಕ್ರಿಯರಾಗಿದ್ದಾರೆ. ಬೆಂಗಳೂರು ನಾಗೇಶ್ ಅವರು 250ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಡಾ. ರಾಜ್‌ಕುಮಾರ್ ಅವರ ಜೊತೆ 22 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವು ಫೆ.8ರಂದು ನಡೆಯಲಿದೆ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದ್ದಾರೆ.




ಸಕಲೇಶಪುರದಲ್ಲಿ ಸೋಮವಾರ ಜನಸಾಗರದ ನಡುವೆ ಸಕಲೇಶ್ವರಸ್ವಾಮಿ ಪುಷ್ಪಾಲಂಕೃತ ರಥೋತ್ಸವ ನಡೆಯಿತು (ಎಡಚಿತ್ರ) ಉತ್ತರ ಕನ್ನಡ ಜಿಲ್ಲೆ ಜೊಯಿಡಾ ತಾಲ್ಲೂಕಿನ ಉಳವಿಯ ಚನ್ನಬಸವೇಶ್ವರ ರಥೋತ್ಸವವು ವಿಜೃಂಭಣೆಯಿಂದ ನೆರವೇರಿತು. ಲಕ್ಷಾಂತರ ಶರಣ ಭಕ್ತರು ಸೇರಿ 'ಆಡಿಕೇಶ್ವರ, ಮಡಿಕೇಶ್ವರ, ಉಳವಿ ಚನ್ನಬಸವೇಶ್ವರ ಮಹಾರಾಜ ಕೀ ಜೈ' ಎಂದು ಘೋಷಣೆ ಕೂಗುತ್ತ ತೇರನ್ನು ಎಳೆದರು

–ಪ್ರಜಾವಾಣಿ ಚಿತ್ರಗಳು ಜಾನೇಕೆರೆ ಆರ್‌. ಪರಮೇಶ್/ ಜ್ಞಾನೇಶ್ವರ ದೇಸಾಯಿ

ಸುದ್ದಿ 2 ನಿಮಿಷ

ಗಂಗಾ ಕಲ್ಯಾಣ– ರೈತರ ಖಾತೆಗೆ ನೇರ ಹಣ: ಸಚಿವ ಕೋಟ

ಯಾದಗಿರಿ: 'ರಾಜ್ಯದ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ರೈತರು ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ಕೊರೆಸಿಕೊಂಡರೆ ನೇರವಾಗಿ ಅವರ ಖಾತೆಗೆ ಹಣ ಸಂದಾಯ ಮಾಡಲಾಗುವುದು' ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಖಾತೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ತಾಲ್ಲೂಕಿನ ಮುದ್ನಾಳ ಗ್ರಾಮದಲ್ಲಿ ಸೋಮವಾರ ರೈತ ಈಶ್ವರಪ್ಪ ಮುದ್ನಾಳ ಅವರ 1 ಎಕರೆ 30 ಗುಂಟೆ ಜಮೀನಿನಲ್ಲಿ ಆದಿ ಜಾಂಬವ ಅಭಿವೃದ್ಧಿ ನಿಗಮದ ಸೌಲಭ್ಯದಡಿ ಕೊಳವೆ ಬಾವಿ ಕೊರೆಯಿಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಗೊಂದಲಗಳಿಲ್ಲದೇ ರೈತರು ತಾವು ಬಯಸಿದ ಗುತ್ತಿಗೆದಾರರಿಂದ ಕೊಳವೆ ಬಾವಿ ಕೊರೆಯಿಸಿಕೊಳ್ಳಬಹುದು. ಇದೇ ಮೊದಲ ಬಾರಿಗೆ ಈ ರೀತಿ ವಿನೂತನ ಕ್ರಮ ಕೈಗೊಳ್ಳಲಾಗಿದೆ' ಎಂದು ಹೇಳಿದರು.

'ಜಮೀನಿನಲ್ಲಿ ನೀರು ಲಭ್ಯವಾದ ತಕ್ಷಣ ರೈತರ ಖಾತೆಗೆ ಹಣ ಜಮೆಯಾಗಲಿದ್ದು, ಇದು ಮೋಟಾರು ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಲು ನೆರವಾಗಲಿದೆ' ಎಂದು ತಿಳಿಸಿದರು.

ಇದಕ್ಕೂ ಮುನ್ನ ಸಚಿವರು, ಅಧಿಕಾರಿಗಳು ಪರಿಶಿಷ್ಟ ಜಾತಿಯ ಹಣಮಂತ ಎಂಬುವರ ಮನೆಯಲ್ಲಿ ಉಪಾಹಾರ ಸೇವಿಸಿದರು. ಸಿರಾ, ಉಪ್ಪಿಟು, ಇಡ್ಲಿ ಮ ವಡಾ ಹೋಟೆಲ್‌ನಿಂದ ತರಲಾಗಿತ್ತು. ಸೂಸಲಾ, ಮಿರ್ಜಿ ಬಜ್ಜಿ ಮನೆಯಲ್ಲಿ ತಯಾರಿಸಲಾಗಿತ್ತು.



ಬಳಕೆಯಾಗದ ಕೆಕೆಆರ್‌ಡಿಬಿ ಅನುದಾನ: ಸಿದ್ದರಾಮಯ್ಯ

ಕಲಬುರಗಿ: 'ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ₹ 3 ಸಾವಿರ ಕೋಟಿ ಅನುದಾನ ನೀಡಿರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಆದರೆ, ಅದರಲ್ಲಿ ಖರ್ಚಾಗಿದ್ದು ಬರೀ ₹ 213 ಕೋಟಿ. ಉಳಿದ ಶೇ 93 ಅನುದಾನ ನಿರರ್ಥಕವಾಗಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಕಮಲಾಪುರದಲ್ಲಿ ಸೋಮವಾರ ಪ್ರಜಾಧ್ವನಿ ಯಾತ್ರೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕೆಕೆಆರ್‌ಡಿಬಿಗೆ ಕೊಟ್ಟ ಅನುದಾನದಲ್ಲಿ ಶೇ 7.1ರಷ್ಟು ಹಣ ಮಾತ್ರ ಖರ್ಚಾಗಿದೆ. ಶೇ 93ರಷ್ಟು ಅನುದಾನ ಬಳಕೆಗೆ ಕ್ರಿಯಾಯೋಜನೆ ಸಿದ್ಧವಾಗಿಲ್ಲ' ಎಂದರು.

ಇದಕ್ಕೂ ಮುನ್ನ ಕಲಬುರಗಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಮ್ಮ ಸರ್ಕಾರದ ಅವಧಿಯಲ್ಲಿ ಮಾಡಲಾದ ಕಾಮಗಾರಿಗಳನ್ನು ಉದ್ಘಾಟಿಸಲು ಪ್ರಧಾನಿ ಮೋದಿ ಬರುತ್ತಿದ್ದಾರೆ. ಬಿಜೆಪಿಯವರಿಗೆ ಮೋದಿ ಅವರೇ ಬಂಡವಾಳ. ಅವರು ರಾಜ್ಯಕ್ಕೆ ಆಗಾಗ್ಗೆ ಬಂದರೆ, ಲಾಭವಾಗುತ್ತದೆ ಎಂಬ ಭಾವನೆ ಬಿಜೆಪಿ ನಾಯಕರಲ್ಲಿದೆ. ಅವರಿಗೆ ಸೋಲಿನ ಭೀತಿ ಮೂಡಿದೆ' ಎಂದರು.

ಆರ್‌.ಅಶೋಕಗಿಂತ ಮೊದಲು ರಾಜಕಾರಣಕ್ಕೆ ಬಂದಿದ್ದೇನೆ. 1978ರಿಂದ ರಾಜಕಾರಣದಲ್ಲಿ ಇದ್ದೇನೆ. ನನಗಿದು ಕೊನೆಯ ಚುನಾವಣೆಯೆಂದು ಹೇಳಲು ಅಶೋಕಗೆ ಯಾವ ನೈತಿಕತೆ ಇದೆಯೇ' ಎಂದು ಅವರು ಪ್ರಶ್ನಿಸಿದರು.

ವಿಧಾನಸಭಾ ಚುನಾವಣೆಗೆ ಕಾರ್ಯತಂತ್ರ • ಬೆಳಗಾವಿ ಮಹಾನಗರ ಪಾಲಿಕೆ ಮತ್ತೆ ಮರಾಠಿ ಭಾಷಿಗರ ಮಡಿಲಿಗೆ

ಮರಾಠಿಗರಿಗೆ ಪಾಲಿಕೆಯೇ 'ಉಡುಗೊರೆ'

• ಸಂತೋಷ ಈ. ಚಿನಗುಡಿ

ಬೆಳಗಾವಿ: ಬೆಳಗಾವಿ ದಕ್ಷಿಣ ಕ್ಷೇತ್ರದ ಶಾಸಕ ಅಭಯ ಪಾಟೀಲ ಹಾಗೂ ಉತ್ತರ ಕ್ಷೇತ್ರದ ಶಾಸಕ ಅನಿಲ ಬೆನಕೆ ಅವರ ತಂತ್ರದಿಂದಾಗಿ ಮಹಾನಗರ ಪಾಲಿಕೆ ಮತ್ತೆ ಮರಾಠಿ ಭಾಷಿಗರ ಪರವಾಯಿತು.

ವಿಧಾನಸಭಾ ಚುನಾವಣೆಯಲ್ಲಿ ಮರಾಠಿ ಮತಗಳನ್ನು ಸೆಳೆಯುವ ಉದ್ದೇಶದಿಂದಲೇ ಮೇಯರ್, ಉಪ ಮೇಯರ್ ಸ್ಥಾನಗಳನ್ನು ಮರಾಠಿಗರಿಗೆ 'ಉಡುಗೊರೆ' ನೀಡಲಾಗಿದೆ ಎಂಬ ಆರೋಪ ಕೇಳಿಬಂದಿದೆ.

ಪಾಲಿಕೆಯಲ್ಲಿ ಇಷ್ಟು ವರ್ಷಗಳೂ ಭಾಷೆ ಆಧಾರಿತ ಚುನಾವಣೆ ನಡೆಯುತ್ತಿತ್ತು. ಎಲ್ಲ ಸದಸ್ಯರು ಪಕ್ಷೇತರರೇ ಆಗಿರುತ್ತಿದ್ದರು. 2021ರ ಸೆಪ್ಟೆಂಬರ್‌ನಲ್ಲಿ ಮೊದಲ ಬಾರಿಗೆ ಪಕ್ಷಗಳ ಚಿಹ್ನೆ ಅಡಿ ಚುನಾವಣೆ ನಡೆಯಿತು. ಕನ್ನಡ ಹಾಗೂ ಮರಾಠಿ ಭಾಷಿಗರು ಬಿಜೆಪಿ, ಕಾಂಗ್ರೆಸ್ ಸೇರಿಕೊಂಡರು. ಇಷ್ಟು ವರ್ಷದ ನಂತರವಾದರೂ ಬೆಳಗಾವಿಗೆ ಎಂಇಎಸ್ ಮುಷ್ಟಿಯಿಂದ 'ಬಿಡುಗಡೆ' ಸಿಕ್ಕಿತು ಎಂದು ಕನ್ನಡಿಗರು ನಿಟ್ಟುಸಿರು ಬಿಟ್ಟಿದ್ದರು.

ಅರ್ಹರಿದ್ದರೂ ಸಿಗದ ಪಟ್ಟ: 58 ವಾರ್ಡ್‌ಗಳ ಪೈಕಿ ಬಿಜೆಪಿ 35, ಕಾಂಗ್ರೆಸ್ 10, ಪಕ್ಷೇತರ 12 (ನಾಲ್ಕು ಎಂಇಎಸ್ ಸೇರಿ), ಎಂಎಂಐಎಂ 1 ಸ್ಥಾನ ಹೊಂದಿವೆ. ಸ್ಪಷ್ಟ ಬಹುಮತ ಹೊಂದಿದ ಬಿಜೆಪಿಯಲ್ಲಿ 16 ಮಹಿಳಾ ಸದಸ್ಯರಿದ್ದು, 11 ಮಂದಿ ಕನ್ನಡಿಗರಾಗಿದ್ದಾರೆ.

ಕನ್ನಡತಿಯರಾದ ವಾಣಿ ವಿಲಾಸ ಜೋಶಿ, ಸವಿತಾ ಮರುಘೇಂದ್ರ ಪಾಟೀಲ, ದೀಪಾಲಿ ಟೊಪ್ಪಿಗೆ, ಸವಿತಾ ಕಾಂಬಳೆ, ಲಕ್ಷ್ಮೀ ರಾಠೋಡ, ವೀಣಾ ವಿಜಾಪುರ, ರೇಖಾ ಹೂಗಾರ, ರೂಪಾ ಚಿಕ್ಕಲದಿನ್ನಿ ಮೇಯರ್ ಸ್ಥಾನಕ್ಕೆ ಇನ್ನಿಲ್ಲದ ಕಸರತ್ತು ನಡೆಸಿದ್ದರು. ಆದರೆ, ಮರಾಠಿ ಭಾಷಿಗರನ್ನು ಓಲೈಸಲು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಮೇಯರ್ ಹಾಗೂ ಉತ್ತರ ವಿಧಾನಸಭಾ ಕ್ಷೇತ್ರಕ್ಕೆ ಉಪಮೇಯರ್ ಸ್ಥಾನಗಳನ್ನು ಶಾಸಕರೇ ಹಂಚಿಕೊಂಡಿದ್ದಾರೆ ಎನ್ನುವುದು ಕನ್ನಡಿಗರ ದೂರು. ದಕ್ಷಿಣ ಕ್ಷೇತ್ರದಲ್ಲಿ ಸುಮಾರು ಶೇ 60ರಷ್ಟು, ಉತ್ತರ ಕ್ಷೇತ್ರದಲ್ಲಿ ಶೇ 38ರಷ್ಟು ಮರಾಠಿ ಭಾಷಿಗ ಮತದಾರರು ಇದ್ದಾರೆ.

ಶೋಭಾ ಮೇಯರ್, ರೇಷ್ಮಾ ಉಪಮೇಯರ್


ಶೋಭಾ ಸೋಮನಾಚೆ


ರೇಷ್ಮಾ ಪಾಟೀಲ

ಬೆಳಗಾವಿ: ಬೆಳಗಾವಿ ಮೇಯರ್ ಆಗಿ ಬಿಜೆಪಿಯ ಶೋಭಾ ಪಾಯಪ್ಪ ಸೋಮನಾಚೆ ಹಾಗೂ ಉಪಮೇಯರ್ ಆಗಿ ರೇಷ್ಮಾ ಪ್ರವೀಣ ಪಾಟೀಲ ಸೋಮವಾರ ಆಯ್ಕೆಯಾದರು. ಇದೇ ಮೊದಲ ಬಾರಿಗೆ ಮಹಾನಗರ ಪಾಲಿಕೆ ಸಂಪೂರ್ಣವಾಗಿ ಬಿಜೆಪಿ ತೆಕ್ಕೆಗೆ ಬಂದಿದೆ.

ಮೇಯರ್ ಸ್ಥಾನ ಸಾಮಾನ್ಯ ಮಹಿಳೆ, ಉಪಮೇಯರ್ ಸ್ಥಾನ ಹಿಂದುಳಿದ ವರ್ಗ–ಬಿ ಮಹಿಳೆಗೆ ಮೀಸಲಾಗಿತ್ತು. 57ನೇ ವಾರ್ಡ್‌ನ ಸದಸ್ಯೆ ಶೋಭಾ ಒಬ್ಬರೇ ಮೇಯರ್ ಸ್ಥಾನದ ಉಮೇದುವಾರಿಕೆಗೆ ನಾಮಪತ್ರ ಸಲ್ಲಿಸಿದರು. ಅವಿರೋಧ ಆಯ್ಕೆ ಎಂದು ಘೋಷಿಸಲಾಯಿತು.

ಉಪಮೇಯರ್ ಸ್ಥಾನಕ್ಕಾಗಿ ನಡೆದ ಚುನಾವಣೆಯಲ್ಲಿ ಬಿಜೆಪಿಯ ರೇಷ್ಮಾ 42 ಮತಗಳನ್ನು ಹಾಗೂ ಎಂಇಎಸ್ ಬೆಂಬಲಿತ ವೈಶಾಲಿ ಭಾತಖಾಂಡೆ ಕೇವಲ 4 ಮತಗಳಿಸಿದರು. 38 ಮತಗಳ ಭರ್ಜರಿ ಅಂತರದಿಂದ ರೇಷ್ಮಾ ಆಯ್ಕೆಯಾದರು.

10 ಸ್ಥಾನ ಹೊಂದಿದ ಕಾಂಗ್ರೆಸ್ ಸದಸ್ಯರು ಮತದಾನ ಕಾಲಕ್ಕೆ ಹೊರನಡೆದರು.

ಮರಾಠಿ ಲಿಪಿ; ಕನ್ನಡದಲ್ಲಿ ಭಾಷಣ

ಮೇಯರ್ ಆಗಿ ಆಯ್ಕೆಯಾದ ಬಳಿಕ ಶೋಭಾ ಸೋಮನಾಚೆ ಅವರು ಕನ್ನಡದಲ್ಲಿ ಭಾಷಣ ಮಾಡಿದರು. ಆದರೆ ಅವರ ಭಾಷಣವು ಮರಾಠಿ ಲಿಪಿಯಲ್ಲಿ ಬರೆದದ್ದಾಗಿತ್ತು. 'ಜನರ ವಿಶ್ವಾಸ ಗಳಿಸಿ, ಅಭಿವೃದ್ಧಿ ಕಡೆಗೆ ಗಮನ ಕೊಡುವುದಾಗಿ' ಹೇಳಿದರು.

ನಾಡದ್ರೋಹಿ ಘೋಷಣೆ: ಚುನಾವಣೆಗೂ ಮುನ್ನ ಎಂಇಎಸ್ ಬೆಂಬಲಿತ ವೈಶಾಲಿ ಭಾತಖಾಂಡೆ ಹಾಗೂ ಇತರ ಇಬ್ಬರು ಸದಸ್ಯರು ನಾಡದ್ರೋಹಿ ಘೋಷಣೆ ಕೂಗಿದರು. ಬೆಳಗಾವಿ, ಬೀದರ್, ಭಾಲ್ಕಿ, ನಿಪ್ಪಾಣಿ, ಖಾನಾಪುರ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಒತ್ತಾಯಿಸಿದರು.

> **ಮೇಯರ್ ಅಥವಾ ಉಪಮೇಯರ್, ಒಂದು ಸ್ಥಾನವನ್ನಾದರೂ ಕನ್ನಡಿಗರಿಗೆ ಕೊಡಬೇಕಿತ್ತು. ಅವಕಾಶವಿದ್ದೂ ಬಿಜೆಪಿ ನಾಯಕರು ಉದ್ದೇಶಪೂರ್ವಕ ಕೈತಪ್ಪಿಸಿದ್ದು ಬೇಸರ ತಂದಿದೆ**
> **ಅಶೋಕ ಚಂದರಗಿ,** ಅಧ್ಯಕ್ಷ, ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ

> **ಬಿಜೆಪಿಯು ರಾಷ್ಟ್ರೀಯತೆ, ಹಿಂದುತ್ವವನ್ನೇ ಪಾಲಿಸುತ್ತದೆ. ಕನ್ನಡ– ಮರಾಠಿ ಮಾನದಂಡ ಇಲ್ಲ. ಅಭಿವೃದ್ಧಿಯೇ ಮೂಲಮಂತ್ರ**
> **ಅಭಯ ಪಾಟೀಲ,** ಶಾಸಕ

ಲಂಚ: ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮೂವರ ಬಂಧನ


ಚಂದ್ರಶೇಖರ್


ಚೆಲುವಾಂಬ


ತಿರುಮಲ

ಮಡಿಕೇರಿ: ಸಹಾಯಧನ ಮಂಜೂರು ಮಾಡಲು ಇಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕಚೇರಿಯಲ್ಲೇ ₹ 10 ಸಾವಿರ ಲಂಚ ಪಡೆಯುತ್ತಿದ್ದ ಜಿಲ್ಲಾ ವ್ಯವಸ್ಥಾಪಕ ಚಂದ್ರಶೇಖರ್, ಕಚೇರಿ ವ್ಯವಸ್ಥಾಪಕಿ ಚೆಲುವಾಂಬ ಹಾಗೂ ಚಾಲಕ ತಿರುಮಲ ಅವರನ್ನು ಸೋಮವಾರ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ಮಹಿಳೆಯೊಬ್ಬರು ಕೋಳಿ ಅಂಗಡಿಗಾಗಿ ಸ್ವಯಂಉದ್ಯೋಗ ಯೋಜನೆಯಡಿ ಸಾಲ ಪಡೆದಿದ್ದು, ಮೊದಲ ಕಂತಿನ ಸಹಾಯಧನ ಹಣ ಪಡೆದಿದ್ದರು. 2ನೇ ಕಂತಿನ ₹ 1 ಲಕ್ಷವನ್ನು ಮಂಜೂರು ಮಾಡಲು ಆರೋಪಿಗಳು ₹ 10 ಸಾವಿರ ಕೊಡಬೇಕೆಂದಿದ್ದರು. ಮಹಿಳೆಯ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಮೂವರನ್ನೂ ಬಂಧಿಸಲಾಯಿತು' ಎಂದು ಲೋಕಾಯುಕ್ತ ಮೈಸೂರು ವಿಭಾಗದ ಎಸ್‌.ಪಿ.ಸುರೇಶ್ ಬಾಬು ತಿಳಿಸಿದರು.

ಬ್ರಾಹ್ಮಣರನ್ನು ನಿಂದಿಸಿಲ್ಲ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಬ್ರಾಹ್ಮಣ ಸಮುದಾಯವನ್ನು ನಾನು ನಿಂದಿಸಿಲ್ಲ. ಮರಾಠಿ ಪೇಶ್ವೆಗಳ ವಂಶವಾಹಿ (ಡಿಎನ್‌ಎ) ಇರುವ ವ್ಯಕ್ತಿಯನ್ನು ಮುಖ್ಯಮಂತ್ರಿ ಮಾಡಲು ಬಿಜೆಪಿ ಮತ್ತು ಆರ್‌ಎಸ್‌ಎಸ್ ಹೊರಟಿವೆ ಎಂದಷ್ಟೇ ಹೇಳಿದ್ದೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರ ಸಭೆಯಲ್ಲಿ ಸೋಮವಾರ ಮಾತನಾಡಿದ ಅವರು, 'ಯಾವುದೇ ಸಮುದಾಯಕ್ಕೂ ನಾನು ಅಗೌರವ ತೋರಿಲ್ಲ. ಪೇಶ್ವೆಗಳ ಡಿಎನ್‌ಎ ಇರುವ ವ್ಯಕ್ತಿಯನ್ನು ಮುಖ್ಯಮಂತ್ರಿ ಮಾಡಲು ಬಿಜೆಪಿಯವರು ಹುನ್ನಾರ ನಡೆಸುತ್ತಿರುವ ಬಗ್ಗೆ ಮಾತನಾಡಿದ್ದೇನೆ. ಆದರೆ, ನನ್ನ ಹೇಳಿಕೆಯನ್ನು ತಿರುಚುವ ಪ್ರಯತ್ನ ವ್ಯವಸ್ಥಿತವಾಗಿ ನಡೆಯುತ್ತಿದೆ. ನಾನು ಎತ್ತಿದ ವಿಷಯದ ಬಗ್ಗೆ ಚರ್ಚೆ ಮಾಡುತ್ತಿಲ್ಲ. ನನ್ನ ಪ್ರಶ್ನೆಯ ಬಗ್ಗೆ ಗಾಬರಿ ಏಕೆ' ಎಂದು ಕೇಳಿದರು.

'ಕರ್ನಾಟಕದ ಬ್ರಾಹ್ಮಣರು ಸುಸಂಸ್ಕೃತರು. ಅವರ ಬಗ್ಗೆ ನನಗೆ ಗೌರವವಿದೆ. ಬ್ರಾಹ್ಮಣ ಸಮಾಜ ಮತ್ತು ಶೃಂಗೇರಿ ಮಠದ ಬಗ್ಗೆ ನಮ್ಮ ಕುಟುಂಬ ಗೌರವದಿಂದ ನಡೆದುಕೊಂಡು ಬಂದಿದೆ. ಬ್ರಾಹ್ಮಣ ಮಹಾಸಭಾಕ್ಕೆ ನಿವೇಶನ ನೀಡಿರುವುದು, ಬ್ರಾಹ್ಮಣ ಅಭಿವೃದ್ಧಿ ನಿಗಮ ಸ್ಥಾಪಿಸಿರುವುದು ನಾನು ಅಧಿಕಾರದಲ್ಲಿದ್ದಾಗ. ಇದನ್ನು ಬ್ರಾಹ್ಮಣ ಮಹಾಸಭಾ ಅರ್ಥ ಮಾಡಿಕೊಳ್ಳಬೇಕು' ಎಂದು ಹೇಳಿದರು.

'ಬ್ರಾಹ್ಮಣರು ಮುಖ್ಯಮಂತ್ರಿಯಾಗುವುದಕ್ಕೆ ನನ್ನ ಸಹಮತ, ಬೆಂಬಲ ಇದೆ. ಆದರೆ, ಕನ್ನಡ ಪರಂಪರೆ, ಸಂಸ್ಕೃತಿಯ ಮೇಲೆ ದಾಳಿಮಾಡಿದವರ ಡಿಎನ್‌ಎ ಇರುವ ವ್ಯಕ್ತಿಯನ್ನು ಮುಖ್ಯಮಂತ್ರಿ ಮಾಡಬೇಕೆ? ಎಂಬುದು ನನ್ನ ಪ್ರಶ್ನೆ. ಶೃಂಗೇರಿಯ ಚಂದ್ರಮೌಳೇಶ್ವರ ದೇವಸ್ಥಾನ ಒಡೆದವರು, ಮಹಾತ್ಮ ಗಾಂಧಿಯನ್ನು ಕೊಂದವರು ಪೇಶ್ವೆ ವಂಶಸ್ಥರು. ಅಂತಹ ಡಿಎನ್‌ಎ ಹೊಂದಿರುವ ವ್ಯಕ್ತಿಯನ್ನು ಮುಖ್ಯಮಂತ್ರಿ ಮಾಡುವ ಹುನ್ನಾರದ ಕುರಿತಷ್ಟೇ ಮಾತನಾಡಿದ್ದೆ' ಎಂದರು.

'ನಮ್ಮ ಬ್ರಾಹ್ಮಣರು ಸರ್ವೇ ಜನಾ ಸುಖಿನೋ ಭವಂತು ಎಂದು ಹರಸುತ್ತಾರೆ. ಆದರೆ, ಪೇಶ್ವೆ ಬ್ರಾಹ್ಮಣರು ಸರ್ವನಾಶೋ ಭವಂತು ಎಂದು ಶಪಿಸುತ್ತಾರೆ. ನಮ್ಮದು ಕುವೆಂಪು ಹೇಳಿದಂತಹ ಸರ್ವಜನಾಂಗದ ಶಾಂತಿಯ ತೋಟ' ಎಂದರು.

ಪಾರ್ಥೇನಿಯಂ ಇದ್ದಂತೆ: 'ಒಳ್ಳೆಯ ಬೆಳೆಗಳ ನಡುವೆ ಪಾರ್ಥೇನಿಯಂ ಬೆಳೆದಂತಹ ಸ್ಥಿತಿಯಲ್ಲಿ ಬಿಜೆಪಿ ಇದೆ. ಪ್ರಲ್ಹಾದ ಜೋಶಿ ಪಾರ್ಥೇನಿಯಂ ಇದ್ದಂತೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಡಿಎನ್‌ಎ ಕುರಿತು ಪ್ರಧಾನಿ ಮೋದಿ ಸೇರಿದಂತೆ ಬಿಜೆಪಿ ನಾಯಕರು ಟೀಕೆ ಮಾಡಿಲ್ಲವೆ? ನಾನು ಮಾತನಾಡಿದರೆ ವಿವಾದ ಮಾಡುತ್ತಾರೆ' ಎಂದು ಹೇಳಿದರು.

'ಹತಾಶೆಯಿಂದ ಬ್ರಾಹ್ಮಣ ವಿರೋಧಿ ಹೇಳಿಕೆ'

ಶಿವಮೊಗ್ಗ: 'ಹಾಸನ ಜಿಲ್ಲೆಯ ಏಳು ಕ್ಷೇತ್ರಗಳ ಪೈಕಿ 5ರಲ್ಲಿ ಈ ಬಾರಿ ಬಿಜೆಪಿ ಗೆಲ್ಲಲಿದೆ ಎಂಬ ವರದಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ದೊರೆತಿದೆ. ಇದರಿಂದ ಹತಾಶರಾದಂತಿರುವ ಅವರು ಬ್ರಾಹ್ಮಣ ಸಮುದಾಯದ ವಿರುದ್ಧ ಹೇಳಿಕೆ ನೀಡುತ್ತಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಸೊರಬದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಳೆದ ಬಾರಿ ಬಿಜೆಪಿ ಹಾಸನದಲ್ಲಿ ಗೆದ್ದಿದ್ದನ್ನು ಕುಮಾರಸ್ವಾಮಿ ಅವರಿಗೆ ಅರಗಿಸಿಕೊಳ್ಳಲು ಆಗಿರಲಿಲ್ಲ' ಎಂದು ಛೇಡಿಸಿದರು.

'ಹಾಸನದಿಂದ ಭವಾನಿ ರೇವಣ್ಣ ಅಭ್ಯರ್ಥಿ ಆಗಬೇಕು. ಸೂರಜ್ ರೇವಣ್ಣಗೆ ಪರಿಷತ್ ಟಿಕೆಟ್ , ಪ್ರಜ್ವಲ್ ರೇವಣ್ಣಗೆ ಲೋಕಸಭೆ ಟಿಕೆಟ್ ಮೀಸಲು. ಅನಿತಾ ಕುಮಾರಸ್ವಾಮಿ ರಾಮನಗರ ಬಿಟ್ಟು ಕೊಡಲು ಮುಂದಾಗಿರುವುದು ನಿಖಿಲ್ ಕುಮಾರಸ್ವಾಮಿಗಾಗಿ. ಅದನ್ನೇ ಅವರು ತ್ಯಾಗ ಎಂದು ಕರೆಯುತ್ತಾರೆ. ಜೆಡಿಎಸ್‌ನಲ್ಲಿ ದೊಡ್ಡಗೌಡ್ರು, ಸಣ್ಣಗೌಡ್ರು, ಮರೀಗೌಡ್ರಿಗೆ ಮಾತ್ರ ಅವಕಾಶ ಇರೋದು' ಎಂದು ಸಿ.ಟಿ. ರವಿ ಲೇವಡಿ ಮಾಡಿದರು.

'ಬಿಜೆಪಿಯಲ್ಲಿ ಸಾಮಾನ್ಯ ಕಾರ್ಯಕರ್ತನಿಗೂ ಮುಖ್ಯಮಂತ್ರಿ, ಪ್ರಧಾನಮಂತ್ರಿ ಆಗುವ ಯೋಗ್ಯತೆ ಇದೆ. ಆದರೆ, ಕುಮಾರಸ್ವಾಮಿ ಅವರ ಜೆಡಿಎಸ್‌ನಲ್ಲಿ ಹಾಗಾಗದು' ಎಂದರು.

'ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜಾತಿ ಸಮಾನತೆ ಒಪ್ಪುವುದಿಲ್ಲ. ಹಿಂದುತ್ವ ಎಲ್ಲರಲ್ಲೂ ಸಮಾನತೆ ಬಯಸುತ್ತದೆ. ಅದೇ ಕಾರಣಕ್ಕೆ ಅವರು ಹಿಂದುತ್ವವನ್ನು ಒಪ್ಪುವುದಿಲ್ಲ. ಅವರಿಗೆ ಜಾತೀಯತೆ, ಅಸ್ಪೃಶ್ಯತೆ ಬೇಕು. ಅಂತೆಯೇ ಕೊರಟಗೆರೆಯಲ್ಲಿ ಡಾ.ಜಿ. ಪರಮೇಶ್ವರ್ ಅವರನ್ನು ಸೋಲಿಸುವ ಕೆಲಸ ಮಾಡಿದ್ದರು' ಎಂದು ಟೀಕಿಸಿದರು.

ಬ್ರಾಹ್ಮಣರೇಕೆ ಸಿ.ಎಂ ಆಗಬಾರದು: ಪೇಜಾವರ ಶ್ರೀ

ಮದ್ದೂರು: 'ಬ್ರಾಹ್ಮಣರು ಮುಖ್ಯಮಂತ್ರಿ ಆಗುವುದಾದರೆ ಆಗಲಿ. ಅವರೇಕೆ ಮುಖ್ಯಮಂತ್ರಿಯಾಗಬಾರದು? ಅವರು ಭಾರತದ ಪ್ರಜೆಗಳಲ್ಲವೇ? ಎಂದು ಪೇಜಾವರ ಮಠಾಧೀಶ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಪ್ರಶ್ನಿಸಿದರು.

ಪಟ್ಟಣದ ಶ್ರೀ ಹೊಳೆ ಆಂಜನೇಯ ಸ್ವಾಮಿ ದೇವಾಲಯಕ್ಕೆ ಸೋಮವಾರ ಭೇಟಿ ನೀಡಿ ಮಾತನಾಡಿದ ಅವರು, 'ಹಿಂದಿನಿಂದಲೂ ಬ್ರಾಹ್ಮಣರ ವಿರುದ್ಧದ ಹೇಳಿಕೆಗಳು ಬರುತ್ತಿದ್ದು, ಚುನಾವಣೆ ಸಂದರ್ಭದಲ್ಲಿ ಹೆಚ್ಚಾಗುತ್ತವೆ. ರಾಜ್ಯದಲ್ಲಿ ಬ್ರಾಹ್ಮಣ ಶಾಸಕರೆಷ್ಟಿದ್ದಾರೆ, ಎಷ್ಟು ಮಂದಿಗೆ ಸ್ಪರ್ಧಿಸಲು ಟಿಕೆಟ್ ಸಿಕ್ಕಿದೆ' ಎಂದು ಪ್ರಶ್ನಿಸಿದರು.

'ಬ್ರಾಹ್ಮಣರು ಕಡಿಮೆ ಇದ್ದಾರೆಂಬ ಕಾರಣಕ್ಕೆ ಏನು ಮಾತನಾಡಿದರೂ ನಡೆಯುತ್ತದೆ ಎಂದು ಮಾತನಾಡುತ್ತಾರೆ. ಹಿನ್ನೆಲೆ ಅಥವಾ ಪುರಾವೆ ಇಟ್ಟುಕೊಂಡು ಮಾತನಾಡಬೇಕು' ಎಂದು ಪ್ರತಿಪಾದಿಸಿದರು.

'ಒಬ್ಬ ವ್ಯಕ್ತಿ ಮಾಡಿದ ತಪ್ಪಿಗೆ ಆತನ ಇಡೀ ಸಮಾಜವನ್ನು ದೂಷಿಸುವುದಾದರೆ, ಇತರೆ ಸಮಾಜದಲ್ಲಿ ನಡೆದ ವಿಚಾರವನ್ನ ಏಕೆ ಸಾಮೂಹಿಕರಣ ಮಾಡುತ್ತಿಲ್ಲ? ಪ್ರಜಾಪ್ರಭುತ್ವದಲ್ಲಿ ಯಾರಿಗೂ ಅನ್ಯಾಯವಾಗಬಾರದು. ಯಾವುದೇ ಧರ್ಮವನ್ನು ದೂಷಿಸುವುದು ಸರಿಯಲ್ಲ. ಯಾರಿಗೂ ಅನ್ಯಾಯವಾಗಬಾರದು' ಎಂದರು.

ಕುಮಾರಸ್ವಾಮಿ ಹೇಳಿಕೆಗೆ ಬ್ರಾಹ್ಮಣ ಮಹಾಸಭಾ ಖಂಡನೆ

ಬೆಂಗಳೂರು: ಜೆಡಿಎಸ್ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ವಿರುದ್ಧ ಮಾಡಿದ ಟೀಕೆಗಳನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಖಂಡಿಸಿದೆ.

ಗಾಂಧೀಜಿ ಅವರನ್ನು ಕೊಂದ ಸಮುದಾಯ, ಮಹಾರಾಷ್ಟ್ರ ಮೂಲದ ಪೇಶ್ವೆ ವಂಶಸ್ಥರು ಎಂದು ಟೀಕಿಸಿದ್ದಾರೆ. ಜೋಶಿ ಅವರು ದೇಶಸ್ಥರಲ್ಲ, ಅವರು ಮಾಧ್ವ ಸಂಪ್ರದಾಯಕ್ಕೆ ಸೇರಿದ ಉತ್ತರಾದಿಮಠದ ಅನುಯಾಯಿಗಳು. ಉತ್ತರ ಕರ್ನಾಟಕದ ಮೂಲದವರೇ ವಿನಃ ಮಹಾರಾಷ್ಟ್ರಕ್ಕೆ ಸೇರಿದವರಲ್ಲ. ಅರ್ಹತೆಯೇ ಮಾನದಂಡವಾದಲ್ಲಿ ಜೋಶಿ ಅವರು ಸಹ ಮುಖ್ಯಮಂತ್ರಿ ಸ್ಥಾನಕ್ಕೆ ಸೂಕ್ತ ಅಭ್ಯರ್ಥಿ ಎಂದು ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ಹೇಳಿದ್ದಾರೆ.

ಹಿಂದೆ ನಡೆದು ಹೋದ ಗಾಂಧಿ ಹತ್ಯೆಯನ್ನೇ ಗುರಿಯಾಗಿಟ್ಟುಕೊಂಡು ಚಿತ್ಪಾವನ ಬ್ರಾಹ್ಮಣ ಸಮುದಾಯವನ್ನು ದೂಷಿಸುವುದು ಸರಿಯಲ್ಲ. ನೂರಾರು ವರುಷಗಳ ಹಿಂದೆಯೇ ಕರ್ನಾಟಕಕ್ಕೆ ಬಂದು ನೆಲೆಸಿರುವ ದೇಶಸ್ಥ ಬ್ರಾಹ್ಮಣರು ನಮ್ಮ ನಾಡುನುಡಿ ಜತೆ ಬೆರೆತು ಕನ್ನಡಿಗರೇ ಆಗಿದ್ದಾರೆ. ಉದಾಹರಣೆಗೆ ವರ ಕವಿ ಬೇಂದ್ರೆ, ಆಲೂರ ವೆಂಕಟರಾಯರು ಪ್ರಮುಖರು. ದಾರಿ ತಪ್ಪಿದ ನಾಥುರಾಂ ಗೋಡ್ಸೆ ಎಂಬ ದೇಶ ಭಕ್ತನೊಬ್ಬ ಗಾಂಧಿ ಕೊಂದನೆಂದು ಆ ಸಮುದಾಯಕ್ಕೆ ಸೇರಿದ ಎಲ್ಲರನ್ನು ದೋಷಿಗಳಂತೆ ನೋಡುವುದು ಸಮಂಜಸವಲ್ಲ ಎಂದಿದ್ದಾರೆ.

ಕುಮಾರಸ್ವಾಮಿ, ದೇವೇಗೌಡರ ಕುಟುಂಬ ಸನಾತನ ಧರ್ಮಕ್ಕೆ ಗೌರವ ಕೊಟ್ಟಿದ್ದಾರೆ. ಶೃಂಗೇರಿ ಮಠದ ಪರಂಪರೆಯಲ್ಲಿ ಭಕ್ತಿ, ಶ್ರದ್ಧೆ ಹೊಂದಿದ್ದಾರೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಕ್ಕೆ ನಗರದ ಮಧ್ಯ ಭಾಗದಲ್ಲಿ ನಿವೇಶನ ಮಂಜೂರು, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ರಚನೆ ಮಾಡಿದ್ದಾರೆ. ಹಾಗಾಗಿ, ಅವರ ಬಗ್ಗೆ ವಿಪ್ರ ಸಮುದಾಯಕ್ಕೆ ಸದಾಶಯವಿದೆ. ರಾಜಕೀಯ ವಿರೋಧಿಗಳ ಟೀಕೆಯ ಭರದಲ್ಲಿ ಸಮುದಾಯದ ಹೆಸರು ಬಳಕೆ ಮಾಡುವುದು ವ್ಯಕ್ತಿತ್ವಕ್ಕೆ ಗೌರವ ತರುವ ವಿಷಯವಲ್ಲ ಎಂದು ಹೇಳಿದ್ದಾರೆ. ಕುಮಾರಸ್ವಾಮಿ ಎಲ್ಲಾ ಸಮುದಾಯಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗಬೇಕು ಎಂದರು.

ಬಸವನಗುಡಿ ಮಹಾಸಭಾ ಖಂಡನೆ: ಎಚ್‌.ಡಿ.ಕುಮಾರಸ್ವಾಮಿ ಹೇಳಿಕೆಯನ್ನು ಬಸವನಗುಡಿ ಬ್ರಾಹ್ಮಣ ಮಹಾಸಭಾ ಖಂಡಿಸಿದೆ.

ಸ್ವತಂತ್ರ್ಯ ಹೋರಾಟದಲ್ಲಿ ಬ್ರಾಹ್ಮಣರ ಕೊಡುಗೆ ಅಪಾರ. ಜಾತ್ಯತೀತ ಜನತಾದಳ ಎಂದು ಹೆಸರು ಇಟ್ಟುಕೊಂಡು ಜಾತಿ ರಾಜಕಾರಣ ಮಾಡುತ್ತಿರುವುದು ಸರಿಯಲ್ಲ. ಬ್ರಾಹ್ಮಣ ಸಮುದಾಯದ ಒಳಪಂಗಡಗಳ ಮಧ್ಯೆ ಮನಸ್ತಾಪ ಸೃಷ್ಟಿಸುವ ಉದ್ದೇಶ ಒಳ್ಳೆಯದಲ್ಲ, ಅದರಲ್ಲಿ ಯಶಸ್ವಿಯಾಗುವುದಿಲ್ಲ. ತಕ್ಷಣವೇ ಸಮುದಾದ ಕ್ಷಮೆ ಕೋರಬೇಕು ಎಂದು ಬಸವನಗುಡಿ ಬ್ರಾಹ್ಮಣ ಮಹತ್ವದ ಪ್ರಧಾನ ಕಾರ್ಯದರ್ಶಿ ರಥಯಾತ್ರೆ ಸುರೇಶ್ ಆಗ್ರಹಿಸಿದ್ದಾರೆ.

ವೇತನ ಬಾಕಿ: ಗ್ರಾ.ಪಂ ಸಿಬ್ಬಂದಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮ ಪಂಚಾಯಿತಿ ಸಿಬ್ಬಂದಿಯನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸಿ 'ಸಿ' ಮತ್ತು 'ಡಿ' ದರ್ಜೆ ಸ್ಥಾನಮಾನ ನೀಡಬೇಕು' ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯದ ಗ್ರಾಮ ಪಂಚಾಯಿತಿ ಸಿಬ್ಬಂದಿ ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಸಿಬ್ಬಂದಿ, ಬೇಡಿಕೆಗಳ ಈಡೇರಿಕೆಗಾಗಿ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಶ್ರೇಯೋಭಿವೃದ್ಧಿ ಸಂಘದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

'ಗ್ರಾಮ ಪಂಚಾಯಿತಿ ಸಿಬ್ಬಂದಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುತ್ತಿದ್ದಾರೆ. ಗುಮಾಸ್ತ, ಬಿಲ್ ಕಲೆಕ್ಟರ್, ಸ್ವಚ್ಛತಾ ಸಿಬ್ಬಂದಿ, ಡಾಟಾ ಎಂಟ್ರಿ ಆಪರೇಟರ್, ಚಾಲಕರು ಸೇರಿ ಎಲ್ಲ ಸಿಬ್ಬಂದಿ ಹುದ್ದೆಗಳನ್ನು ಮೇಲ್ದರ್ಜೆಗೇರಿಸಬೇಕು. ಅವರಿಗೆಲ್ಲ ವೇತನ ಶ್ರೇಣಿ ನಿಗದಿಪಡಿಸಿ, ಸೇವಾ ಭದ್ರತೆ ಒದಗಿಸಬೇಕು. ನಿವೃತ್ತಿ ವೇತನ ಸೌಲಭ್ಯ ಕಲ್ಪಿಸಬೇಕು' ಎಂದು ಆಗ್ರಹಿಸಿದರು.

'29 ಇಲಾಖೆಗಳ ಕೆಲಸಗಳನ್ನು ಮಾಡುತ್ತಿರುವ ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಹಲವು ತಿಂಗಳಿನಿಂದ ವೇತನ ನೀಡಿಲ್ಲ. ಸಿಬ್ಬಂದಿ ಹಾಗೂ ಅವರ ಕುಟುಂಬದವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ₹ 500 ಕೋಟಿ ವೇತನ ಬಾಕಿ ಇರುವ ಮಾಹಿತಿ ಇದ್ದು, ಅದನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದರು.

ಭ್ರಷ್ಟಾಚಾರ: ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಶ್ರೀರಾಮಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್, 'ಸರ್ಕಾರದಲ್ಲಿ ಭ್ರಷ್ಟಾಚಾರ ಅತಿಯಾಗಿದೆ. ಲಂಚವಿಲ್ಲದೇ ಜನಪ್ರತಿನಿಧಿ, ಕಚೇರಿಯಿಂದ ಒಂದೂ ಕೆಲಸವಾಗದು' ಎಂದರು.



ಗ್ರಾಮ ಪಂಚಾಯಿತಿ ಸಿಬ್ಬಂದಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

'ಪಿಂಚಣಿ ನೀಡುವ ಪ್ರಸ್ತಾವ'

'ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಪಿಂಚಣಿ ಹಾಗೂ ಉಪಧನ (ಗ್ರಾಚ್ಯುಟಿ) ನೀಡಲು ಕ್ರಮ ಕೈಗೊಳ್ಳಲಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕ ಎಂ.ಆರ್. ಏಕಾಂತಪ್ಪ ತಿಳಿಸಿದರು. ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿದ ಅವರು, 'ಪಿಂಚಣಿ ಹಾಗೂ ಉಪಧನದ ವಾರ್ಷಿಕ ವೆಚ್ಚದ ಪ್ರಸ್ತಾವ ತಯಾರಿಸಿ ಹಣಕಾಸು ಇಲಾಖೆಗೆ ಸಲ್ಲಿಸಲಾಗಿದೆ. ಮನವಿಪತ್ರದಲ್ಲಿರುವ ಉಳಿದ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು' ಎಂದರು.

ಕಳೆದ ಚುನಾವಣೆಯ 7 ತಪ್ಪುಗಳನ್ನು ಪುನರಾವರ್ತಿಸದಿರಲು ತೀರ್ಮಾನ

ಒಳ ಒಪ್ಪಂದಕ್ಕೆ ಲಗಾಮು: ಬಿಜೆಪಿ ಮುಂದಡಿ

ಬೆಂಗಳೂರು: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಹುಮತದಿಂದ ವಂಚಿತರಾಗಲು 7 ಕಾರಣ ಗುರುತಿಸಿರುವ ಬಿಜೆಪಿ, ಈ ಬಾರಿ ಅದೇ ತಪ್ಪು ಪುನರಾವರ್ತನೆ ಆಗದಿರುವಂತೆ ಜಾಗ್ರತೆವಹಿಸಿ ಕಠಿಣ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಿದೆ. 'ಮುಖ್ಯವಾಗಿ ಜೆಡಿಎಸ್ ಜತೆ ಒಳ ಒಪ್ಪಂದ ಮಾಡಿಕೊಳ್ಳಬಾರದು. 'ಸ್ನೇಹ'ದ ಕಾರಣಗಳಿಗಾಗಿ ವಿರೋಧಿ ಪಕ್ಷಗಳಲ್ಲಿರುವ ಪ್ರಮುಖ ನಾಯಕರ ಗೆಲುವಿಗಾಗಿ ರಾಜೀ ಮಾಡಿಕೊಳ್ಳುವುದನ್ನು ಬಿಡಬೇಕು. ಯಾವುದೇ ನಾಯಕರಾದರೂ ಸರಿ ಅವರ ವಿರುದ್ಧ ಕಠಿಣ ಸ್ಪರ್ಧೆ ಒಡ್ಡಿ ಪರಾಭವಗೊಳಿಸಲೇಬೇಕು ಎಂಬ ಸೂಚನೆ ವರಿಷ್ಠರು ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಕಾರಣಗಳೇನು?

ಪ್ರಜಾ ಮತ ಜನತಂತ್ರದ ಹಬ್ಬ ಕರ್ನಾಟಕ ವಿಧಾನಸಭಾ ಚುನಾವಣೆ - 2023

1 ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರು, ಬೆಳಗಾವಿ, ಬಳ್ಳಾರಿ, ವಿಜಯಪುರ (ಬಿಜಾಪುರ), ಬೀದರ್ ಜಿಲ್ಲೆಗಳಲ್ಲಿ ಚುನಾವಣೆ ಸರಿಯಾಗಿ ನಿರ್ವಹಿಸದ ಕಾರಣ, ಆ ಜಿಲ್ಲೆಗಳಲ್ಲಿ ಬಿಜೆಪಿ ಗೆಲ್ಲಬಹುದಾಗಿದ್ದ ಹಲವು ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಹೊಂದಾಣಿಕೆ ರಾಜಕಾರಣ ಮತ್ತು ಸಂಘಟನೆಗಳು ಹೆಚ್ಚು ಆಸಕ್ತಿ ವಹಿಸದ ಕಾರಣ ಪಕ್ಷದ ಅಭ್ಯರ್ಥಿಗಳಿಗೆ ಸೋಲುಂಟಾಯಿತು.

2 ಎಂಟ ರಿಂದ ಹತ್ತು ಕ್ಷೇತ್ರಗಳಲ್ಲಿ ಗೆಲ್ಲಬಹುದಾದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ಬದಲು ಕೆಲವು ನಾಯಕರು ವಿವಿಧ ಕಾರಣಗಳಿಗೆ ತಮಗೆ ಬೇಕಾದವರನ್ನು ಅಭ್ಯರ್ಥಿಗಳನ್ನಾಗಿ ಕಣಕ್ಕೆ ಇಳಿಸಿದರು. ಇದರಿಂದ ಟಿಕೆಟ್ ಸಿಗದವರು ಮತ್ತು ಪಕ್ಷದ ಕಾರ್ಯಕರ್ತರು ಸರಿಯಾಗಿ ಕೆಲಸ ಮಾಡಲಿಲ್ಲ.

3 ಕೆಲವರಿಗೆ ಕೊನೆ ಕ್ಷಣದಲ್ಲಿ 'ಬಿ' ಫಾರ್ಮ್ ಕೊಟ್ಟಿದ್ದರಿಂದ ಸಾಕಷ್ಟು ಅಭ್ಯರ್ಥಿಗಳಿಗೆ ತಯಾರಿ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಒಂದು ತಿಂಗಳಿಗೂ ಮೊದಲೇ ಟಿಕೆಟ್ ಖಚಿತಪಡಿಸಿದ್ದರೆ, ಹೆಚ್ಚು ವ್ಯವಸ್ಥಿತವಾಗಿ ಪ್ರಚಾರ ನಡೆಸಲು ಸಾಧ್ಯವಾಗುತ್ತಿತ್ತು.

4 ಸಂಸದ ಅನಂತ ಕುಮಾರ್ ಹೆಗಡೆ ಅವರು ಸಂವಿಧಾನದ ಕುರಿತು ನೀಡಿದ ಹೇಳಿಕೆಯನ್ನು ತನಗೆ ಬೇಕಾದಂತೆ ಕಾಂಗ್ರೆಸ್ ಪಕ್ಷವು ತಿರುಚಿ ಪರಿಶಿಷ್ಟ ಜಾತಿಯವರೇ ಹೆಚ್ಚಾಗಿರುವ ಸುಮಾರು 60 ವರ್ಷ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಿತು. ಇದು ಬಿಜೆಪಿಗೆ ಹೊಡೆತ ನೀಡಿತು.

5 ಪಕ್ಷದ ಅಭ್ಯರ್ಥಿಗಳ ಖರ್ಚಿಗಾಗಿ ನೀಡಿದ ಹಣ ಸಮರ್ಪಕವಾಗಿ ನಿರ್ವಹಣೆ ಆಗಲಿಲ್ಲ.

6 ಹಳೇ ಮೈಸೂರು ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಹೆಚ್ಚು ಪ್ರಯತ್ನ ಹಾಕಲಿಲ್ಲ. ಅಲ್ಲಿ ಹೆಚ್ಚಿನ ಪ್ರಯತ್ನ ಹಾಕಿದ್ದರೆ ಇನ್ನೂ ಕೆಲವು ಕ್ಷೇತ್ರಗಳನ್ನು ಗೆಲ್ಲಬಹುದಿತ್ತು. ಸುಮಾರು ಕ್ಷೇತ್ರಗಳಲ್ಲಿ 500 ರಿಂದ 1500 ಮತಗಳ ಅಂತರದಲ್ಲಿ ಸೋಲಬೇಕಾಯಿತು.

7 ಜೆಡಿಎಸ್ ಜತೆ ಹಲವು ಕ್ಷೇತ್ರಗಳಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದು ಹಿನ್ನಡೆಯಾಯಿತು. ಆರಂಭದಲ್ಲಿ ಜೆಡಿಎಸ್ ವಿರುದ್ಧ ಧೋರಣೆ ತಳೆಯಲಾಗಿತ್ತು. ಸರ್ಕಾರ ರಚಿಸಲು ಜೆಡಿಎಸ್ ನೆರವು ಬೇಕಾಗಬಹುದು ಎಂದು ಭಾವಿಸಿದ ಜೆಡಿಎಸ್ ಜತೆ ಒಲವು ತೋರಿತು. ಪ್ರಧಾನಿ ಮೋದಿಯವರು ಎಚ್‌.ಡಿ.ದೇವೇಗೌಡರನ್ನು ಹೊಗಳಿ ಹೇಳಿಕೆಯನ್ನೂ ನೀಡಿದ್ದರು. ಆದರೆ, ಚುನಾವಣೆ ಬಳಿಕ ಜೆಡಿಎಸ್ ಕಾಂಗ್ರೆಸ್ ಪಕ್ಷದ ತೆಕ್ಕೆಗೆ ಜಾರಿತು.

ಇವೆಲ್ಲ ಅಂಶವನ್ನು ಮನಗಂಡಿರುವ ಬಿಜೆಪಿ ಈ ಬಾರಿ ಯಾವುದೇ ಕಾರಣಕ್ಕೂ ಯಾವುದೇ ಪಕ್ಷ, ನಾಯಕರ ಜತೆ ಒಳ ಒಪ್ಪಂದ ಮಾಡಬಾರದು. ಪಕ್ಷದ ನೆಲೆ ಇಲ್ಲದ ಕಡೆಗಳಲ್ಲೂ ಪ್ರಭಾವಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಜೆಡಿಎಸ್– ಕಾಂಗ್ರೆಸ್ ಅಭ್ಯರ್ಥಿಗಳನ್ನು ಮಣಿಸಲು ಮಾನಸಿಕವಾಗಿ ಸಿದ್ಧವಾಗಿದೆ ಎಂದು ಮೂಲಗಳು ಹೇಳಿವೆ.

> **ಯಡಿಯೂರಪ್ಪ ಸೇರಿದಂತೆ ಯಾರೇ ನಮ್ಮ ಪ್ರಜಾಧ್ವನಿ ಯಾತ್ರೆ ಪಂಕ್ಚರ್ ಆಗಲಿದೆ ಎಂದು ಹೇಳಲಿ. ಅಂತಿಮವಾಗಿ ಯಾರು ಪಂಕ್ಚರ್ ಆಗಲಿದ್ದಾರೆ ಎಂದು ಮತದಾರರು ತೀರ್ಮಾನ ಮಾಡುತ್ತಾರೆ**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಮಂಗಳವಾರ, ಫೆಬ್ರುವರಿ 7, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 38 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ ಮಕ್ಕಳು ಪರೀಕ್ಷೆಗೆ ಸಿದ್ಧತೆ ನಡೆಸಲು ಬೇಕಾದ ವಾತಾವರಣ ಮನೆಯಲ್ಲಿರಲಿ



ಆಳ-ಅಗಲ ಬೀಜೋ ಮಾರುಕಟ್ಟೆಯಲ್ಲಿ ಕಾಸು ಮಾಡುವ ತಂತ್ರ
ಅವಧಿಗೆ ಮೊದಲೇ ಸಾಲ ತೀರಿಸಲಿರುವ ಅದಾನಿ ಸಮೂಹ 10
ಮೂರನೇ ಬಾರಿಗೆ 'ಗ್ರ್ಯಾಮಿ' ಗೆದ್ದ ರಿಕಿ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,506	17,765	₹59,280 (ಬೆಂಗಳೂರು)	₹69,800 (ಬೆಂಗಳೂರು)	82.76

ಕಲಾವಿದ ಬಿ.ಕೆ.ಎಸ್. ವರ್ಮಾ ಇನ್ನಿಲ್ಲ



ಬೆಂಗಳೂರು: ಅಂತರ ರಾಷ್ಟ್ರೀಯ ಚಿತ್ರ ಕಲಾವಿದ ಬಿ.ಕೆ.ಎಸ್. ವರ್ಮಾ (74) ಅವರು ಅನಾರೋಗ್ಯ ದಿಂದಾಗಿ ಸೋಮವಾರ ಬೆಳಿಗ್ಗೆ ನಿಧನರಾದರು.

11ನೇ ಪುಟ ನೋಡಿ

ನುಡಿನಮನ 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪರಿಹಾರ ಕಾರ್ಯಕ್ಕೆ ಸವಾಲಾದ ಪ್ರತಿಕೂಲ ಹವಾಮಾನ

ಟರ್ಕಿ, ಸಿರಿಯಾ: ಭೂಕಂಪಕ್ಕೆ 2,700ಕ್ಕೂ ಅಧಿಕ ಸಾವು

ಅಂಕಾರಾ/ಅಜ್ಮರಿನ್/ಇಸ್ತಾಂಬುಲ್ (ಎಪಿ/ರಾಯಿಟರ್ಸ್/ಎಎಫ್‌ಪಿ): ಟರ್ಕಿಯ ಆಗ್ನೇಯ ಭಾಗದ ನೆರೆಯ ಸಿರಿಯಾದ ಉತ್ತರ ಭಾಗ ದಲ್ಲಿ ಸೋಮವಾರ ನಸುಕಿನಲ್ಲಿ ಸಂಭವಿಸಿದ ಪ್ರಬಲ ಭೂಕಂಪಗಳಿಂದ 2,762 ಜನರು ಮೃತಪಟ್ಟಿದ್ದಾರೆ. ಎಂಟು ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಸಾವಿರಾರು ಕಟ್ಟಡಗಳು, ಮನೆಗಳು ನೆಲಸಮವಾಗಿವೆ.

ರಿಕ್ಟರ್ ಮಾಪಕದಲ್ಲಿ 7.8 ತೀವ್ರತೆಯ ಪ್ರಬಲ ಕಂಪನ ಮೊದಲಿಗೆ ನಸುಕಿನಲ್ಲಿ ಸಂಭವಿಸಿತು. ಇದಾದ ಕೆಲವು ಗಂಟೆಗಳ ನಂತರ 7.5 ತೀವ್ರತೆಯ ಎರಡನೇ ಭೂಕಂಪ ಸಂಭವಿಸಿದೆ.

ಕುಸಿದಿರುವ ಸಾವಿರಾರು ಕಟ್ಟಡಗಳ ಅವಶೇಷಗಳಡಿ ಇನ್ನಷ್ಟು ಜನರು ಸಿಲುಕಿರುವ ಶಂಕೆ ಇದ್ದು, ಸಾವು ಮತ್ತು ಗಾಯಾಳುಗಳ ಸಂಖ್ಯೆ ಏರಿಕೆಯಾಗುವ ಸಾಧ್ಯತೆಗಳಿವೆ. ಉಭಯ ರಾಷ್ಟ್ರಗಳ ಹಲವು ಆಸ್ಪತ್ರೆಗಳು ಗಾಯಾಳುಗಳಿಂದ ತುಂಬಿಹೋಗಿವೆ.

ಹಲವು ನಗರಗಳು ಮತ್ತು ಪಟ್ಟಣ ಪ್ರದೇಶಗಳಲ್ಲಿ ಭಗ್ನಾವಶೇಷಗಳ ರಾಶಿಗಳು ಕಾಣಿಸುತ್ತಿದ್ದು, ಬದುಕುಳಿದವರಿಗಾಗಿ ರಕ್ಷಣಾ ಸಿಬ್ಬಂದಿ ಶೋಧ ಕಾರ್ಯದಲ್ಲಿ ತೊಡಗಿದ್ದಾರೆ.

ಟರ್ಕಿಯ ಆಗ್ನೇಯ ಪ್ರಾಂತ್ಯದ ಗಾಝಿಯಾನ್‌ಟೆಪ್ ಪಟ್ಟಣದ ಉತ್ತರಕ್ಕೆ 18 ಕಿ.ಮೀ. ಆಳದಲ್ಲಿ ಕಂಪನದ ಕೇಂದ್ರಬಿಂದುವಾಗಿದೆ. ಡಮಾಸ್ಕಸ್ ಮತ್ತು ಬೇರೂತ್‌ನಲ್ಲಿ ಸಾವಿರಾರು ಜನ ಮೃತಪಟ್ಟಿದ್ದು, ಲಕ್ಷಾಂತರ ಜನ ಬೀದಿಪಾಲಾಗಿದ್ದಾರೆ.

ಸಿರಿಯಾದಲ್ಲಿ ಎರಡು ದಶಕಗಳ ಅಂತರ್‌ಯುದ್ಧದ ಪರಿಣಾಮ ಗಡಿಯ ಎರಡೂ ಬದಿಗಳಲ್ಲಿ ನೆಲೆಕಂಡು ಕೊಂಡಿದ್ದ ವಲಸಿಗರ ಜನವಸತಿ ಪ್ರದೇಶಗಳು ಕಂಪನದ ಪರಿಣಾಮದಿಂದ ತತ್ತರಿಸಿವೆ.

ಧರೆ ಕಂಪಿಸಿದಾಗ ನಿದ್ರೆಯಿಂದ ಎಚ್ಚರಗೊಂಡವರು ಜೀವ ಉಳಿಸಿಕೊಳ್ಳಲು ಮಳೆ, ಕೊರೆವ ಚಳಿಯಲ್ಲೇ ಮನೆಯಿಂದ ಹೊರಗೆ ಓಡಿ ಬಂದಿದ್ದಾರೆ. ದಿಢೀರ್ ಎದುರಾದ ಈ ಆಘಾತದಿಂದ ನಿವಾಸಿಗಳು ಹೊರಬರುವಷ್ಟರಲ್ಲಿ ಕ್ಷಣಾರ್ಧದಲ್ಲೇ ಬಹುಮಹಡಿ ಕಟ್ಟಡಗಳು, ವಸತಿ ಸಮುಚ್ಚಯಗಳು ಧರೆಗುರುಳಿವೆ.


ಭೂಕಂಪ ಪೀಡಿತ ಪ್ರದೇಶದಲ್ಲಿ ಪ್ರತಿಕೂಲ ಹವಾಮಾನವು ಪರಿಹಾರ ಕಾರ್ಯಾಚರಣೆಗೆ ತೊಡಕಾಗಿದೆ.

ಮತ್ತೆ ಭೂಕಂಪ, ಮುನ್ನೆಚ್ಚರಿಕೆ: ಮತ್ತಷ್ಟು ಭೂಕಂಪ ಸಂಭವಿಸುವ ಮುನ್ನೆಚ್ಚರಿಕೆಯನ್ನು ಅಧಿಕಾರಿಗಳು ನೀಡಿದ್ದು, ಜನರು ಜೀವಭಯದಿಂದ ಸುರಕ್ಷಿತ ನೆಲೆಗಳಿಗೆ ತೆರಳುತ್ತಿದ್ದಾರೆ. ಇದರಿಂದಲೂ ಸಂಚಾರ ದಟ್ಟಣೆ ಉಂಟಾಗಿ, ಪರಿಹಾರ ಕಾರ್ಯಕ್ಕೆ ಮತ್ತಷ್ಟು ಅಡ್ಡಿಯಾಗಿದೆ. ಸಿರಿಯಾದ ಅಲೆಪ್ಪೊ ಮತ್ತು ಹಮಾದ್ ನಗರಗಳಿಂದ ಹಿಡಿದು ಟರ್ಕಿಯ ದಿಯರ್‌ಬಕೀರ್ ವರೆಗೆ ಈಶಾನ್ಯಕ್ಕೆ 330 ಕಿಲೋಮೀಟರ್ ಗಿಂತಲೂ ಹೆಚ್ಚು ವಿಸ್ತಾರದ ಪ್ರದೇಶದಲ್ಲಿ ಕಟ್ಟಡಗಳು ಕುಸಿದಿವೆ.

11ನೇ ಪುಟ ನೋಡಿ



ಸಿರಿಯಾದ ವಾಯವ್ಯ ಭಾಗದ ಇಡ್ಲಿಬ್ ಪ್ರಾಂತ್ಯದ ಸರ್ಮ ಪಟ್ಟಣದಲ್ಲಿ ಸೋಮವಾರ ಸಂಭವಿಸಿದ ಭೂಕಂಪದಿಂದ ಕುಸಿದ ಕಟ್ಟಡಗಳ ಅವಶೇಷದಲ್ಲಿ ಬದುಕುಳಿದವರಿಗಾಗಿ ರಕ್ಷಣಾ ಸಿಬ್ಬಂದಿ ಕಾರ್ಯಾಚರಣೆ ಕೈಗೊಂಡರು —ಎಎಫ್‌ಪಿ ಚಿತ್ರ



ರಕ್ಷಣಾ ಕ್ಷೇತ್ರದಲ್ಲೂ ಸ್ವಾವಲಂಬನೆ

ಎಚ್‌ಎಎಲ್ ಹೆಲಿಕಾಪ್ಟರ್ ಘಟಕ: ಮೋದಿ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ತುಮಕೂರು: ರಕ್ಷಣಾ ಕ್ಷೇತ್ರದಲ್ಲೂ ದೇಶ ಸ್ವಾವಲಂಬನೆಯತ್ತ ಹೆಜ್ಜೆ ಹಾಕಿದ್ದು, ಮುಂದಿನ ದಿನಗಳಲ್ಲಿ ವಿದೇಶಗಳ ಅವಲಂಬನೆ ಕಡಿಮೆಯಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ ವ್ಯಕ್ತಪಡಿಸಿದರು.

ಗುಬ್ಬಿ ತಾಲ್ಲೂಕಿನ ಬಿದರೆಹಳ್ಳ ಕಾವಲ್ ಬಳಿ ನಿರ್ಮಿಸಿರುವ ಎಚ್‌ಎಎಲ್ ಹೆಲಿಕಾಪ್ಟರ್ ತಯಾರಿಕೆ ಘಟಕವನ್ನು ಸೋಮವಾರ ದೇಶಕ್ಕೆ ಸಮರ್ಪಿಸಿ ಅವರು ಮಾತನಾಡಿದರು.

'ಹಿಂದಿನ ದಿನಗಳಲ್ಲಿ ಸೇನೆ ಮತ್ತು ರಕ್ಷಣಾ ಕ್ಷೇತ್ರಕ್ಕೆ ಬೇಕಾದ ಶೇ 90ರಷ್ಟು ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಲಾಗುತಿತ್ತು. ಈಗ ಅದನ್ನು ಶೇ 60ರಷ್ಟಕ್ಕೆ ಇಳಿಸಲಾಗಿದೆ. ಮುಂದಿನ ದಿನಗಳಲ್ಲಿ ಈ ಪ್ರಮಾಣವನ್ನು ಮತ್ತಷ್ಟು ತಗ್ಗಿಸಲಾಗುವುದು. ವಿದೇಶಗಳ ಅವಲಂಬನೆ ಕಡಿಮೆ ಮಾಡಿ, ದೇಶದ ರಕ್ಷಣಾ ಕ್ಷೇತ್ರವನ್ನು ಸ್ವಾವಲಂಬಿ ಮಾಡುವುದೇ ನಮ್ಮ ಗುರಿ' ಎಂದರು.

'ರಫೇಲ್ ಯುದ್ಧ ವಿಮಾನ ಖರೀದಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪ ಮಾಡಿದರು. ಎಚ್‌ಎಎಲ್ ಮಾರಾಟ ಮಾಡಲಾಗುತ್ತಿದೆ ಎಂದು ಹುಯಿಲೆಬ್ಬಿಸಿದರು. ಹತ್ತು ಬಾರಿ ಸುಳ್ಳು ಹೇಳಿ, ನಿಜ ಮಾಡಲು ಹೊರಟವರಿಗೆ ಈಗ ಎಚ್‌ಎಎಲ್ ಘಟಕ ಸ್ಥಾಪಿಸಿ, ಹೆಲಿಕಾಪ್ಟರ್ ತಯಾರಿಕೆ ಆರಂಭಿಸುವ ಮೂಲಕ ಉತ್ತರ ನೀಡಿದ್ದೇವೆ' ಎಂದು ಪ್ರಧಾನಿ ಹೇಳಿದರು.

ಗುಬ್ಬಿ ಘಟಕದಲ್ಲಿ ದೊಡ್ಡಮಟ್ಟದಲ್ಲಿ ಹೆಲಿಕಾಪ್ಟರ್ ತಯಾರಿಸುವ ಮೂಲಕ ಟೀಕಾಕಾರರಿಗೆ ತಕ್ಕ ಉತ್ತರ ನೀಡಲಾಗುವುದು. ಎಲ್ಲವನ್ನೂ ಅಭಿವೃದ್ಧಿ ಮೂಲಕ ಮಾಡಿ ತೋರಿಸುತ್ತೇವೆ ಎಂದು ವಿರೋಧ ಪಕ್ಷಗಳಿಗೆ ಕುಟುಕಿದರು.

ರಾಜ್ಯದ ತಂತ್ರಜ್ಞರು, ಎಂಜಿನಿಯರುಗಳು ತೇಜಸ್‌ನಂತಹ ಯುದ್ಧ ವಿಮಾನಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಇದು ದೇಶದ ಸೇನೆಯ ಆತ್ಮಬಲ ಹೆಚ್ಚಿಸಿದೆ. ಮುಂದಿನ ದಿನಗಳಲ್ಲಿ ₹ 4 ಲಕ್ಷ ಕೋಟಿ ವಹಿವಾಟು ನಡೆಸುವ ಸಂಸ್ಥೆಯನ್ನಾಗಿ ರೂಪಿಸಿ ಎಚ್‌ಎಎಲ್‌ಗೆ ಮತ್ತಷ್ಟು ಶಕ್ತಿ ತುಂಬಲಾಗುವುದು ಎಂದು ಅವರು ಭರವಸೆ ನೀಡಿದರು.

35 ನಿಮಿಷದ ಭಾಷಣದಲ್ಲಿ ದೇಶದ ಪ್ರಗತಿ, ಕೇಂದ್ರ ಸರ್ಕಾರ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಪ್ರಸ್ತಾಪಿಸುತ್ತಲೇ ವಿರೋಧಿಗಳನ್ನೂ ಟೀಕಿಸಿದರು. 'ಡಬಲ್ ಎಂಜಿನ್ ಸರ್ಕಾರ ಅಧಿಕಾರದಲ್ಲಿ ಇದ್ದರೆ ಪ್ರಗತಿ ಸಾಧ್ಯವಾಗಲಿದೆ. ಅದಕ್ಕಾಗಿ ಮುಂದಿನ ದಿನಗಳಲ್ಲಿ ನಿಮ್ಮ ಆಶೀರ್ವಾದ ನಮ್ಮ ಮೇಲೆ ಇರಬೇಕು' ಎಂದು ಕೇಳುತ್ತಲೇ ಮತಯಾಚನೆಯನ್ನೂ ಮಾಡಿದರು.

ಕರ್ನಾಟಕದ ಅಭಿವೃದ್ಧಿ ಮಾದರಿ ಗಮನಿಸಿದರೆ ಭಾರತ ಯಾವ ರೀತಿ ಪ್ರಗತಿ ಹೊಂದುತ್ತಿದೆ ಎಂದು ತಿಳಿಯುತ್ತದೆ. ರಕ್ಷಣಾ ಉಪಕರಣ ತಯಾರಿಕೆಯಲ್ಲೂ ಮುಂಚೂಣಿಯಲ್ಲಿದ್ದು, ಎಚ್‌ಎಎಲ್ ಘಟಕದಲ್ಲಿ ಶಕ್ತಿಶಾಲಿ ಹೆಲಿಕಾಪ್ಟರ್ ತಯಾರಿಸುವ ಯೋಜನೆ ಹಾಕಿಕೊಳ್ಳಲಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.



ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಬಿದರೆಹಳ್ಳ ಕಾವಲ್ ಬಳಿ ನಿರ್ಮಿಸಿರುವ ಎಚ್‌ಎಎಲ್ ಹೆಲಿಕಾಪ್ಟರ್ ತಯಾರಿಕಾ ಘಟಕವನ್ನು ಸೋಮವಾರ ದೇಶಕ್ಕೆ ಸಮರ್ಪಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಹೆಲಿಕಾಪ್ಟರ್ ಮಾದರಿ ವೀಕ್ಷಿಸಿದರು. ಎಚ್‌ಎಎಲ್ ಸಿಎಂಡಿ ಸಿ.ಬಿ.ಅನಂತಕೃಷ್ಣನ್, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಇದ್ದಾರೆ

ಕಲ್ಲಿದ್ದಲು: ಅಧಿಕ ಉತ್ಪಾದನೆ ಗುರಿ

ನವದೆಹಲಿ: 2023-24ರ ಅವಧಿಯಲ್ಲಿ ಭಾರತ 101 ಕೋಟಿ ಟನ್ ಕಲ್ಲಿದ್ದಲು ಉತ್ಪಾದಿಸುವ ಗುರಿ ಹೊಂದಿದೆ ಎಂದು ಕೇಂದ್ರ ಕಲ್ಲಿದ್ದಲು ಸಚಿವ ಪ್ರಲ್ಹಾದ್ ಜೋಶಿ ಸೋಮವಾರ ತಿಳಿಸಿದ್ದಾರೆ.

‘ವಿಕ್ಟೋರಿಯಾ’ ಅವ್ಯವಸ್ಥೆ: ಪ್ರಕರಣ ದಾಖಲು

ಬೆಂಗಳೂರು: ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ರೋಗಿಗಳ ಸಹಾಯಕರು ತಂಗಲು ವ್ಯವಸ್ಥೆ ಕಲ್ಪಿಸದೇ ಇರುವುದು ಸೇರಿದಂತೆ ಅಲ್ಲಿನ ಅವ್ಯವಸ್ಥೆಗಳ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಅವರು ವಿಚಾರಣೆ ಆರಂಭಿಸಿದ್ದಾರೆ.

ಆಸ್ಪತ್ರೆಯಲ್ಲಿರುವ ಸಮಸ್ಯೆಗಳ ಕುರಿತು ಮಾಧ್ಯಮದಲ್ಲಿ ಪ್ರಕಟವಾದ ವರದಿ ಆಧರಿಸಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡಿರುವ ಉಪಲೋಕಾಯುಕ್ತರು, 4 ವಾರಗಳೊಳಗೆ ಪ್ರತಿಕ್ರಿಯೆ ನೀಡುವಂತೆ ನೋಟಿಸ್ ಜಾರಿಗೊಳಿಸಿದ್ದಾರೆ. ವೈದ್ಯಕೀಯ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರು ಹಾಗೂ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಿಂದಲೂ ವರದಿ ಕೇಳಿದ್ದಾರೆ.

ವೈದ್ಯರು ಮತ್ತು ಸಿಬ್ಬಂದಿ ಕೊರತೆ, ರೋಗಿಗಳ ಸಹಾಯಕರಿಗೆ ವಸತಿ ಸೌಲಭ್ಯದ ಕೊರತೆ, ವಾಹನಗಳ ನಿಲುಗಡೆ ವ್ಯವಸ್ಥೆಯಲ್ಲಿ ಸಮಸ್ಯೆ, ಔಷಧ ಪೂರೈಕೆಯಲ್ಲಿ ಲೋಪ ಸೇರಿದಂತೆ ಹಲವು ಅಂಶಗಳ ಕುರಿತು ವಿಚಾರಣೆ ಆರಂಭಿಸಲಾಗಿದೆ.

ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಕೊಪ್ಪಳ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಫೌಜಿಯಾ ಬಿ. ತರುನ್ನಮ್ ಅವರನ್ನು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪರೀಕ್ಷಾ ನಿಯಂತ್ರಕರನ್ನಾಗಿ ವರ್ಗಾವಣೆ ಮಾಡಿ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕ ಭನ್ವಾರ್ ಸಿಂಗ್ ಮೀನಾ ಅವರನ್ನು ಕೆಪಿಎಸ್‌ಸಿ ಜಂಟಿ ಪರೀಕ್ಷಾ ನಿಯಂತ್ರಕರನ್ನಾಗಿ ನಿಯೋಜಿಸಲಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಯ ಪರಿಹಾರ, ಪುನರ್ವಸತಿ ಮತ್ತು ಭೂಸ್ವಾಧೀನದ ಪ್ರಧಾನ ವ್ಯವಸ್ಥಾಪಕ ರಾಹುಲ್ ರತ್ನಂ ಪಾಂಡೆ ಅವರನ್ನು ಕೊಪ್ಪಳ ಜಿಲ್ಲೆಯ ನೂತನ ಸಿಇಒ ಆಗಿ ನೇಮಿಸಲಾಗಿದೆ.

ಚರ್ಚೆ ತಪ್ಪಿಸಲು ಪ್ರಧಾನಿ ಸರ್ವ ಪ್ರಯತ್ನ: ರಾಹುಲ್ ಆರೋಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಅದಾನಿ ಸಮೂಹಕ್ಕೆ ಸಂಬಂಧಿಸಿದ ವಿಷಯಗಳ ಚರ್ಚೆ ಸಂಸತ್ತಿನಲ್ಲಿ ನಡೆಯದಂತೆ ನೋಡಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಕೈಲಾಗುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಎಂದು ಸೋಮವಾರ ಆರೋಪಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ‘ಕೋಟ್ಯಧಿಪತಿ ಉದ್ಯಮಿಯ ಹಿಂದೆ ಯಾವ ಶಕ್ತಿ ಇದೆ ಎಂಬುದನ್ನು ದೇಶ ತಿಳಿದುಕೊಳ್ಳಬೇಕಿದೆ’ ಎಂದು ಪ್ರತಿಪಾದಿಸಿದರು.


ಎರಡು ಮೂರು ವರ್ಷಗಳಿಂದ ಈ ವಿಷಯ ಕುರಿತು ಮಾತನಾಡುತ್ತಿದ್ದೇನೆ. ‘ನಾವಿಬ್ಬರು, ನಮಗಿಬ್ಬರು’ ಎಂಬಂತೆ ಮೋದಿ ಸರ್ಕಾರ ನಡೆಯುತ್ತಿದೆ ಎಂದ ಅವರು, ಕೈಗಾರಿಕೋದ್ಯಮಿಗಳಾದ ಗೌತಮ್ ಅದಾನಿ ಮತ್ತು ಮುಖೇಶ್ ಅಂಬಾನಿ ಹೆಸರುಗಳನ್ನು ಉಲ್ಲೇಖಿಸಿದರು. ಮೋದಿ ಸರ್ಕಾರ ಇವರಿಗೆ ಸಾಕಷ್ಟು ಲಾಭ ಮಾಡಿಕೊಟ್ಟಿದೆ ಎಂದು ದೂರಿದರು.

‘ಸಂಸತ್ತಿನಲ್ಲಿ ಅದಾನಿ ಸಮೂಹದ ಕುರಿತು ಚರ್ಚೆ ನಡೆಸಲು ಸರ್ಕಾರ ಹೆದರುತ್ತಿದೆ. ಹೀಗಾಗಿಯೇ ಸರ್ಕಾರ, ಪ್ರಮುಖವಾಗಿ ಮೋದಿ ಅವರೇ ಈ ಕುರಿತು ಚರ್ಚೆ ನಡೆಯದಂತೆ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅದಕ್ಕೆ ಕಾರಣಗಳು ಏನು ಎಂಬುದು ನಿಮಗೆಲ್ಲ ಗೊತ್ತಿದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ಲಕ್ಷ ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ. ದೇಶದ ಮೂಲ ಸೌಕರ್ಯವನ್ನು ಸ್ವಾಧೀನ ಮಾಡಿಕೊಂಡ ಬಗ್ಗೆ ಚರ್ಚೆ ನಡೆಯಬೇಕಿದೆ. ಇದರ ಹಿಂದೆ ಯಾರ ಕೈವಾಡ ಇದೆ ಎಂಬುದು ಚರ್ಚೆಯಾಗಬೇಕು’ ಎಂದು ಅವರು ಒತ್ತಾಯಿಸಿದರು.

ನಿಧನ ವಾರ್ತೆ

ಡಾ. ಎನ್‌ಆರ್‌. ಕೇಶವನ್



ಬೆಂಗಳೂರು: ಎಚ್‌ಎಎಲ್ ಹೆಲಿಕಾಪ್ಟರ್ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದ ಡಾ. ಎನ್.ಆರ್. ಕೇಶವನ್ (78) ಅವರು ಫೆ. 3ರಂದು ನಿಧನ ಹೊಂದಿದರು.

ಕೇಶವನ್ ಅವರು ಹಾಸನದ ಮಲ್ನಾಡ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಮುಗಿಸಿದ್ದರು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್ಸಿ) ಎಂ.ಎಸ್ಸಿ ಪೂರ್ಣಗೊಳಿಸಿದ್ದರು. ನಂತರ, ಇಂಗ್ಲೆಂಡ್‌ಗೆ ಹೋಗಿ ಏರೋನಾಟಿಕಲ್ ಎಂಜಿನಿಯರಿಂಗ್ ವಿಷಯದಲ್ಲಿ ಪಿಎಚ್.ಡಿ ಮಾಡಿದ್ದರು.

ಎಚ್‌ಎಎಲ್ ಸೇರಿದ್ದ ಕೇಶವನ್, ಸಂಶೋಧನಾ ವಿಜ್ಞಾನಿ ಆಗಿ ವೃತ್ತಿ ಆರಂಭಿಸಿದ್ದರು. ಹೆಲಿಕಾಪ್ಟರ್ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದರು.

ಮತ್ತೆ ಕಳೆಗಟ್ಟುವ ತವಕದಲ್ಲಿ ದಾಸನಪುರ ಎಪಿಎಂಸಿ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ನಗರದಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆ ಕಡಿಮೆ ಮಾಡಲು ನಿರ್ಮಿಸಿರುವ ದಾಸನಪುರ ಎಪಿಎಂಸಿ ಪ್ರಾಂಗಣದಲ್ಲಿ ವಹಿವಾಟು ಚುರುಕುಗೊಳ್ಳುವ ಕಾಲ ಹತ್ತಿರವಾಗಿದೆ. ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ ಮತ್ತು ಶುಂಠಿ ವ್ಯಾಪಾರವನ್ನು ಸಂಪೂರ್ಣವಾಗಿ ಸ್ಥಳಾಂತರಿಸಲು ಸಿದ್ಧತೆ ನಡೆಯುತ್ತಿದೆ.

ಯಶವಂತಪುರ ಮಾರುಕಟ್ಟೆ ಎಂದರೆ ಈ ನಾಲ್ಕು ಉತ್ಪನ್ನಗಳ ವಹಿವಾಟು ನಡೆಯುವ ದೊಡ್ಡ ಕೇಂದ್ರ. ರಾಜ್ಯ ಮಾತ್ರವಲ್ಲ ಮಹಾರಾಷ್ಟ್ರದಿಂದಲೂ ಈರುಳ್ಳಿ ಇಲ್ಲಿಗೆ ಬರಲಿದೆ. ಬೆಂಗಳೂರಿನ ಗ್ರಾಹಕರ ಜತೆಗೆ ತಮಿಳುನಾಡು, ಆಂಧ್ರಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ, ಅಸ್ಸಾಂ, ಮಧ್ಯಪ್ರದೇಶ, ಉತ್ತರ ಪ್ರದೇಶ, ಬಾಂಗ್ಲಾದೇಶಕ್ಕೆ ಈರುಳ್ಳಿ ಕಳುಹಿಸಲಾಗುತ್ತದೆ.


ಮಧ್ಯಪ್ರದೇಶ, ದೆಹಲಿ, ಉತ್ತರ ಪ್ರದೇಶ, ಹಾಸನ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಕೋಲಾರದಿಂದ ಬರುವ ಆಲೂಗಡ್ಡೆ, ತಮಿಳುನಾಡು ಮತ್ತು ಬೆಂಗಳೂರಿನ ಗ್ರಾಹಕರಿಗೆ ತಲುಪುತ್ತದೆ. ಇದರ ಜತೆಗೆ ಶುಂಠಿ ಮತ್ತು ಬೆಳ್ಳುಳ್ಳಿ ವಹಿವಾಟಿಗೂ ಇದೇ ದೊಡ್ಡ ಮಾರುಕಟ್ಟೆ.

ವರ್ತಕರು ಈ ವಹಿವಾಟಿನ ಮೇಲೆ ಬಲವಾದ ಹಿಡಿತ ಸಾಧಿಸಿದ್ದು, ವರ್ಷದಿಂದ ವರ್ಷಕ್ಕೆ ಈ ಮಾರುಕಟ್ಟೆ ವಿಸ್ತರಣೆಯಾಗುತ್ತಿದೆ. ದಿನಕ್ಕೆ ಸರಾಸರಿ 1300ರಿಂದ 1600 ಲಾರಿಗಳು ಈ ಪಾದರ್ಥಗಳನ್ನು ಹೊತ್ತು ಎಪಿಎಂಸಿಗೆ ಬರುತ್ತಿವೆ. ಬೆಳೆಯುತ್ತಿರುವ ಬೆಂಗಳೂರನ್ನು ದೃಷ್ಟಿಯಲ್ಲಿಟ್ಟುಕೊಂಡು 2006ರಲ್ಲಿ ದಾಸನಪುರದ ಬಳಿ 67 ಎಕರೆ ಸ್ವಾಧೀನಪಡಿಸಿಕೊಂಡ ಸರ್ಕಾರ, ವಿಶಾಲ ಮತ್ತು ಸುಸಜ್ಜಿತವಾದ ಮಾರುಕಟ್ಟೆ ನಿರ್ಮಿಸಿತು.

ಎ ಮತ್ತು ಬಿ ಬ್ಲಾಕ್ ಕಾಮಗಾರಿ ಪೂರ್ಣಗೊಂಡು 14 ವರ್ಷಗಳೇ ಕಳೆದಿದ್ದು, ಮಾರುಕಟ್ಟೆ ಮಾತ್ರ ಪರಿಪೂರ್ಣವಾಗಿ ಆರಂಭವಾಗಿಲ್ಲ. ಕೋವಿಡ್ ಸಂದರ್ಭದಲ್ಲಿ ಜನ ಸಂದಣಿ ಕಡಿಮೆ ಮಾಡಲು ಈ ಮಾರುಕಟ್ಟೆಯನ್ನು ಸರ್ಕಾರ ಬಳಸಿಕೊಂಡಿತು. ಈರುಳ್ಳಿ–ಬೆಳ್ಳುಳ್ಳಿ ಮತ್ತು ಆಲೂಗಡ್ಡೆ ವರ್ತಕರನ್ನು ಯಶವಂತಪುರದಿಂದ ದಾಸನಪುರಕ್ಕೆ ಸಂಪೂರ್ಣವಾಗಿ ಸ್ಥಳಾಂತರ ಮಾಡಿತ್ತು.

ಕೋವಿಡ್ ಎರಡನೇ ಅಲೆ ಲಾಕ್‌ಡೌನ್ ಮುಗಿದ ಬಳಿಕ 309 ವರ್ತಕರು ದಾಸನಪುರದಿಂದ ಯಶವಂತಪುರಕ್ಕೆ ಮರಳಿ ವಹಿವಾಟು ಆರಂಭಿಸಿದ್ದರು. ಯಶವಂತಪುರದಲ್ಲಿ ಮಳಿಗೆ ಇಲ್ಲದ ಶೇ 30ರಷ್ಟು ವರ್ತಕರು ಮಾತ್ರ ದಾಸನಪುರದಲ್ಲಿ ವಹಿವಾಟು ಮುಂದುವರಿಸಿದ್ದರು.

ಈಗ ಈರುಳ್ಳಿ, ಆಲೂಗಡ್ಡೆ, ಶುಂಠಿ ಮತ್ತು ಬೆಳ್ಳುಳ್ಳಿ ವಹಿವಾಟನ್ನು ಸಂಪೂರ್ಣವಾಗಿ ಸ್ಥಳಾಂತರಿಸಲು ದಿಟ್ಟ ನಿರ್ಧಾರವನ್ನು ಎಪಿಎಂಸಿ ಆಡಳಿತ ಮಂಡಳಿ ಕೈಗೊಂಡಿದೆ. 'ಜನವರಿಯಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಆಕ್ಷೇಪಣೆ ಆಹ್ವಾನಿಸಿದೆ. ಇನ್ನೊಂದು ತಿಂಗಳಲ್ಲಿ ಅಂತಿಮ ಅಧಿಸೂಚನೆ ಹೊರ ಬಳಲಿದ್ದು, ವಹಿವಾಟು ಸ್ಥಳಾಂತರ ಆಗಲಿದೆ. ಮುಂದಿನ ದಿನಗಳಲ್ಲಿ ದಿನಸಿ ವಹಿವಾಟ ಮಾತ್ರ ಈ ಮಾರುಕಟ್ಟೆಯಲ್ಲಿ ಇರಲಿದೆ' ಎಂದು ಕೃಷಿ ಮಾರುಕಟ್ಟೆ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.



ದಾಸನಪುರ ಮಾರುಕಟ್ಟೆಯ ನೋಟ –ಪ್ರಜಾವಾಣಿ ಚಿತ್ರ

ದಾಸನಪುರ ಮಾರುಕಟ್ಟೆ ಉಪಯೋಗಗಳೇನು?

ಹೊರ ರಾಜ್ಯ ಮತ್ತು ಜಿಲ್ಲೆಗಳಿಂದ ಕೃಷಿ ಉತ್ಪನ್ನಗಳನ್ನು ಹೊತ್ತು ಬರುವ ಲಾರಿಗಳು ನಗರ ಪ್ರವೇಶಿಸಲು ರಾತ್ರಿ ತನಕ ಕಾಯಬೇಕಿದೆ. ದಾಸನಪುರಕ್ಕೆ ಮಾರುಕಟ್ಟೆ ಸ್ಥಳಾಂತರವಾದರೆ ಯಾವುದೇ ಸಮಯದಲ್ಲಾದರೂ ಬಂದು ಹೋಗಲು ಅವಕಾಶ ಇರಲಿದೆ. ಬೆಳಿಗ್ಗೆ 11 ಗಂಟೆ ವೇಳೆಗೆ ಸರಕು ಇಳಿಸಿದರೂ ರಾತ್ರಿ ತನಕ ಕಾದು ಕೊಳಿತುಕೊಳ್ಳಬೇಕು. ಸರಕು ಹೊತ್ತು ಹೊರ ರಾಜ್ಯಗಳಿಗೆ ಹೋಗುವ ಲಾರಿಗಳೂ ರಾತ್ರಿ 9ರ ತನಕ ಕಾಯಬೇಕಿದೆ. ದಾಸನಪುರದಲ್ಲಿ ಈ ಸಮಸ್ಯೆ ಇರುವುದಿಲ್ಲ ಎನ್ನುತ್ತಾರೆ ಅಧಿಕಾರಿಗಳು. ತುಮಕೂರು ರಸ್ತೆಯಿಂದ ದಾಸನಪುರಕ್ಕೆ ಈಗಿರುವ ರಸ್ತೆ ಜತೆಗೆ ನೆಲಮಂಗಲ–ಚಿಕ್ಕಬಳ್ಳಾಪುರ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಯಾಗಲಿದ್ದು, ದಾಸನಪುರಕ್ಕೆ ದಾರಿ ಇನ್ನಷ್ಟು ಸುಗಮ ಆಗಲಿದೆ ಎಂದು ಹೇಳುತ್ತಾರೆ.

ಇನ್ನು ನೆಲಮಂಗಲ ರೈಲು ನಿಲ್ದಾಣ ಸಮೀಪದಲ್ಲೇ ಇದ್ದು, ಅಲ್ಲಿಂದ ಈಶಾನ್ಯ ರಾಜ್ಯಗಳಿಗೆ ನೇರವಾಗಿ ಈರುಳ್ಳಿ ಕಳುಹಿಸಬಹುದಾಗಿದೆ. ಅದಕ್ಕೆ ಬೇಕಿರುವ ಮೂಲ ಸೌಕರ್ಯ ವ್ಯವಸ್ಥೆಯನ್ನು ರೈಲ್ವೆ ಇಲಾಖೆ ಮಾಡಿದೆ. ಸಾಗಣೆ ವೆಚ್ಚ ಕಡಿಮೆಯಾದರೆ ರೈತರು ಮತ್ತು ಗ್ರಾಹಕರಿಗೆ ಅನುಕೂಲವಾಗಲಿದೆ ಎಂದು ವಿವರಿಸುತ್ತಾರೆ.

ಪೊಲೀಸ್ ಇಲಾಖೆಯಿಂದಲೂ ಪತ್ರ

ಯಶವಂತಪುರ ಸುತ್ತಮುತ್ತ ಸಂಚಾರ ದಟ್ಟಣೆಗೆ ಎಪಿಎಂಸಿ ಕಾರಣವಾಗುತ್ತಿದ್ದು, ದಾಸನಪುರಕ್ಕೆ ಸ್ಥಳಾಂತರ ಮಾಡುವಂತೆ ಕೋರಿದೆ.

ಎಪಿಎಂಸಿ ಪ್ರಾಂಗಣದಲ್ಲಿ ಸುಗ್ಗಿ ಕಾಲದಲ್ಲಿ 1.50 ಲಕ್ಷ ಚೀಲ ಈರುಳ್ಳಿ, ಆಲೂಗಡ್ಡೆ ಉತ್ಪನ್ನ ಬರುತ್ತಿದ್ದು, ದಿನಕ್ಕೆ 1 ಸಾವಿರದಿಂದ 5 ಸಾವಿರ ಸಾವಿರ ತನಕ ಲಾರಿಗಳು ಬಂದಿರುವ ಉದಾಹರಣೆ ಇದೆ. ಇದರಿಂದ ಸಹಜವಾಗಿ ವಾಹನ ದಟ್ಟಣೆ ಉಂಟಾಗುತ್ತಿದೆ ಎಂದು ಕೃಷಿ ಮಾರುಕಟ್ಟೆ ನಿರ್ದೇಶಕರಿಗೆ ಯಶವಂತಪುರ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಸರ್ವಿಸ್ ರಸ್ತೆಯಲ್ಲಿ ವಾಹನ ನಿಲ್ಲಿಸುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಶಾಲಾ ವಾಹನಗಳು ಸಾಗಲು ಅಡಚಣೆಯಾಗಿದೆ. ಆದ್ದರಿಂದ ಸ್ಥಳಾಂತರ ಮಾಡಬೇಕು ಎಂದು ಕೋರಿದ್ದಾರೆ.

ದಾಸನಪುರ ಎಪಿಎಂಸಿ ವರ್ತಕರ ಸಂಘ, ಎಸ್‌ವಿಎಸ್ ಪಾಂಡುರಂಗ ಪ್ರೌಢಶಾಲೆ, ಗೊರಗುಂಟೆಪಾಳ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಶ್ರೀರಾಮ ರಕ್ಷಿತ ಮಾನವ ಹಕ್ಕುಗಳ ಚೈತನ್ಯ ಶಕ್ತಿ ಸಂಘಗಳು ವಿಶೇಷ ಕಮಿಷನರ್(ಸಂಚಾರ) ಎಂ.ಎ.ಸಲೀಂ ಅವರಿಗೆ ಮನವಿಗಳನ್ನು ಸಲ್ಲಿಸಿದ್ದು, ಮಾರುಕಟ್ಟೆ ಸ್ಥಳಾಂತರಕ್ಕೆ ಕೋರಿವೆ. ಈ ಮನವಿಗಳನ್ನು ಇನ್‌ಸ್ಪೆಕ್ಟರ್ ಲಗತ್ತಿಸಿದ್ದಾರೆ.

ಕಾಂಗ್ರೆಸ್: ಪಟ್ಟಿ ಪರಿಶೀಲನಾ ಸಮಿತಿ ರಚನೆ

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಉನ್ನತ ಮಟ್ಟದ ಪರಿಶೀಲನಾ (ಸ್ಕ್ರೀನಿಂಗ್) ಸಮಿತಿಯನ್ನು ರಚಿಸಲಾಗಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅನುಮೋದನೆ ಮೇರೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಮೋಹನ್ ಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

ಸಮಿತಿಯಲ್ಲಿ ನೀರಜ್ ಡಾಂಗಿ, ಮೊಹಮ್ಮದ್ ಜಾವೇದ್, ಸಪ್ತಗಿರಿ ಉಲಾಕ ಅವರು ಸದಸ್ಯರಾಗಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ. ಪರಮೇಶ್ವರ ಹಾಗೂ ರಾಜ್ಯದ ಉಸ್ತುವಾರಿ ಹೊತ್ತಿರುವ ಎಐಸಿಸಿ ಕಾರ್ಯದರ್ಶಿಗಳು ಸಮಿತಿಯಲ್ಲಿ ಇರುತ್ತಾರೆ.

ಕೆಪಿಸಿಸಿ ಹಂತದಲ್ಲಿ ಸಿದ್ಧಪಡಿಸಲಾದ ಅಭ್ಯರ್ಥಿಗಳ ಪಟ್ಟಿಯನ್ನು ಈ ಪರಿಶೀಲನಾ ಸಮಿತಿ ಅಂತಿಮಗೊಳಿಸುತ್ತದೆ. ಅದಾದ ಬಳಿಕ, ಎಐಸಿಸಿ ಅಧ್ಯಕ್ಷರು ಅಂತಿಮವಾಗಿ ಪಟ್ಟಿಯನ್ನು ಅನುಮೋದಿಸುತ್ತಾರೆ.

120ಕ್ಕೂ ಹೆಚ್ಚು ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಬಹುತೇಕ ಪೂರ್ಣಗೊಂಡಿದೆ. ಸೋಮವಾರ ನಗರಕ್ಕೆ ಬಂದ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಪಟ್ಟಿಯನ್ನು ಅಂತಿಮಗೊಳಿಸುವ ಕುರಿತಂತೆ ಕೆಲವು ನಾಯಕರ ಚರ್ಚೆ ನಡೆಸಿದ್ದರು.

ವಸತಿಗೆ ಬೇಡಿಕೆ: ಹೋಟೆಲ್ ಕೊಠಡಿಗಳು ಭರ್ತಿ

ಭಾರತ ಇಂಧನ ಸಪ್ತಾಹ, ಜಿ–20, ಏರ್ ಶೋ ಪರಿಣಾಮ

• ಉದ್ಭವಿ ಬಾಲಕೃಷ್ಣ

ಬೆಂಗಳೂರು: ಭಾರತ ಇಂಧನ ಸಪ್ತಾಹ, ಜಿ–20 ಸಭೆ ಹಾಗೂ ಏರ್ ಶೋ ಪರಿಣಾಮ ಹೊರ ರಾಜ್ಯ ಹಾಗೂ ವಿದೇಶದ ಪ್ರತಿನಿಧಿಗಳ ವಾಸ್ತವ್ಯಕ್ಕೆ ನಗರದ ಹೋಟೆಲ್‌ಗಳಲ್ಲಿನ ಅಂದಾಜು 50 ಸಾವಿರ ಕೊಠಡಿಗಳನ್ನು ಕಾಯ್ದಿರಿಸಲಾಗಿದೆ.

ಸೋಮವಾರದಿಂದ ಆರಂಭಗೊಂಡಿರುವ ಭಾರತ ಇಂಧನ ಸಪ್ತಾಹ ಫೆ.8ರ ವರೆಗೆ ನಡೆಯಲಿದೆ. ಫೆ.13ರಿಂದ 17ರ ತನಕ ಏರ್ ಶೋ ಆಯೋಜಿಸಲಾಗಿದೆ.

ನಗರದಲ್ಲಿರುವ ಪಂಚತಾರಾ ಹೋಟೆಲ್‌ಗಳ ಕೊಠಡಿಗಳನ್ನು ಪೂರ್ಣ ಪ್ರಮಾಣದಲ್ಲಿ ಕಾಯ್ದಿರಿಸಲಾಗಿದೆ. ತ್ರಿ ಸ್ಟಾರ್ ಹೋಟೆಲ್‌ಗಳಲ್ಲಿ ಕೆಲವು ಕೊಠಡಿಗಳು ಮಾತ್ರ ಲಭ್ಯವಿದ್ದು, ಅವುಗಳ ದರವೂ ಹೆಚ್ಚಳವಾಗಿದೆ.

'ಅತಿಗಣ್ಯ ವ್ಯಕ್ತಿಗಳಿಗೆ ವಾಸ್ತವ್ಯ ಕಲ್ಪಿಸಲು ಹೋಟೆಲ್‌ಗಳಲ್ಲಿ ಉಳಿಸಿಕೊಂಡಿದ್ದ ಕೆಲವು ಕೊಠಡಿಗಳೂ ಅಷ್ಟೇ ವೇಗವಾಗಿ ಬುಕ್ ಆಗಿವೆ. ಹೀಗಾಗಿ, ಬಹುತೇಕ ಹೋಟೆಲ್‌ಗಳಲ್ಲಿ ಕೊಠಡಿಗಳು ಖಾಲಿ ಇಲ್ಲ. ಫೆ.20ರ ತನಕ ಇದೇ ಪರಿಸ್ಥಿತಿಯಿರುವ ಸಾಧ್ಯತೆಯಿದೆ' ಎಂದು ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದ್ದಾರೆ.

ಪ್ರತಿ ವರ್ಷ ಏರ್ ಶೋ ಸೇರಿದಂತೆ ಇತರೆ ಚಟುವಟಿಕೆಯಿಂದ ಕೊಠಡಿಗಳ ಕಾಯ್ದಿರಿಸುವಿಕೆ ಪ್ರಮಾಣ ಹೆಚ್ಚಿರುತ್ತಿತ್ತು. ಆದರೆ, ಈ ವರ್ಷ ಮೂರು ಪ್ರಮುಖ ಕಾರ್ಯಕ್ರಮಗಳು ಆಸುಪಾಸಿನಲ್ಲೇ ನಡೆಯುತ್ತಿರುವ ಪರಿಣಾಮ ಕೊಠಡಿಗಳ ಕಾಯ್ದಿರಿಸುವಿಕೆ ಹೆಚ್ಚಾಗಿದೆ ಎಂದೂ ಹೇಳಿದರು.

'ಕೇಂದ್ರೀಯ ವಾಣಿಜ್ಯ ಪ್ರದೇಶದಲ್ಲಿರುವ ಪಂಚತಾರಾ ಹೋಟೆಲ್‌ಗಳಲ್ಲಿ ಕೊಠಡಿಗಳು ಖಾಲಿ ಇಲ್ಲ' ಎಂದು ಪ್ರತಿನಿಧಿಗಳು ತಿಳಿಸಿದ್ದಾರೆ.

ಎಂಸಿಡಿ: 3ನೇ ಬಾರಿಯೂ ನಡೆಯದ ಮೇಯರ್ ಆಯ್ಕೆ

ನವದೆಹಲಿ (ಪಿಟಿಐ): ದೆಹಲಿ ಮಹಾನಗರ ಪಾಲಿಕೆಯ ಮೇಯರ್ ಆಯ್ಕೆಗಾಗಿ ಸೋಮವಾರ ನಡೆದ ಸಭೆಯನ್ನೂ ಗದ್ದಲದ ಕಾರಣ ಮುಂದೂಡಲಾಗಿದ್ದು, ಒಂದು ತಿಂಗಳೊಳಗೆ ಮೂರನೇ ಬಾರಿಗೆ ಸಭೆ ಮುಂದೂಡಿದಂತಾಗಿದೆ. ಇದರಿಂದ ಆಕ್ರೋಶಗೊಂಡ ಆಮ್ ಆದ್ಮಿ ಪಕ್ಷವು, ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಚುನಾವಣೆ ನಡೆಸುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವುದಾಗಿ ಹೇಳಿದೆ.

ಮೇಯರ್ ಆಯ್ಕೆಯಲ್ಲಿ ನಾಮ ನಿರ್ದೇಶಿತ ಸದಸ್ಯರು ಮತ ಚಲಾಯಿಸಬೇಕೇ ಬೇಡವೇ ಎನ್ನುವ ಕುರಿತು ಸಭೆಯಲ್ಲಿ ನಡೆದ ಚರ್ಚೆಯು ಗದ್ದಲಕ್ಕೆ ಕಾರಣವಾಯಿತು.

ಅರ್ಧ ಗಂಟೆಯ ಬಳಿಕ ಬೆಳಿಗ್ಗೆ 11.30ಕ್ಕೆ ಮತ್ತೊಮ್ಮೆ ಪ್ರಾರಂಭವಾದ ಸಭೆಯಲ್ಲಿ ಚುನಾವಣಾ ಅಧಿಕಾರಿ ಸತ್ಯ ಶರ್ಮಾ ಅವರು, ನಾಮ ನಿರ್ದೇಶಿತ ಸದಸ್ಯರು ಮೇಯರ್, ಉಪ ಮೇಯರ್, ಸ್ಥಾಯಿ ಸಮಿತಿ ಸದಸ್ಯರ ಆಯ್ಕೆ ಚುನಾವಣೆಯಲ್ಲಿ ಮತ ಚಲಾಯಿಸಬಹುದು ಎಂದಿದ್ದು ಗದ್ದಲಕ್ಕೆ ಕಾರಣವಾಯಿತು.

ಎಎಪಿ ಸದಸ್ಯರು ಪ್ರತಿಭಟನೆ ನಡೆಸಿದರು. ಪಕ್ಷದ ಮುಖಂಡ ಮುಖೇಶ್ ಗೋಯಲ್ ಅವರು 'ನಾಮ ನಿರ್ದೇಶಿತ ಸದಸ್ಯರು ಮತ ಚಲಾಯಿಸುವಂತಿಲ್ಲ' ಎಂದರು.

'ನಾವು ಸುಪ್ರೀಂ ಕೋರ್ಟ್‌ಗೆ ಇಂದೇ (ಸೋಮವಾರ) ಹೋಗುತ್ತೇವೆ. ನ್ಯಾಯಾಲಯದ ಮೇಲ್ವಿಚಾರಣೆಯಲ್ಲೇ ಚುನಾವಣೆ ನಡೆಯಲಿ. ಮುಂದಿನ ಎರಡು ವಾರದೊಳಗೆ ಚುನಾವಣೆ ನಡೆಯಬೇಕು. ಜೊತೆಗೆ ನಾಮ ನಿರ್ದೇಶಿತರಿಗೆ ಮತ ಚಲಾವಣೆಗೆ ಅವಕಾಶ ನೀಡಬಾರದು' ಎಂದು ಎಎಪಿ ಮುಖಂಡರಾದ ಆತಿಶಿ ಒತ್ತಾಯಿಸಿದರು.

ಕಿರುಚಿತ್ರ, ಸಾಕ್ಷ್ಯಚಿತ್ರಗಳ ಉತ್ಸವ 11ರಿಂದ

ಬೆಂಗಳೂರು: ಮೈಸೂರು ಸಿನಿಮಾ ಸೊಸೈಟಿಯಿಂದ 'ಪರಿದೃಶ್ಯ' ಕಿರುಚಿತ್ರಗಳು ಮತ್ತು ಸಾಕ್ಷ್ಯಚಿತ್ರಗಳ ಅಂತರರಾಷ್ಟ್ರೀಯ ಉತ್ಸವ ಫೆ. 11 ಮತ್ತು 12ರಂದು ಬೆಂಗಳೂರಿನ ಸುಚಿತ್ರಾ ಸಿನಿಮಾ ಮತ್ತು ಕಲ್ಚರಲ್ ಅಕಾಡೆಮಿಯಲ್ಲಿ ನಡೆಯಲಿದೆ.

'ಇಸ್ರೇಲ್, ಅಮೆರಿಕಾ, ಫ್ರಾನ್ಸ್, ಇಟಲಿ ಮತ್ತು ಇರಾನ್ ಸೇರಿ ಪ್ರಪಂಚದ 10 ದೇಶಗಳಿಂದ 150 ಕಿರುಚಿತ್ರ, ಸಾಕ್ಷ್ಯಚಿತ್ರಗಳನ್ನು ಈಗಾಗಲೇ ಸ್ವೀಕರಿಸಲಾಗಿದೆ. ಇದರ ಅಂಗವಾಗಿ ಪರಿದೃಶ್ಯದ ವತಿಯಿಂದ 25 ವಿವಿಧ ಪ್ರಶಸ್ತಿಗಳನ್ನು ಕಿರುಚಿತ್ರಗಳು–ಹವ್ಯಾಸಿಗಳು ಮತ್ತು ವೃತ್ತಿಪರರು, ಸಾಕ್ಷ್ಯಚಿತ್ರಗಳು–ಹವ್ಯಾಸಿಗಳು ಮತ್ತು ವೃತ್ತಿಪರರ ಗುಂಪುಗಳಲ್ಲಿ ನೀಡಲಾಗುತ್ತಿದೆ' ಎಂದು ಪರಿದೃಶ್ಯದ ಸಲಹೆಗಾರ ರಾಘವೇಂದ್ರ ಕುಲಕರ್ಣಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಫೆ. 12ರಂದು ಸಂಜೆ 4.15ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ' ಎಂದು ತಿಳಿಸಿದರು.

ಮಾಹಿತಿಗಾಗಿ: 9945242996ಗೆ ಸಂಪರ್ಕಿಸಿ.

'ಶಾಸಕರ ಖರೀದಿ: ಸಿಬಿಐನಿಂದಲೇ ತನಿಖೆ'

ಹೈದರಾಬಾದ್ (ಪಿಟಿಐ): ಭಾರತ್ ರಾಷ್ಟ್ರ ಸಮಿತಿ (ಬಿಆರ್‌ಎಸ್) ಪಕ್ಷದ ಶಾಸಕರ ಖರೀದಿ ಯತ್ನ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಿದ್ದ ಹೈಕೋರ್ಟ್‌ನ ಏಕಸದಸ್ಯ ಪೀಠದ ಆದೇಶವನ್ನು ವಿಭಾಗೀಯ ಪೀಠವು ಸೋಮವಾರ ಎತ್ತಿಹಿಡಿಯಿತು.

ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿದ್ದ ತೆಲಂಗಾಣ ಸರ್ಕಾರದ ಮೇಲ್ಮನವಿಯನ್ನು ವಿಭಾಗೀಯ ಪೀಠ ವಜಾ ಮಾಡಿತು. ಇದರಿಂದ ತೆಲಂಗಾಣ ಸರ್ಕಾರಕ್ಕೆ ಹಿನ್ನಡೆಯಾಗಿದ್ದರೆ, ತನಿಖೆಯನ್ನು ಮುಂದುವರಿಸಲು ಸಿಬಿಐಗೆ ಹಾದಿ ಸುಗಮವಾದಂತಾಗಿದೆ.

ಬಿಆರ್‌ಎಸ್‌ನ ನಾಲ್ವರು ಶಾಸಕರನ್ನು ಬಿಜೆಪಿ ಪರವಾಗಿ ಖರೀದಿಸಲು ಆಮಿಷವೊಡ್ಡಲಾಗಿತ್ತು ಎಂಬ ಪ್ರಕರಣದ ತನಿಖೆಗೆ ತೆಲಂಗಾಣಎಸ್‌ಐಟಿ ರಚಿಸಿತ್ತು.

ಭೂಸ್ವಾಧೀನ ವಿರೋಧಿಸಿ ಪೊರಕೆ ಚಳವಳಿ

ಪ್ರಜಾವಾಣಿ ವಾರ್ತೆ

ಯಲಹಂಕ: ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ ಬಿಡಿಎ ನಡೆಸುತ್ತಿರುವ ಭೂಸ್ವಾಧೀನ ವಿರೋಧಿಸಿ, 17 ಗ್ರಾಮದ ಜನರು ಸೋಮವಾರ ಪೊರಕೆ ಚಳವಳಿ ನಡೆಸಿದರು.

ನೂರಾರು ರೈತ ಮಹಿಳೆಯರು ಹಾಗೂ ರೈತರು ಕೈಗೆ ಕಪ್ಪುಪಟ್ಟಿ ಕಟ್ಟಿಕೊಂಡು, ಕೈಯಲ್ಲಿ ಪೊರಕೆ ಹಿಡಿದು ರಾಮಗೊಂಡನಹಳ್ಳಿಯಲ್ಲಿ ಜಮಾಯಿಸಿದರು. ಅಲ್ಲಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆಯು ಅನಂತಪುರ, ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಪುಟ್ಟೇನಹಳ್ಳಿ ಮಾರ್ಗವಾಗಿ ಯಲಹಂಕದ ತಾಲ್ಲೂಕು ಕಚೇರಿಗೆ ಆಗಮಿಸಿತು.

ಯಲಹಂಕ ಬ್ಲಾಕ್ ಕಾಂಗ್ರೆಸ್ ಸಮಿತಿ ಹಾಗೂ ಜೆಡಿಎಸ್ ಮುಖಂಡರು ಮೆರವಣಿಗೆಯಲ್ಲಿ ಭಾಗಿಯಾಗುವ ಮೂಲಕ ಪ್ರತಿಭಟನೆ ಬೆಂಬಲಿಸಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ರೈತ ಮುಖಂಡ ರಾಮಗೊಂಡನಹಳ್ಳಿ ಎಂ.ರಮೇಶ್ ಮಾತನಾಡಿ, 'ಯಲಹಂಕ ತಾಲ್ಲೂಕಿನ 17 ಹಳ್ಳಿಗಳ 3,546 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲು ಬಿಡಿಎ ಮುಂದಾಗಿದೆ. ಇದರಿಂದ ಕೃಷಿ, ಹೈನುಗಾರಿಕೆ ಮತ್ತಿತರ ಕಸುಬುಗಳನ್ನು ಅವಲಂಬಿಸಿ ಬದುಕುತ್ತಿದ್ದ ಸಾವಿರಾರು ರೈತ ಕುಟುಂಬಗಳು ಬೀದಿಪಾಲಾಗುತ್ತಿವೆ' ಎಂದು ಆತಂಕ ವ್ಯಕ್ತಪಡಿಸಿದರು.

'1894ರ ಬ್ರಿಟಿಷ್ ಕಾಯ್ದೆ ರೂಪದಲ್ಲಿ ಪರಿಹಾರ ನೀಡದೆ, ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಹಲವು ಬಾರಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಗಿದೆ. ಆದರೆ, ಈ ವರೆಗೂ ಪರಿಹಾರ ನೀಡಿಲ್ಲ' ಎಂದು ದೂರಿದರು.

ಯಲಹಂಕ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎನ್.ಕೃಷ್ಣಪ್ಪ, ಪರಿಹಾರಕ್ಕಾಗಿ ರೈತರು ಕಳೆದ 16 ವರ್ಷಗಳಿಂದ ನಿರಂತರ ಹೋರಾಟ ನಡೆಸುತ್ತಿದ್ದರೂ ಬಿಡಿಎ ಇದುವರೆಗೂ ಪರಿಹಾರ ನೀಡದೆ ವಿಳಂಬಧೋರಣೆ ಅನುಸರಿಸುತ್ತಿದೆ ಎಂದು ಎಂದು ಆಪಾದಿಸಿದರು.

ತಹಶೀಲ್ದಾರ್ ಕಚೇರಿಯಲ್ಲಿ ಶಿರಸ್ತೇದಾರ್ ಎಸ್.ಮಹೇಶ್‌ಗೆ ಮನವಿ ಸಲ್ಲಿಸಿದರು.

ಮುಖಂಡರಾದ ಮಾವಳಿಪುರ ಬಿ. ಶ್ರೀನಿವಾಸ್, ಬಸವರಾಜ ಪಾದಯಾತ್ರಿ, ಮುನಿರಾಜು, ವಸಂತ್ ವೀರಸಾಗರ, ಕಾಂಗ್ರೆಸ್ ಮುಖಂಡರಾದ ಕೇಶವ ರಾಜಣ್ಣ, ಲಾವಣ್ಯ ನರಸಿಂಹ ಮೂರ್ತಿ, ನಾಗರಾಜಗೌಡ, ಪ್ರಜಾ ವಿಮೋಚನಾ ಚಳವಳಿ (ಸ್ವಾಭಿಮಾನ) ರಾಜ್ಯ ಘಟಕದ ಅಧ್ಯಕ್ಷ ಮುನಿ ಆಂಜಿನಪ್ಪ ಇದ್ದರು.


ಬಿಡಿಎ ಭೂಸ್ವಾಧೀನ ವಿರೋಧಿಸಿ, 17 ಗ್ರಾಮದ ಜನರು ಸೋಮವಾರ ಪೊರಕೆ ಚಳವಳಿ ನಡೆಸಿದರು.

'ಶಾಲೆಗಳ ಅಭಿವೃದ್ಧಿಗೆ ₹13 ಸಾವಿರ ಕೋಟಿ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳ ಮೂಲಸೌಕರ್ಯ, ದುರಸ್ತಿ ಹಾಗೂ ನಿರ್ವಹಣೆಗಾಗಿ 2023–24ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ₹ 13 ಸಾವಿರ ಕೋಟಿ ಮೀಸಲಿಡಬೇಕು ಎಂದು ಕೋರಿ, ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರ ಎಂ.ಆರ್. ದೊರೆಸ್ವಾಮಿ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಶಿಕ್ಷಣದ ಮೂಲ ಉದ್ದೇಶಗಳು, ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿ ರೂಪಿಸಬೇಕು. ಕೊಠಡಿಗಳು, ಪೀಠೋಪಕರಣಗಳು, ನೀರು, ಶೌಚಾಲಯ, ಲ್ಯಾಬ್‌ಗಳ ನಿರ್ಮಾಣಕ್ಕಾಗಿ ₹ 10 ಸಾವಿರ ಕೋಟಿ, ಶಾಲೆಗಳ ದುರಸ್ತಿ ಹಾಗೂ ನಿರ್ವಹಣೆಗಾಗಿ ₹ 3 ಸಾವಿರ ಕೋಟಿ ಪ್ರತ್ಯೇಕ ಅನುದಾನ ಮೀಸಲಿಡಬೇಕು ಎಂದು ಕೋರಿದ್ದಾರೆ. ಯೋಗ ಮತ್ತು ಧ್ಯಾನವನ್ನು ಶಿಕ್ಷಣದ ಎಲ್ಲ ಹಂತಗಳಲ್ಲೂ ಅನುಷ್ಠಾನಗೊಳಿಸಬೇಕು. ಮೌಲ್ಯ ಶಿಕ್ಷಣವನ್ನು ಶಿಕ್ಷಣದ ಅವಿಭಾಜ್ಯ ಅಂಗವೆಂದು ಪರಿಗಣಿಸಬೇಕು. ಎಲ್ಲ ಶಿಫಾರಸುಗಳನ್ನು ಬಜೆಟ್‌ನಲ್ಲಿ ಅನುಮೋದಿಸಿ, ಸರ್ಕಾರಿ ಕಾರ್ಯಕ್ರಮಗಳಾಗಿ ಅನುಷ್ಠಾನಗೊಳಿಸಬೇಕು ಎಂದಿದ್ದಾರೆ.

ಮಾರ್ಚ್ 30ರಿಂದ 85ನೇ ರಾಮನವಮಿ ಸಂಗೀತೋತ್ಸವ

ಬೆಂಗಳೂರು: ಕಲಾಪ್ರೇಮಿಗಳಿಗೆ ತಿಂಗಳು ಪೂರ್ತಿ ಸಂಗೀತದ ರಸದೌತಣ ಬಡಿಸಲು ಶ್ರೀರಾಮಸೇವಾ ಮಂಡಳಿಯ ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಸಜ್ಜಾಗಿದೆ. ಮಾರ್ಚ್30 ರಿಂದ ಏಪ್ರಿಲ್ 30ರವರೆಗೆ 85ನೇ 'ಶ್ರೀರಾಮನವಮಿ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ'ವನ್ನು ಟ್ರಸ್ಟ್ ಹಮ್ಮಿಕೊಂಡಿದೆ.

ಚಾಮರಾಜಪೇಟೆಯ ಹಳೆಕೋಟೆ ಪ್ರೌಢಶಾಲೆಯ ಆವರಣದಲ್ಲಿ ಖ್ಯಾತ ಸಂಗೀತಗಾರರು ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಿದ್ದಾರೆ. ಹಿಂದೂಸ್ತಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತಗಾರರು, ವಿದ್ವಾಂಸರು, ವೀಣೆ, ಪಿಟೀಲು, ಕೊಳಲು ವಾದಕರು ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ.

30ರಂದು ಸಂಗೀತೋತ್ಸವವಕ್ಕೆ ಚಾಲನೆ ಸಿಗಲಿದೆ. ಬಾಂಬೆ ಜಯಶ್ರೀ, ರಾಮ್‌ನಾಥ್, ಪ್ರವೀಣ್ ಗೋಡ್ಖಿಂಡಿ ಮತ್ತು ಅಂಬಿ ಸುಬ್ರಮಣಿಯಂ, ಮಲ್ಲಾಡಿ ಸಹೋದರರು, ತ್ರಿಚೂರು ಸಹೋ ದರರು, ವಾರಿಜಾಶ್ರೀ, ಜಯತೀರ್ಥ ಮೇವುಂಡಿ, ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್, ರಯಾಸ್ ಮತ್ತು ಹಫೀಜ್ ಬಾಲೇಖಾನ್, ವಿದ್ಯಾಭೂಷಣ, ವೆಂಕಟೇಶ್ ಕುಮಾರ್, ಶಿವಮಣಿ, ಯು. ರಾಜೇಶ್ ಮತ್ತು ಹರ್ಮೀತ್, ಎಂ.ಎಸ್. ಶೀಲಾ, ಸುಧಾ ರಘುನಾಥ್, ಸೇರಿದಂತೆ ನಾಡಿನ ಹಲವು ಸಂಗೀತ ವಿದ್ವಾಂಸರು ಕಛೇರಿ ನಡೆಸಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿ : 9448079079

ಕ್ಷೇತ್ರದ ಅಭ್ಯರ್ಥಿ ಜವರಾಯಿಗೌಡ: ಎಚ್‌.ಡಿ.ಕುಮಾರಸ್ವಾಮಿ ಘೋಷಣೆ

'ಯಶವಂತಪುರ: ಜೆಡಿಎಸ್ ಗೆಲ್ಲದಿದ್ದರೆ ರಾಜಕೀಯ ನಿವೃತ್ತಿ'

ಪ್ರಜಾವಾಣಿ ವಾರ್ತೆ

ಕೆಂಗೇರಿ: ಯಶವಂತಪುರ ಕ್ಷೇತ್ರದಿಂದ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿಯೇ ತೀರುತ್ತೇನೆ. ವಿಫಲವಾದಲ್ಲಿ ರಾಜಕೀಯದಿಂದ ನಿವೃತ್ತಿ ಪಡೆಯುವೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಘೋಷಿಸಿದರು.

ಕಾರ್ಯಕರ್ತರ ಸಭೆಯಲ್ಲಿ ಜವರಾಯಿಗೌಡ ಅವರನ್ನು ಕ್ಷೇತ್ರದ ಅಭ್ಯರ್ಥಿಯಾಗಿ ಘೋಷಿಸಿ ಅವರು ಮಾತನಾಡಿದರು.

ಕಳೆದ ಮೂರು ಚುನಾವಣೆಗಳಲ್ಲಿ ಜವರಾಯಿಗೌಡ ಕಡಿಮೆ ಅಂತರದಲ್ಲಿ ಸೋತಿದ್ದಾರೆ. ಕ್ಷೇತ್ರದ ಮತದಾರರ ಅನುಕಂಪ ಅವರ ಮೇಲಿದೆ. ಈ ಬಾರಿ ಜನರು ಅವರನ್ನು ಕೈ ಹಿಡಿಯಲಿದ್ದಾರೆ. ವೈಯಕ್ತಿಕವಾಗಿ ಬೆಂಬಲ ನೀಡುವ ಅವರನ್ನು ಜಯಶೀಲರನ್ನಾಗಿ ಮಾಡಿಯೇ ತೀರುವೆ ಎಂದು ಹೇಳಿದರು.


ಜೆಡಿಎಸ್ ಕಾರ್ಯಕರ್ತರು ಆಯೋಜಿಸಿದ್ದ ಸಭೆಯಲ್ಲಿ ಎಚ್‌.ಡಿ.ಕುಮಾರಸ್ವಾಮಿ, ಶಾಸಕರಾದ ಅನ್ನದಾನಿ, ಮಂಜುನಾಥ್; ಅಭ್ಯರ್ಥಿ ಜವರಾಯಿಗೌಡ, ನರಸಿಂಹಮೂರ್ತಿ, ಪಂಚಲಿಂಗಯ್ಯ, ಕೇಶವಮೂರ್ತಿ ಇದ್ದರು

ತ್ಯಾಜ್ಯ ವಿಲೇವಾರಿ ದೊಡ್ಡ ಮಾಫಿಯವಾಗಿದೆ. ತ್ಯಾಜ್ಯ ಸಂಸ್ಕರಣೆಗೆ ಹಲವಾರು ನೂತನ ವಿಧಾನಗಳಿವೆ. ಸರ್ಕಾರ ಈ ಬಗ್ಗೆ ಬದ್ಧತೆ ತೋರುತ್ತಿಲ್ಲ. ₹ 8 ಸಾವಿರ ಕೋಟಿ ಖರ್ಚಾದರೂ ಬೆಂಗಳೂರಿನಲ್ಲಿ ಗುಂಡಿಗಳ ಸಂಖ್ಯೆ ಕಡಿಮೆಯಾಗಿಲ್ಲ ಎಂದು ಅವರು ದೂರಿದರು.

ಕಾಂಗ್ರೆಸ್- ಬಿಜೆಪಿ ಒಳ ಮೈತ್ರಿಯಿಂದ ಕಳೆದ ಉಪಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆಯಾಯಿತು ಎಂದು ಅವರು ತಿಳಿಸಿದರು.

'ಯಶವಂತಪುರ ವಿಧಾನಸಭಾ ಕ್ಷೇತ್ರದ ಆಕಾಂಕ್ಷಿ ನಾನಲ್ಲ. ಜನಸೇವೆ ಮಾಡಲು ಅಧಿಕಾರವೊಂದೇ ಮಾರ್ಗವಲ್ಲ' ಎಂದು ಜೆಡಿಎಸ್ ಮುಖಂಡ ಜವರಾಯಿಗೌಡ ಅವರು ಹೇಳಿದರು.

ಅಭ್ಯರ್ಥಿಯಾಗಲು ಒತ್ತಾಯ: 'ಕುಮಾರಸ್ವಾಮಿ ಅವರೇ ಯಶವಂತಪುರ ಕ್ಷೇತ್ರದಿಂದ ಸ್ಪರ್ಧೆ ಮಾಡಬೇಕು. ಕಳೆದ ಮೂರು ಬಾರಿ ನಡೆದ ಚುನಾವಣೆಯಲ್ಲೂ ಜೆಡಿಎಸ್ ಎರಡನೇ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಈ ಬಾರಿ ನೀವೇ ಸ್ಪರ್ಧಿಸಿದರೆ ಕಾರ್ಯಕರ್ತರ ವಿಶ್ವಾಸ ಇಮ್ಮಡಿಗೊಳ್ಳಲಿದೆ' ಎಂದು ಕಾರ್ಯಕರ್ತರು ಒತ್ತಾಯಿಸಿದರು.

ಶಾಸಕರಾದ ಅನ್ನದಾನಿ, ಎ.ಮಂಜುನಾಥ್ ಹಾಗೂ ಪಂಚಲಿಂಗಯ್ಯ, ಹನುಮಂತೇಗೌಡ, ಕುಂಬಳಗೂಡು ನರಸಿಂಹಮೂರ್ತಿ, ಕೇಶವ ಮೂರ್ತಿ, ಕಿಟ್ಟಿ ಮತ್ತು ಅಪಾರ ಸಂಖ್ಯೆಯ ಕಾರ್ಯಕರ್ತರು ಉಪಸ್ಥಿತರಿದ್ದರು.

ಅಡ್ಡಾದಿಡ್ಡಿ ಕಾರು ಚಾಲನೆ: ಇಬ್ಬರ ಸಾವು

ನೃಪತುಂಗ ರಸ್ತೆಯಲ್ಲಿ ಸರಣಿ ಅಪಘಾತ • ಶಾಸಕ ಹಾಲಪ್ಪ ಹೆಸರಿನ ಸ್ಟಿಕ್ಕರ್ ಅಂಟಿಸಿದ್ದ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ


ಅಯ್ಯಪ್ಪ


ಮಜೀದ್ ಖಾನ್

ಬೆಂಗಳೂರು: ನೃಪತುಂಗ ರಸ್ತೆಯಲ್ಲಿ ಚಾಲಕನೊಬ್ಬ ಕಾರನ್ನು ಅಡ್ಡಾದಿಡ್ಡಿಯಾಗಿ ಚಲಾಯಿಸಿದ್ದರಿಂದ ಸರಣಿ ಅಪಘಾತ ಸಂಭವಿಸಿದ್ದು, ದ್ವಿಚಕ್ರ ವಾಹನ ಸವಾರರಿಬ್ಬರು ಮೃತಪಟ್ಟಿದ್ದಾರೆ.

'ಎಚ್‌ಬಿಆರ್ ಲೇಔಟ್ ನಿವಾಸಿ ಮಜೀದ್‌ಖಾನ್ (36) ಹಾಗೂ ಕೆ.ಜಿ. ಹಳ್ಳಿ ನಿವಾಸಿ ಅಯ್ಯಪ್ಪ (60) ಮೃತರು. ಅಪಘಾತದಿಂದಾಗಿ ಮೊಹಮ್ಮದ್ ರಿಯಾಜ್, ಮೊಹಮ್ಮದ್ ಸಲೀಂ, ರಿಯಾಜ್ ಪಾಷಾ ಹಾಗೂ ಶೇರ್ ಗಿಲಾನಿ ಎಂಬುವರು ಗಾಯಗೊಂಡಿದ್ದು, ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಸಂಚಾರ ಪೊಲೀಸರು ಹೇಳಿದರು.

'ಅರಣ್ಯ ಇಲಾಖೆಯ ನಿವೃತ್ತ ಅಧಿಕಾರಿ ರಾಮು ಸುರೇಶ್ ಎಂಬುವವರಿಗೆ ಸೇರಿದ್ದ ಇನ್ನೋವಾ ಕ್ರಿಸ್ಟಾ ಕಾರನ್ನು (ಕೆಎ 50 ಎಂಎ 6600) ಯಲಹಂಕ ನ್ಯೂಟೌನ್ ನಿವಾಸಿ ಜಿ. ಮೋಹನ್ (48) ಎಂಬಾತ ಚಲಾಯಿಸುತ್ತಿದ್ದ. ಈತನ ಅತಿ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯಿಂದ ಅಪಘಾತ ಸಂಭವಿಸಿದೆ. ಚಾಲಕ ಮೋಹನ್‌ನನ್ನು ಬಂಧಿಸಿ, ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಸಾಗರ ಶಾಸಕ ಎಚ್. ಹಾಲಪ್ಪ ಅವರ ಹೆಸರಿನ ಸ್ಟಿಕ್ಕರ್ ಕಾರಿನ ಮೇಲಿತ್ತು. ರಾಮು ಸುರೇಶ್ ಅವರ ಕಾರಿಗೆ ಸ್ಟಿಕ್ಕರ್ ಕೊಟ್ಟವರು ಯಾರು? ಕಾರನ್ನು ಯಾರೆಲ್ಲ ಬಳಸುತ್ತಿದ್ದರು? ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಹೇಳಿದರು.

ದಟ್ಟಣೆ ರಸ್ತೆಯಲ್ಲಿ ಅತಿ ವೇಗದ ಚಾಲನೆ: 'ಕೆ.ಆರ್. ವೃತ್ತದಿಂದ ಕಾರ್ಪೊರೇಷನ್ ವೃತ್ತದವರೆಗಿನ ನೃಪತುಂಗ ರಸ್ತೆಯಲ್ಲಿ ನಿತ್ಯವೂ ವಾಹನಗಳ ದಟ್ಟಣೆ ಇರುತ್ತದೆ. ಸೋಮವಾರ ಮಧ್ಯಾಹ್ನ 3.30ರ ಸುಮಾರಿಗೆ ಈ ರಸ್ತೆಯಲ್ಲಿ ಹೊರಟಿದ್ದ ಚಾಲಕ ಮೋಹನ್, ಅತಿ ವೇಗವಾಗಿ ಇನ್ನೋವಾ ಕಾರು ಚಲಾಯಿಸಿದ್ದ' ಎಂದು ಪೊಲೀಸರು ಹೇಳಿದರು.


ನೃಪತುಂಗ ರಸ್ತೆಯಲ್ಲಿ ಸರಣಿ ಅಪಘಾತಕ್ಕೆ ಕಾರಣವಾದ ಇನ್ನೋವಾ ಕಾರು

'ರಸ್ತೆಯಲ್ಲಿ ತೆರಳುತ್ತಿದ್ದ ಎರಡು ಕಾರು (ಟೊಯೊಟಾ ಇಡಿಯೊಸ್ ಹಾಗೂ ಮಾರುತಿ ಆಲ್ಟೊ) ಹಾಗೂ ಮೂರು ದ್ವಿಚಕ್ರ ವಾಹನಗಳಿಗೆ (ಬಜಾಜ್ ಪಲ್ಸರ್ ಹಾಗೂ ಎರಡು ಹೊಂಡಾ ಆಕ್ಟಿವಾ) ಇನ್ನೋವಾ ಕಾರು ಡಿಕ್ಕಿ ಹೊಡೆದಿತ್ತು. ಕಾರಿನಲ್ಲಿದ್ದವರಿಗೂ ಸಣ್ಣಪುಟ್ಟ ಗಾಯವಾಗಿದೆ. ದ್ವಿಚಕ್ರ ವಾಹನದಿಂದ ರಸ್ತೆಗೆ ಬಿದ್ದಿದ್ದ ಮಜೀದ್‌ಖಾನ್ ಮೇಲೆಯೇ ಕಾರಿನ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.'

'ಇನ್ನೊಂದು ದ್ವಿಚಕ್ರ ವಾಹನದಲ್ಲಿದ್ದ ಅಯ್ಯಪ್ಪ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆಸ್ಪತ್ರೆಯಲ್ಲೇ ಅವರು ಅಸುನೀಗಿದ್ದಾರೆ. ಉಳಿದಂತೆ ನಾಲ್ವರು ತೀವ್ರ ಗಾಯಗೊಂಡಿದ್ದು, ಅವರ ಸ್ಥಿತಿಯೂ ಚಿಂತಾಜನಕವಾಗಿದೆ' ಎಂದು ಪೊಲೀಸರು ತಿಳಿಸಿದರು.

'ಮೃತ ಮಜೀದ್ ಖಾನ್, ಆಟೊಮೊಬೈಲ್ ಬಿಡಿಭಾಗಗಳ ಮಾರಾಟಗಾರ. ಅಯ್ಯಪ್ಪ, ಪಾರ್ಕಿಂಗ್ ಜಾಗವೊಂದರ ವ್ಯವಸ್ಥಾಪಕ' ಎಂದರು.

ಅಪಘಾತದಿಂದಾಗಿ ನೃಪತುಂಗ ರಸ್ತೆ, ಕಾರ್ಪೊರೇಷನ್ ವೃತ್ತ, ಶೇಷಾದ್ರಿ ರಸ್ತೆಯಲ್ಲಿ ವಿಪರೀತ ಸಂಚಾರ ದಟ್ಟಣೆ ಉಂಟಾಗಿತ್ತು. ಮಾರ್ಗ ಬದಲಾವಣೆ ಮಾಡಿ, ಕಬ್ಬನ್ ಪಾರ್ಕ್ ಒಳಗಿನ ರಸ್ತೆ ಮೂಲಕ ವಾಹನಗಳನ್ನು ಮುಂದಕ್ಕೆ ಕಳುಹಿಸಲಾಯಿತು. ಅಪಘಾತ ಸ್ಥಳದಲ್ಲಿದ್ದ ಕಾರುಗಳು ಹಾಗೂ ದ್ವಿಚಕ್ರ ವಾಹನಗಳನ್ನು ಪೊಲೀಸರು ತೆರವುಗೊಳಿಸಿದರು.

'ಆ್ಯಕ್ಸಲರೇಟರ್ ಒತ್ತಿದ್ದರಿಂದ ಅಪಘಾತ'

'ಅಪಘಾತಕ್ಕೆ ಕಾರಣವಾದ ಇನ್ನೋವಾ ಕ್ರಿಸ್ಟಾ, ಆಟೊಮೆಟಿಕ್ ಗೇರ್ ಇರುವ ಕಾರು. ಚಾಲಕ ಮೋಹನ್, ಕಾರು ಚಲಾಯಿಸಿಕೊಂಡು ಕೆ.ಆರ್.ವೃತ್ತದಿಂದ ಕಾರ್ಪೊರೇಷನ್ ವೃತ್ತದತ್ತ ಹೊರಟಿದ್ದ' ಎಂದು ಪೊಲೀಸರು ಹೇಳಿದರು.

'ಕಾರ್ಪೊರೇಷನ್ ವೃತ್ತದಲ್ಲಿ ಏಕಾಏಕಿ ಸಿಗ್ನಲ್ ಬಿದ್ದಿತ್ತು. ಕಾರು ನಿಲ್ಲಿಸಲು ಮುಂದಾಗಿದ್ದ ಮೋಹನ್, ಬ್ರೇಕ್ ಒತ್ತುವ ಬದಲು ಆ್ಯಕ್ಸಲರೇಟರ್ ಒತ್ತಿದ್ದರು. ಇದರಿಂದಾಗಿ ಕಾರು, ಅತಿ ವೇಗದಲ್ಲಿ ಮುಂದಕ್ಕೆ ಹೋಗಿ ಕಾರುಗಳು ಹಾಗೂ ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆದಿತ್ತು. ಈ ಬಗ್ಗೆ ಆರೋಪಿ ಹೇಳಿಕೆ ನೀಡಿದ್ದಾನೆ' ಎಂದು ತಿಳಿಸಿದರು

'ಮೀಸಲಾತಿ ಕಬಳಿಸುತ್ತಿರುವ ಬಲಾಢ್ಯರು'

ಬೆಂಗಳೂರು: ಕಳೆದ 20 ವರ್ಷಗಳಿಂದ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿ ಪರಿಷ್ಕರಣೆಯಾಗಿಲ್ಲ. ಇದರಿಂದ ಬಲಾಢ್ಯರು ಮೀಸಲಾತಿ ಪಡೆದು ಶೋಷಿತರ ಪಾಲನ್ನು ಕಬಳಿಸುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಆರೋಪಿಸಿದೆ.

'ಹಿಂದುಳಿದ ವರ್ಗಗಳ ಶಾಶ್ವತ ಆಯೋಗಕ್ಕೆ 2003ರಿಂದ 2019ರ ವರೆಗೆ ಇತರೆ ಹಿಂದುಳಿದ ಪ್ರವರ್ಗಗಳ ಪಟ್ಟಿಗೆ ಸೇರಿಸಲು ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣಿಸುತ್ತಿಲ್ಲ. ಆದರೆ, 2020ರಿಂದ ಇದುವರೆಗೂ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಿ, ಸರ್ಕಾರವೇ ಕಾನೂನುಬಾಹಿರವಾಗಿ ಮಧ್ಯಂತರ ವರದಿ ಜಾರಿಗೊಳಿಸುವ ಹುನ್ನಾರ ನಡೆಸಿದೆ. ಬಾಕಿ ಅರ್ಜಿಗಳ ಬಗ್ಗೆ ತೀರ್ಮಾನ ಕೈಗೊಳ್ಳದೇ, ಕೆಲ ಸಮುದಾಯಗಳ ಒತ್ತಡಕ್ಕೆ ಮಣಿದು ತರಾತುರಿಯಲ್ಲಿ ರಾಜಕೀಯ ಒಲೈಕೆ ಮಾಡುತ್ತಿರುವುದು ಎಷ್ಟು ಸರಿ? ಇಂತಹ ಸರ್ಕಾರದಿಂದ ಸಾಮಾಜಿಕ ನ್ಯಾಯ ನೀಡಲು ಸಾಧ್ಯವೇ' ಎಂದು ಒಕ್ಕೂಟದ ಕಾರ್ಯದರ್ಶಿ ಎಣ್ಣೆಗೆರೆ ಆರ್. ವೆಂಕಟರಾಮಯ್ಯ ಪ್ರಶ್ನಿಸಿದರು.

'ಕಾಂತರಾಜು ಆಯೋಗವು ಜಾತಿವಾರು ಸಮೀಕ್ಷೆಯನ್ನು ರಾಜ್ಯದ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಶೇ 90ರಷ್ಟು ಭಾಗ ಸಮೀಕ್ಷೆ ನಡೆಸಿದೆ. ಈ ವರದಿಯನ್ನು ಜಾರಿಗೊಳಿಸಬೇಕೆಂದು ಈಗ ಹೋರಾಟ ನಡೆಸುತ್ತಿರುವ ಪ್ರಬಲ ಸಮುದಾಯವಾಗಲಿ, ಅವರ ಸ್ವಾಮೀಜಿಯಾಗಲಿ ಧ್ವನಿ ಎತ್ತದಿರುವುದು ದುರದುಷ್ಟಕರ' ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸ್ಥಳೀಯವಾಗಿ ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆ: ಆಕ್ಷೇಪ

ಬೆಂಗಳೂರು: ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲೇ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ, ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆ ನಡೆಸುವುದಕ್ಕೆ ರಾಜ್ಯ ಸಂಪನ್ಮೂಲ ವ್ಯಕ್ತಿ ಬಿ.ರವೀಶ್ ಕುಮಾರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪ್ರತಿ ತಾಲ್ಲೂಕಿನಲ್ಲಿ ಒಂದೊಂದು ಬಗೆಯ ಪ್ರಶ್ನೆಗಳನ್ನು ಕೇಳಿದರೆ ಮಕ್ಕಳಿಗೆ ರಾಜ್ಯಮಟ್ಟದ ಪರೀಕ್ಷೆ ಎದುರಿಸಿದ ಅನುಭವ ಆಗುವುದಾದರೂ ಹೇಗೆ? ಈಗಾಗಲೇ ಹಲವು ತಾಲ್ಲೂಕುಗಳಲ್ಲಿ ಸ್ಥಳೀಯವಾಗಿ ಪೂರ್ವಸಿದ್ಧತಾ ಪರೀಕ್ಷೆ ನಡೆಸಲಾಗಿದೆ. ಹೊಸದಾಗಿ ಅಸ್ತಿತ್ವಕ್ಕೆ ಬಂದ ಪರೀಕ್ಷಾ ಮಂಡಳಿಗೆ ಒಂದು ಪೂರ್ವಸಿದ್ಧತಾ ಪರೀಕ್ಷೆ ನಡೆಸುವ ಸಾಮರ್ಥ್ಯ ಇಲ್ಲವೇ? ಎಲ್ಲವನ್ನೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾಡುವುದಾದರೆ ಮಂಡಳಿಯ ಅಗತ್ಯವಿದೆಯೇ? ಇದು ರಾಜ್ಯದ ಮಕ್ಕಳಿಗೆ ಶಿಕ್ಷಣ ಇಲಾಖೆ ಮಾಡುತ್ತಿರುವ ಅನ್ಯಾಯ ಎಂದು ದೂರಿದ್ದಾರೆ.

ಕರ್ನಾಟಕ ಪ್ರೌಢಶಾಲಾ ಸಹಶಿಕ್ಷಕರ ಸಂಘ ಈ ವಿಚಾರದಲ್ಲಿ ಮೌನವಹಿಸಿರುವುದು ಸರಿಯಲ್ಲ. ಅಧ್ಯಕ್ಷ ಸಿದ್ದಬಸಪ್ಪ ಧ್ವನಿ ಎತ್ತಬೇಕು ಎಂದು ಆಗ್ರಹಿಸಿದ್ದಾರೆ.

ಕನಿಷ್ಠ ವೇತನ ₹21 ಸಾವಿರಕ್ಕೆ ಏರಿಸಲು ಒತ್ತಾಯ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ ವೇತನ ಪರಿಷ್ಕರಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಆಗ್ರಹಿಸಿ, ಭಾರತೀಯ ಮಜ್ದೂರ್ ಸಂಘದ (ಬಿ.ಎಂ.ಎಸ್) ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

'ಆರೋಗ್ಯ ಇಲಾಖೆಯ ಒಳ ಹಾಗೂ ಹೊರ ಗುತ್ತಿಗೆ ನೌಕರರಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ಶ್ರೀನಿವಾಸಾಚಾರಿ ವರದಿ ತಕ್ಷಣ ಜಾರಿಗೊಳಿಸಬೇಕು. ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ ನೌಕರರ ಸೇವೆ ಕಾಯಂಗೊಳಿಸಬೇಕು. ಕೆಎಸ್‌ಆರ್‌ಟಿಸಿ ನೌಕರರ ವೇತನ ಪರಿಷ್ಕರಣೆ ಮಾಡಬೇಕು. ಅವರಿಗೆ ಸರ್ಕಾರಿ ನೌಕರರಿಗೆ ಸಮವಾದ ವೇತನ ಮಂಜೂರು ಮಾಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಎಲ್ಲ ಇಲಾಖೆಯಲ್ಲಿ ಒಳ ಗುತ್ತಿಗೆ ಹಾಗೂ ಹೊರಗುತ್ತಿಗೆ ಕಾರ್ಮಿಕ ಪದ್ಧತಿ ಕೈಬಿಡಬೇಕು. ಗುತ್ತಿಗೆ ಕಾರ್ಮಿಕರ ಕಾಯಂಗೊಳಿಸಬೇಕು' ಎಂದು ಒತ್ತಾಯಿಸಿದರು.

'ಕಟ್ಟಡ ಕಾರ್ಮಿಕ ಮಂಡಳಿಯಲ್ಲಿ ಭ್ರಷ್ಟಾಚಾರ ಮಿತಿಮೀರಿದೆ. ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಮಂಡಳಿಯಲ್ಲಿ ಫಲಾನುಭವಿಗಳ ಅರ್ಜಿಗಳನ್ನು ಶೀಘ್ರವೇ ವಿಲೇವಾರಿ ಮಾಡಬೇಕು. ಮಧ್ಯವರ್ತಿಗಳ ಹಾವಳಿ ತಪ್ಪಿಸಬೇಕು' ಎಂದು ಆಗ್ರಹಿಸಿದರು.


ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಭಾರತೀಯ ಮಜ್ದೂರ್ ಸಂಘದ ನೇತೃತ್ವದಲ್ಲಿ ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯಿತು –ಪ್ರಜಾವಾಣಿ ಚಿತ್ರ

'ಕಾರ್ಮಿಕರ ಕನಿಷ್ಠ ವೇತನವನ್ನು ₹ 21 ಸಾವಿರಕ್ಕೆ ಏರಿಕೆ ಮಾಡಿ, 3 ವರ್ಷಕ್ಕೊಮ್ಮೆ ಪರಿಷ್ಕರಣೆ ಮಾಡಬೇಕು. ಎಲ್ಲ ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರಿಗೆ ಪಿ.ಎಫ್ ನಿಧಿಯಿಂದ ನೀಡಲಾಗುತ್ತಿರುವ ಪಿಂಚಣಿಯನ್ನು ₹ 5 ಸಾವಿರಕ್ಕೆ ಏರಿಸಬೇಕು' ಎಂದು ಆಗ್ರಹಿಸಿದರು.

'ಗ್ರಾಚ್ಯುಟಿಯನ್ನು 15 ದಿನದಿಂದ ಒಂದು ತಿಂಗಳಿಗೆ ಏರಿಸಬೇಕು. ಅಂಗನವಾಡಿ, ಆಶಾ, ಬಿಸಿಯೂಟ ಕಾರ್ಮಿಕರ ಸೇವೆ ಕಾಯಂಗೊಳಿಸಬೇಕು. ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಮಿಕ ಭವನ ನಿರ್ಮಿಸಬೇಕು. ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗೆ ಬಂಡವಾಳ ಹೂಡಿಕೆ ಮಾಡಿ ಪುನಶ್ಚೇತನಗೊಳಿಸಬೇಕು. ಮೈಸೂರು ಕಾಗದ ಕಾರ್ಖಾನೆಯನ್ನು ಮತ್ತೆ ಆರಂಭಿಸಬೇಕು' ಎಂದು ಒತ್ತಾಯಿಸಿದರು.

ಮುನಿರತ್ನ ಭೇಟಿ: ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ತೋಟಗಾರಿಕಾ ಸಚಿವ ಮುನಿರತ್ನ ಅವರು ಮನವಿ ಸ್ವೀಕರಿಸಿ ಮಾತನಾಡಿ, 'ಆರೋಗ್ಯ ಇಲಾಖೆಯ ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕರ ಸಮಸ್ಯೆಗಳನ್ನು ಸರ್ಕಾರ ಇದುವರೆಗೂ ಗಮನಿಸಿದೆ. ನಿಮ್ಮ ಎಲ್ಲ ಬೇಡಿಕೆಗಳನ್ನು ಮುಖ್ಯಮಂತ್ರಿ ಗಮನಕ್ಕೆ ತರಲಾಗುವುದು. ಅವುಗಳ ಪರಿಹಾರಕ್ಕೆ ಮುಖ್ಯಮಂತ್ರಿ ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಬಿಎಂಎಸ್‌ನ ಅಧ್ಯಕ್ಷ ಶಂಕರ್ ಸುಲೇಗಾವ್, ರಾಷ್ಟ್ರೀಯ ಉಪಾಧ್ಯಕ್ಷ ಜಿ.ಮಲ್ಲೇಶಂ, ದಕ್ಷಿಣ ಪ್ರಾಂತ್ಯದ ಸಂಘಟನಾ ಕಾರ್ಯದರ್ಶಿ ದೊರೆಸ್ವಾಮಿ, ಪ್ರಧಾನ ಕಾರ್ಯದರ್ಶಿ ವಿಶ್ವನಾಥ್, ರಾಜ್ಯ ಕಾರ್ಯದರ್ಶಿ ವಿಶ್ವಾರಾಧ್ಯ ಇದ್ದರು.

ಸುದ್ದಿ 2 ನಿಮಿಷ

ಡಿಕೆಶಿ ಮಕ್ಕಳ ಫೋಟೊ ದುರ್ಬಳಕೆ: ಎಫ್‌ಐಆರ್ ದಾಖಲು

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಮಕ್ಕಳ ಫೋಟೊ ಬಳಕೆಮಾಡಿಕೊಂಡು ಮಾನಹಾನಿ ವಿಡಿಯೊ ಹರಿಬಿಟ್ಟಿರುವ ಆರೋಪದಡಿ ಯುಟ್ಯೂಬ್‌ನಲ್ಲಿರುವ ಎರಡು ಚಾನೆಲ್‌ಗಳ ವಿರುದ್ಧ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಡಿ. ಉಮೇಶ್ ಎಂಬುವವರು ದೂರು ನೀಡಿದ್ದಾರೆ. 'ಇಂಡಿಯಾ ರಿಪೋರ್ಟ್' ಹಾಗೂ 'ಬಿಇಯು ಕನ್ನಡ' ಯುಟ್ಯೂಬ್ ಚಾನೆಲ್‌ಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಎರಡೂ ಚಾನೆಲ್‌ಗಳನ್ನು ಯಾರದ್ದು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಇವರ ಮಕ್ಕಳು ಮೀಡಿಯಾ ಮುಂದೆ ಬರೋದಿಲ್ಲ ಯಾಕೆ?' ಹಾಗೂ 'ಹೂ ಇಸ್ ಆಧಾರ ಡಿ.ಕೆ. ಶಿವಕುಮಾರ್ ಕೆಪಿಸಿಸಿ' ಶೀರ್ಷಿಕೆಯಡಿ ವಿಡಿಯೊ ಪೋಸ್ಟ್ ಮಾಡಲಾಗಿದೆ. ಶಿವಕುಮಾರ್ ಅವರ ಮಗ ಹಾಗೂ ಮಗಳ ಫೋಟೊಗಳನ್ನು ವಿಡಿಯೊದಲ್ಲಿ ಬಳಸಲಾಗಿತ್ತು' ಎಂದು ತಿಳಿಸಿವೆ.

ಏಕಲವ್ಯ ಪ್ರಶಸ್ತಿ ಪುರಸ್ಕೃತ ಚಾಲಕನ ಪುತ್ರನಿಗೆ ಸನ್ಮಾನ



ಬೆಂಗಳೂರು: ಏಕಲವ್ಯ ಪ್ರಶಸ್ತಿ ಪುರಸ್ಕೃತ ಕೆಎಸ್‌ಆರ್‌ಟಿಸಿ ಚಾಲಕ ಎಚ್.ಟಿ.ಶಂಕರ್ ಅವರ ಮಗ ಎಚ್.ಎಸ್. ಸಾಕ್ಷಾತ್ ಅವರಿಗೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಅಭಿನಂದನಾ ಪತ್ರ ನೀಡಿ ಸನ್ಮಾನಿಸಿದರು.

ಸಾಕ್ಷಾತ್ ಅವರು ಕರ್ನಾಟಕ ರಾಜ್ಯದ ನೆಟ್‌ಬಾಲ್ ತಂಡದ ನಾಯಕನಾಗಿದ್ದು, 5 ಬಾರಿ ಹ್ಯಾಂಡ್‌ಬಾಲ್ ಹಾಗೂ 3 ಬಾರಿ ನೆಟ್‌ಬಾಲ್‌ನಲ್ಲಿ ರಾಷ್ಟ್ರಮಟ್ಟದ ಟೂರ್ನಿಯಲ್ಲಿ ಭಾಗವಹಿಸಿದ್ದರು. ಮುಂಬರುವ ಏಷಿಯನ್ ನೆಟ್‌ಬಾಲ್ ಚಾಂಪಿಯನ್ ಶಿಪ್‌ಗೆ ಭಾರತ ತಂಡಕ್ಕೆ ಆಯ್ಕೆಯಾಗಿದ್ದಾರೆ.

'ಕೆಎಸ್‌ಆರ್‌ಟಿಸಿ ಸಿಬ್ಬಂದಿ ಮಕ್ಕಳು ಈ ರೀತಿ ಸಾಧನೆ ಮಾಡಿರುವುದು ನಿಜಕ್ಕೂ ಹೆಮ್ಮೆಯ ವಿಷಯ' ಎಂದು ಅನ್ಬುಕುಮಾರ್ ಹೇಳಿದರು. ನಿಗಮದ ಸಿಬ್ಬಂದಿ ಮತ್ತು ಜಾಗೃತ ವಿಭಾಗದ ನಿರ್ದೇಶಕ ಪ್ರಶಾಂತ್ ಕುಮಾರ್ ಮಿಶ್ರ ಇದ್ದರು.

ಬೈಕ್ ವ್ಹೀಲೆ ವಿಡಿಯೊ: ಸವಾರ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ರಸ್ತೆಯಲ್ಲಿ ಬೈಕ್ ವ್ಹೀಲೆ ಮಾಡಿದ್ದ ಸವಾರರೊಬ್ಬರನ್ನು ಎಚ್‌ಎಸ್‌ಆರ್ ಲೇಔಟ್ ಸಂಚಾರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಸ್ಥಳೀಯ ನಿವಾಸಿಯಾದ ಸವಾರ, 5ನೇ ಮುಖ್ಯರಸ್ತೆಯಲ್ಲಿ ಬೈಕ್ ವ್ಹೀಲೆ ಮಾಡಿದ್ದ. ಹೆಲ್ಮೆಟ್ ಸಹ ಹಾಕಿರಲಿಲ್ಲ. ಈ ದೃಶ್ಯವನ್ನು ಸೆರೆಹಿಡಿದಿದ್ದ ಸ್ಥಳೀಯರೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದರು. ಅದೇ ವಿಡಿಯೊ ಆಧರಿಸಿ ಆರೋಪಿಯನ್ನು ಬೈಕ್ ಸಮೇತ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಿಜೆಪಿ ಸರ್ಕಾರದ ಭ್ರಷ್ಟಾಚಾರಕ್ಕೆ ಸ್ವಪಕ್ಷೀಯರಿಂದಲೇ ಪ್ರಮಾಣಪತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಸರ್ಕಾರದಲ್ಲಿನ ಭ್ರಷ್ಟಾಚಾರದ ಕುರಿತು ವಿರೋಧ ಪಕ್ಷದವರು ಟೀಕಿಸುವುದಕ್ಕಿಂತ, ಅವರ ಪಕ್ಷದವರೇ ಬಾಯಿ ಬಿಡುತ್ತಿದ್ದಾರೆ. ಜಲ ಸಂಪನ್ಮೂಲ ಇಲಾಖೆಯಲ್ಲಿ ₹ 22,200 ಕೋಟಿ ಮೊತ್ತದ ಕಾಮಗಾರಿಗಳಲ್ಲಿನ ಅಕ್ರಮದ ಕುರಿತು ಬಿಜೆಪಿ ಶಾಸಕ, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಗೂಳಿಹಟ್ಟಿ ಶೇಖರ್ ಆರೋಪಿಸಿರುವುದು ಸರ್ಕಾರದ ಲಜ್ಜೆಗೇಡಿತನವನ್ನು ಬಹಿರಂಗಗೊಳಿಸಿದೆ' ಎಂದು ಜೆಡಿಎಸ್ ಹೇಳಿದೆ.

ಜೆಡಿಎಸ್‌ನ ಅಧಿಕೃತ ಟ್ವಿಟರ್ ಖಾತೆಯಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಟ್ವಿಟರ್ ಖಾತೆಗೆ ಟ್ಯಾಗ್ ಮಾಡಿ ಸೋಮವಾರ ಸರಣಿ ಟ್ವೀಟ್ ಮಾಡಿದ್ದು, 'ಟೆಂಡರ್ ರದ್ದುಪಡಿಸುವಂತೆ ಒತ್ತಾಯಿಸಿ ಬಿಜೆಪಿ ಶಾಸಕರೇ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ದೂರು ನೀಡಿದ್ದಾರೆ. ಶಾಸಕರಿಗೆ ಈಗ ಏಕೆ ಜ್ಞಾನೋದಯವಾಗಿದೆ? ಕಮಿಷನ್ ದೊರೆಯದೇ ಇರುವುದಕ್ಕೋ ಅಥವಾ ಜನದ್ರೋಹದ ಬಗ್ಗೆ ತಾಳಲಾರದ ಒಡಲ ಆಕ್ರೋಶವೊ' ಎಂದು ಪ್ರಶ್ನಿಸಿದೆ.

ಬೇಲಿಯೇ ಎದ್ದು ಹೊಲ ಮೇಯುವ ಹಾಗೆ ಸರ್ಕಾರವೇ ಮುಂದೆ ನಿಂತು ಅಕ್ರಮಗಳನ್ನು ನಡೆಸುತ್ತಿರುವುದಕ್ಕೆ ಇದಕ್ಕಿಂತ ಪ್ರಬಲ ಸಾಕ್ಷ್ಯ ಏನು ಬೇಕು? ಎಂದು ಕೇಳಿದೆ.

ಮೂರು ವರ್ಷಗಳಲ್ಲಿ ಬೆಂಗಳೂರು ನಗರದ ರಸ್ತೆ ಗುಂಡಿ ಮುಚ್ಚಲು ₹ 7,000 ಕೋಟಿ ವ್ಯಯಿಸಲಾಗಿದೆ ಎಂಬ ಮಾಧ್ಯಮ ವರದಿ ಕುರಿತು ಟ್ವೀಟ್ ಮಾಡಿದ್ದು, '23 ಸಾವಿರದಿಂದ 25 ಸಾವಿರ ಗುಂಡಿ ಮುಚ್ಚಲು ಅಷ್ಟೊಂದು ಹಣ ವ್ಯಯಿಸಿರುವುದಾಗಿ ಬಿಬಿಎಂಪಿ ಹೇಳಿದೆ. ಅಂದರೆ ಒಂದು ಗುಂಡಿ ಮುಚ್ಚಲು ₹ 28 ಲಕ್ಷದಿಂದ ₹ 30 ಲಕ್ಷ ವೆಚ್ಚ ಮಾಡಲಾಗಿದೆ. ರಸ್ತೆ ಗುಂಡಿ ಮುಚ್ಚಲು ಇಷ್ಟು ಹಣ ವೆಚ್ಚವಾಗುತ್ತದೆ ಎಂದು ಜಗತ್ತಿಗೆ ತೋರಿಸಿಕೊಟ್ಟ ನಿಮ್ಮ ಸರ್ಕಾರದ ಭಂಡತನಕ್ಕೆ ಸನ್ಮಾನ ಮಾಡಬೇಕು' ಎಂದಿದೆ.

'3 ವರ್ಷದಲ್ಲಿ ರಸ್ತೆ ಗುಂಡಿಗೆ ₹119.23 ಕೋಟಿ ವೆಚ್ಚ'

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಈ ಆರ್ಥಿಕ ವರ್ಷ ಹೊರತುಪಡಿಸಿ, ಹಿಂದಿನ ಮೂರು ವರ್ಷಗಳಲ್ಲಿ ₹119.23 ಕೋಟಿಯನ್ನು ರಸ್ತೆಗಳ ಗುಂಡಿ ಮುಚ್ಚಲು ವೆಚ್ಚ ಮಾಡಲಾಗಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

2022–23ರಲ್ಲಿ ₹36 ಕೋಟಿಗಿಂತ ಕಡಿಮೆ ಹಣವನ್ನೇ ರಸ್ತೆ ಗುಂಡಿ ಮುಚ್ಚಲು ವೆಚ್ಚ ಮಾಡಲಾಗುತ್ತದೆ. ಅದರ ಹಿಂದಿನ ಮೂರು ವರ್ಷಗಳಲ್ಲಿ ಕ್ರಮವಾಗಿ ₹45.92 ಕೋಟಿ, ₹14.42 ಕೋಟಿ, ₹58.88 ಕೋಟಿಯಷ್ಟು ವೆಚ್ಚವಾಗಿದೆ. ಸಾವಿರಾರು ಕೋಟಿಯನ್ನು ರಸ್ತೆ ಗುಂಡಿ ಮುಚ್ಚಲು ವೆಚ್ಚ ಮಾಡಿಲ್ಲ ಎಂದು ಸೋಮವಾರ ವಿವರ ನೀಡಿದರು.

ನಗರದಲ್ಲಿ ವಾರದಲ್ಲಿ ಬೃಹತ್ ಪ್ರಮಾಣದಲ್ಲಿ ಫ್ಲೆಕ್ಸ್ ತೆಗೆದಿದ್ದೇವೆ. ಯುದ್ಧೋಪಾದಿಯಲ್ಲಿ ಫ್ಲೆಕ್ಸ್ ತೆಗೆಯುವುದು ಮುಖ್ಯವಲ್ಲ. ಅದನ್ನು ಹಾಕಿದವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ವಲಯ ಅಧಿಕಾರಿಗಳಿಗೆ ಸೂಚಿಸಲಾಗಿದೆ. ವಲಯ ಆಯುಕ್ತ, ಜಂಟಿ ಆಯುಕ್ತ, ಕಂದಾಯ ನಿರೀಕ್ಷಕರು ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದರು.

ಜಾಹೀರಾತಿಗೆ ಹೊಸ ನೀತಿಯನ್ನು ಜಾರಿಗೆ ತರಲು ಯೋಜನೆ ರೂಪಿಸಲಾಗಿದೆ. ಇದು ಸರ್ಕಾರದ ಮಟ್ಟದಲ್ಲಿದೆ. ಅಲ್ಲಿ ಯಾವ ರೀತಿ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗುತ್ತದೋ ಅದೇ ರೀತಿ ಅನುಷ್ಠಾನಗೊಳಿಸಲಾಗುತ್ತದೆ ಎಂದು ಹೇಳಿದರು.

26 ಬೈಕ್ ಕದ್ದ ಆರೋಪಿ ಬಂಧನ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಲಕನಗರ, ಬನಶಂಕರಿ, ಜಯನಗರ ಹಾಗೂ ಸಿದ್ದಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಜೆ.ಸಿ ರಸ್ತೆಯ 2ನೇ ಕ್ರಾಸ್‌ನ ಮುರಳಿ (39) ಎಂಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

'ಆರೋಪಿಯಿಂದ ₹ 22 ಲಕ್ಷ ಮೌಲ್ಯದ ವಿವಿಧ ಕಂಪನಿಯ 26 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ. ಒಟ್ಟು 16 ಬೈಕ್ ಕಳವು ಪ್ರಕರಣಗಳು ಪತ್ತೆಯಾಗಿವೆ' ಎಂದು ಪೊಲೀಸರು ತಿಳಿಸಿದ್ದಾರೆ.


ಮುರಳಿ

'ಜ.27ರಂದು ಜಯನಗರ ಪೊಲೀಸ್ ಠಾಣೆಯ ವ್ಯಾಪ್ತಿಯ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ಹೋಂಡಾ ಆಕ್ಟಿವಾ ಕಳವು ಮಾಡಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಆರೋಪಿ ಹಲವು ಸ್ಥಳಗಳಲ್ಲಿ ಬೈಕ್ ಕಳವು ನಡೆಸಿರುವುದು ಪತ್ತೆಯಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

10.62 ಲಕ್ಷ ಪ್ರಕರಣ ಇತ್ಯರ್ಥ: ₹30.96 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇ 50ರಷ್ಟು ರಿಯಾಯಿತಿ ಆದೇಶಕ್ಕೆ ಮೊದಲ ದಿನದಿಂದಲೇ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ನಾಲ್ಕು ದಿನಗಳಲ್ಲಿ ₹ 30.96 ಕೋಟಿ ದಂಡ ಸಂಗ್ರಹವಾಗಿದೆ. 10.62 ಲಕ್ಷ ಪ್ರಕರಣಗಳು ಇತ್ಯರ್ಥವಾಗಿವೆ.

ಸೋಮವಾರ ಒಂದೇ ದಿನದಲ್ಲಿ 2.59 ಲಕ್ಷ ಪ್ರಕರಣ ಇತ್ಯರ್ಥಗೊಂಡಿವೆ. ₹ 7.45 ಕೋಟಿ ದಂಡ ಸಂಗ್ರಹವಾಗಿದೆ.

ಇನ್ಫೆಂಟ್ರಿ ರಸ್ತೆಯಲ್ಲಿರುವ ಸಂಚಾರ ನಿರ್ವಹಣಾ ಕೇಂದ್ರ (ಟಿಎಂಸಿ), ನಗರದ ಸಂಚಾರ ಪೊಲೀಸ್ ಠಾಣೆಗಳು ಹಾಗೂ ಬೆಂಗಳೂರು ಒನ್ ಕೇಂದ್ರಗಳಲ್ಲಿ ಜನರು ದಂಡ ಪಾವತಿಸಿದ್ದಾರೆ. ಹೆಚ್ಚಿನ ಜನರು, ಪೇಟಿಎಂ ಆ್ಯಪ್ ಮೂಲಕ ದಂಡ ಕಟ್ಟಿದ್ದಾರೆ.


ಹಲವು ಬಾರಿ ಸಂಚಾರ ನಿಯಮ ಉಲ್ಲಂಘಿಸಿದ್ದ ಸವಾರರೊಬ್ಬರಿಂದ ಸೋಮವಾರ ದಂಡ ಕಟ್ಟಿಸಿಕೊಂಡ ಪುಲಿಕೇಶಿನಗರ ಸಂಚಾರ ಠಾಣೆ ಪೊಲೀಸರು ರಶೀದಿ ನೀಡಿದರು

'ಪೇಟಿಎಂಗೆ ಶೇ 2ರಷ್ಟು ಕಮಿಷನ್: ಜೇಬಿಗೆ ಕತ್ತರಿ'

'ಜನರು ಪಾವತಿಸುತ್ತಿರುವ ದಂಡದ ಮೊತ್ತದ ಮೇಲೆ ಶೇ 2ರಷ್ಟು ಕಮಿಷನ್ ಪೇಟಿಎಂ ಪಾಲಾಗುತ್ತಿದೆ. ದಂಡದ ಜೊತೆ ವಿನಾಕಾರಣ ಪ್ರತ್ಯೇಕ ಕಮಿಷನ್ ನೀಡುವಂತಾಗಿದೆ' ಎಂದು ಸಾರ್ವಜನಿಕರು ದೂರಿದರು.

'ಹೆಚ್ಚಿನ ಸಂಖ್ಯೆಯ ಜನರು, ಪೇಟಿಎಂ ಆ್ಯಪ್ ಮೂಲಕ ದಂಡ ಪಾವತಿಸುತ್ತಿದ್ದಾರೆ. ₹ 250 ದಂಡವಿದ್ದರೆ, ₹ 5 ಕಮಿಷನ್ ಸೇರಿ ₹ 255 ಪಾವತಿಸುತ್ತಿದ್ದಾರೆ' ಎಂದು ಹೇಳಿದರು.

'ಮೂರು ದಿನಗಳಲ್ಲಿ ಪೇಟಿಎಂ ಮೂಲಕವೇ ₹ 10 ಕೋಟಿಗೂ ಹೆಚ್ಚು ದಂಡ ಸಂಗ್ರಹವಾಗಿದೆ. ಇದರಲ್ಲಿ ಶೇ 2ರಷ್ಟು ಪಾಲು ಪೇಟಿಎಂಗೆ ಸೇರಿದ್ದು, ಜನರ ಜೇಬಿಗೆ ಕತ್ತರಿ ಬಿದ್ದಿದೆ' ಎಂದು ಆರೋಪಿಸಿದರು.

ಬಾಂಬ್ ಸ್ಫೋಟದ ಆರೋಪಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ಬಾಂಬ್ ಸ್ಫೋಟ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ತಪ್ಪೊಪ್ಪಿಗೆ ಪತ್ರ ನೀಡಿದ್ದ ಆರೋಪಿ ಸೈಯದ್ ಅಲಿ ಮೇಲೆ ಸಹ ಆರೋಪಿಗಳು ಹಲ್ಲೆ ಮಾಡಿದ್ದು, ಈ ಸಂಬಂಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಸೈಯದ್ ಅಲಿ ಮೇಲೆ ಹಲ್ಲೆ ನಡೆದಿರುವ ಬಗ್ಗೆ ಅಧಿಕಾರಿಗಳು ದೂರು ನೀಡಿದ್ದಾರೆ. ವಿಚಾರಣಾಧೀನ ಕೈದಿಗಳಾದ ಕಿಚನ್ ಬುಹಾರಿ ಅಲಿಯಾಸ್ ಬುಗಾರಿ, ಜುಲ್ಫಿಕರ್ ಅಲಿ, ಶಿಹಾಬುದ್ದೀನ್ ಅಲಿಯಾಸ್ ಖಾಲಿದ್, ಅಹಮ್ಮದ್ ಬಾವಾ ಅಬೂಬಕರ್ ಹಾಗೂ ಬಿಲಾಲ್ ಅಹಮ್ಮದ್ ಅಲಿಯಾಸ್ ಇಮ್ರಾನ್ ಜಲಾಲ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಲ್ಲೇಶ್ವರ ಬಿಜೆಪಿ ಕಚೇರಿ ಎದುರು ಸಂಭವಿಸಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲಿ ಸೈಯದ್ ಅಲಿಯನ್ನು ಬಂಧಿಸಲಾಗಿತ್ತು. ಕಾರಾಗೃಹದಲ್ಲಿರುವ ಈತ, ನ್ಯಾಯಾಲಯಕ್ಕೆ ಇತ್ತೀಚೆಗೆ ತಪ್ಪೊಪ್ಪಿಗೆ ಪತ್ರ ನೀಡಿದ್ದ. ಇದು ಗೊತ್ತಾಗುತ್ತಿದ್ದಂತೆ ಸೈಯದ್ ಮೇಲೆ ಕೋಪಗೊಂಡಿದ್ದ ಆರೋಪಿಗಳು, 2022ರ ಡಿಸೆಂಬರ್ 16ರಂದು ಹಲ್ಲೆ ಮಾಡಿದ್ದರು. ವಿಷಯವನ್ನು ಯಾರಿಗೂ ತಿಳಿಸದಂತೆ ಜೀವ ಬೆದರಿಕೆಯೊಡ್ಡಿದ್ದರು.'

'ಹಲ್ಲೆ ಸಂಗತಿ ಇತ್ತೀಚೆಗಷ್ಟೇ ಜೈಲಿನ ಅಧಿಕಾರಿಗಳ ಗಮನಕ್ಕೆ ಬಂದಿತ್ತು. ಕೆಲ ಪುರಾವೆಗಳನ್ನು ಸಂಗ್ರಹಿಸಿ ದೂರು ನೀಡಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.


ಸುಗ್ಗಯ್ಯನಪಾಳ್ಯದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡವನ್ನು ಬಮೂಲ್ ನಿರ್ದೇಶಕ ಭಾಸ್ಕರ್ ಅವರು ಉದ್ಘಾಟಿಸಿದರು

ಡೇರಿಯ ಕಟ್ಟಡ ಉದ್ಘಾಟನೆ

ದಾಬಸ್‌ಪೇಟೆ: 'ತಾಲ್ಲೂಕಿನಲ್ಲಿ ಹಾಲಿನ ಡೇರಿಯ ಕಾರ್ಯ ಚಟುವಟಿಕೆ ಇಡೀ ಬಮೂಲ್‌ನಲ್ಲಿ ಮಾದರಿಯಾಗಿದೆ. ಇದು ತಾಲ್ಲೂಕಿಗೆ ಹೆಮ್ಮೆಯ ಸಂಗತಿ' ಎಂದು ತಾಲ್ಲೂಕು ಬಮೂಲ್ ನಿರ್ದೇಶಕ ಜಿ.ಆರ್. ಭಾಸ್ಕರ್ ಹೇಳಿದರು.

ಸುಗ್ಗಯ್ಯನ ಪಾಳ್ಯದಲ್ಲಿ ನಿರ್ಮಿಸಿರುವ ₹ 21 ಲಕ್ಷ ವೆಚ್ಚದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

ಹೈನುಗಾರಿಕೆಯಲ್ಲಿ ಆಸಕ್ತಿಯುಳ್ಳವರು ದೇಶ, ವಿದೇಶಗಳಿಂದ ತಾಲ್ಲೂಕಿಗೆ ಬಂದು ಡೇರಿ ಚಟುವಟಿಕೆ ವೀಕ್ಷಿಸಿ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಮೂರೂವರೆ ವರ್ಷಗಳಲ್ಲಿ ತಾಲೂಕಿನಾದ್ಯಂತ 35 ನೂತನ ಕಟ್ಟಡ, 20 ಬಿ.ಎಂ.ಸಿ, ₹ 2 ಲಕ್ಷ ವೆಚ್ಚದಲ್ಲಿ 50 ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಲಾಗಿದೆ. ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದಲ್ಲಿ ₹ 22 ಕೋಟಿ ಅನುದಾನದಲ್ಲಿ 15 ಎಕರೆ ಜಾಗ ಖರೀದಿ ಮಾಡಲಾಗಿದೆ. ಅಲ್ಲಿ ಫೀಡ್ ಫ್ಯಾಕ್ಟರಿ ನಿರ್ಮಾಣ ಮಾಡಿ, ಸ್ಥಳೀಯ ರೈತ ಮಕ್ಕಳಿಗೆ ಉದ್ಯೋಗ ಕಲ್ಪಿಸಲಾಗುವುದು ಎಂದು ಹೇಳಿದರು.

ಸಹಾಯಕ ವ್ಯವಸ್ಥಾಪಕ ಆದರ್ಶ್ ಮಾತನಾಡಿ, 'ಈ ಪುಟ್ಟ ಗ್ರಾಮದಲ್ಲಿ ಒಂದು ಒಳ್ಳೆಯ ಕಟ್ಟಡ ನಿರ್ಮಾಣ ಮಾಡಿರುವುದು ನಿಜಕ್ಕೂ ಸಂತೋಷಕರ ವಿಷಯ. ಈ ಎಲ್ಲ ಕ್ರೆಡಿಟ್ ಹಾಲು ಉತ್ಪಾದಕರಿಗೆ ಸಲ್ಲಬೇಕು' ಎಂದು ತಿಳಿಸಿದರು.

ನೂತನ ಕಟ್ಟಡ ನಿರ್ಮಾಣಕ್ಕೆ ಬೆಂಗಳೂರು ಹಾಲು ಒಕ್ಕೂಟದಿಂದ ₹ 4.50 ಲಕ್ಷ, ಧರ್ಮಸ್ಥಳ ಸಂಘದಿಂದ ₹ 2 ಲಕ್ಷ, ಕರ್ನಾಟಕ ಹಾಲು ಮಹಾಮಂಡಲದಿಂದ ₹ 4.50 ಲಕ್ಷ ಸಹಾಯಧನ ದೊರೆತಿದೆ ಎಂದು ವಿಸ್ತರಣಾಧಿಕಾರಿ ಚಂದನ್ ಅವರು ಹೇಳಿದರು.

ಸಂಘದ ಅಧ್ಯಕ್ಷೆ ಭಾಗ್ಯಮ್ಮ ಮೊದಲಾದವರು ಹಾಜರಿದ್ದರು.

ಅಪಘಾತ: ಇಬ್ಬರು ವಿದ್ಯಾರ್ಥಿಗಳ ಸಾವು

ಗುಬ್ಬಿ: ಎಚ್‌ಎಎಲ್ ಉದ್ಘಾಟನಾ ಕಾರ್ಯಕ್ರಮ ಮುಗಿಸಿಕೊಂಡು ವಾಪಸ್ ತೆರಳುವ ವೇಳೆ ತಾಲ್ಲೂಕಿನ ತ್ಯಾಗಟೂರು ಗೇಟ್ ಬಳಿ ಸೋಮವಾರ ರಾತ್ರಿ ಬೈಕ್‌ಗೆ ಲಾರಿ ಡಿಕ್ಕಿಹೊಡೆದು ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ. ದೀಪಕ್ (20), ಯಶಸ್ವಿನಿ (20) ಮೃತರು.

ತಾಲ್ಲೂಕಿನ ಏರೂರು ಬಳಿಯ ಚನ್ನಬಸವೇಶ್ವರ ಎಂಜಿನಿಯರಿಂಗ್ (ಸಿಐಟಿ) ಕಾಲೇಜಿನಲ್ಲಿ ಓದುತ್ತಿದ್ದರು. ಎಚ್‌ಎಎಲ್‌ನಿಂದ ಬಸ್ ಮೂಲಕ ಕಾಲೇಜಿಗೆ ಹೋಗಿ, ಅಲ್ಲಿಂದ ಬೈಕ್‌ನಲ್ಲಿ ತಮ್ಮ ಊರಿಗೆ ಹೋಗುವಾಗ ಅಪಘಾತ ಸಂಭವಿಸಿದೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಾಲುಗೊಣ ಗ್ರಾಮದ ಯಶಸ್ವಿನಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ತುರುವೇಕೆರೆ ತಾಲ್ಲೂಕಿನ ಹುಲ್ಲೇಕೆರೆ ನಿವಾಸಿ ದೀಪಕ್ ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿ ಮೃತಪಟ್ಟಿದ್ದಾರೆ.

ಕೊಳೆತ ಮೃತದೇಹ: ನೇಪಾಳದ ಸಂಬಂಧಿಕರಿಗೆ ಮಾಹಿತಿ

ಬೆಂಗಳೂರು: ಹುಳಿಮಾವು ಬಳಿ ಪುಷ್ಪಾ ದಾಮಿ (22) ಎಂಬುವವರ ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾದ ಪ್ರಕರಣದ ತನಿಖೆ ಮುಂದುವರಿಸಿರುವ ಪೊಲೀಸರು, ಹೇಳಿಕೆ ನೀಡಲು ನಗರಕ್ಕೆ ಬರುವಂತೆ ನೇಪಾಳದಲ್ಲಿರುವ ಸಂಬಂಧಿಕರಿಗೆ ಮಾಹಿತಿ ರವಾನಿಸಿದ್ದಾರೆ.

ನೇಪಾಳದ ಪುಷ್ಪಾ, ಅಮರ್ ಎಂಬುವವರನ್ನು ಮದುವೆಯಾಗಿದ್ದರು. ಕೆಲಸಕ್ಕೆಂದು ದಂಪತಿ ನಗರಕ್ಕೆ ಬಂದು ವಾಸವಿದ್ದರು. ಆರು ತಿಂಗಳ ಹಿಂದೆ ಮನೆ ಬಿಟ್ಟು ಹೋಗಿದ್ದ ಪುಷ್ಪಾ ಅವರ ಮೃತದೇಹ ನಿರ್ಜನ ಪ್ರದೇಶದ ಪೊದೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಇತ್ತೀಚೆಗೆ ಪತ್ತೆಯಾಗಿತ್ತು.

'ಮೃತದೇಹ ಪತ್ತೆಯಾಗುತ್ತಿದ್ದಂತೆ ಪತಿಯನ್ನು ವಶಕ್ಕೆ ಪಡೆದು ವಿಚಾರಿಸಲಾಗಿತ್ತು. ಸಾವಿನ ಬಗ್ಗೆ ಮಾಹಿತಿ ಇಲ್ಲವೆಂದು ಆತ ಹೇಳುತ್ತಿದ್ದಾನೆ. ಹೀಗಾಗಿ, ಪುಷ್ಪಾ ಅವರ ನೇಪಾಳದಲ್ಲಿರುವ ಕುಟುಂಬದವರಿಗೆ ಮಾಹಿತಿ ತಿಳಿಸಲಾಗಿದೆ. ಕುಟುಂಬದವರು ನಗರಕ್ಕೆ ಬಂದ ನಂತರವೇ ಮತ್ತಷ್ಟು ಮಾಹಿತಿ ಸಿಗಲಿದೆ' ಎಂದು ಪೊಲೀಸರು ಹೇಳಿದರು.

'ಮೃತದೇಹ ಸಂಪೂರ್ಣ ಕೊಳೆತಿದ್ದು, ಮೂಳೆಗಳು ಹಾಗೂ ಇತರೆ ವಸ್ತುಗಳು ಮಾತ್ರ ಪತ್ತೆಯಾಗಿವೆ. ಎಲ್ಲವನ್ನೂ ಸಂಗ್ರಹಿಸಿ ಪರೀಕ್ಷೆಗೆಂದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ತಿಳಿಸಿದರು.

ಚಿತ್ರಾವಳಿ


ನಾಟ್ಯಭೈರವಿ ನೃತ್ಯ ಶಾಲೆಯ ವಿದ್ಯಾರ್ಥಿನಿ 10 ವರ್ಷದ ಬಾಲಕಿ ತನಿಷ್ಕ ಎರಡೂವರೆ ಗಂಟೆ ಭರತನಾಟ್ಯ ಪ್ರಸ್ತುತ ಪಡಿಸಿದರು. ಶಾಲೆಯ ನಿರ್ದೇಶಕಿ ಶೃತಿ ಎನ್. ಮೂರ್ತಿ, ನೀತಾ ಅಲೋಕ್ ಕುಮಾರ್, ನಟಿಯರಾದ ಹೇಮಾ ಪ್ರಸಾದ್, ಅಪರ್ಣಾ ವಸ್ತಾರೆ ಇದ್ದರು.



ಎಸ್‌ಬಿಐ ಗೆಳೆಯರ ಬಳಗ ವತಿಯಿಂದ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಸಂಗೀತ ವಿದ್ವಾಂಸ ಆರ್.ಕೆ. ಪದ್ಮನಾಭ ಅವರಿಗೆ 'ಸನ್ಮಿತ್ರ ಸಂಗೀತ ಸುಧಾರತ್ನ' ಎಂಬ ಬಿರುದು ನೀಡಿ ಗೌರವಿಸಲಾಯಿತು. ಬಳಗದ ಸಂಚಾಲಕ ವೈ.ವಿ. ಪ್ರಭಾಕರ ಹಾಗೂ ಪಿ.ವಿ. ಚಂದ್ರಶೇಖರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ್ ಇದ್ದರು.

ಬಿಡಿಎ ನಿರ್ಮಿಸಿರುವ ನಾಡಪ್ರಭು ಕೆಂಪೇಗೌಡ ಬಡಾವಣೆ: ಸಿಎ ನಿವೇಶನ ಪರಿವರ್ತನೆ ಪ್ರಕರಣ

31 ಎಂಜಿನಿಯರ್‌ಗಳ ವಿರುದ್ಧ ಕ್ರಮ

• ನವೀನ್ ಮಿನೇಜಸ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಾಗರಿಕ ಸೌಲಭ್ಯಗಳ (ಸಿಎ) ನಿವೇಶನಗಳನ್ನು ವಸತಿ ನಿವೇಶನಗಳನ್ನಾಗಿ ಪರಿವರ್ತಿಸಿದ 31 ಎಂಜಿನಿಯರ್ ಹಾಗೂ ಏಳು ಸರ್ವೇಯರ್‌ಗಳಿಗೆ ಸಂಕಷ್ಟ ಎದುರಾಗಿದೆ. ಕೆಲವು ಎಂಜಿನಿಯರ್ ಹಾಗೂ ದಲ್ಲಾಳಿಗಳು ಬಡಾವಣೆಯ ನಕ್ಷೆಯನ್ನು ಬದಲಿಸಲು ಒತ್ತಡ ಹಾಕಿದ್ದರು ಎಂದು ಖಾಸಗಿ ಸಂಸ್ಥೆ ಸಿದ್ಧಪಡಿಸಿದ ಆಂತರಿಕ ವರದಿ ತಿಳಿಸಿದೆ.

ವರದಿಯ ಪ್ರಾಥಮಿಕ ಅಂಶಗಳ ಪ್ರಕಾರ, ಬಿಡಿಎ ಅಕ್ರಮವಾಗಿ ಕನಿಷ್ಠ 12 ಸಿಎ ನಿವೇಶನಗಳನ್ನು ವಸತಿ ನಿವೇಶನಗಳನ್ನಾಗಿ ಪರಿವರ್ತಿಸಿದ್ದು, ಇದು ಕೆಟಿಸಿಪಿ ಕಾಯ್ದೆ ಹಾಗೂ ಸುಪ್ರೀಂಕೋರ್ಟ್‌ನ ಇತ್ತೀಚಿನ ಆದೇಶ ಉಲ್ಲಂಘನೆಯಾಗಿದೆ. ಬಡಾವಣೆಯಲ್ಲಿ ಒಂದು ಬಾರಿ ಸಿಎ ನಿವೇಶನ, ಉದ್ಯಾನ ಅಥವಾ ಮೈದಾನ ಎಂದು ಅಧಿಸೂಚನೆ ಆದರೆ ಅದನ್ನು ಬದಲಿಸುವ ಅಧಿಕಾರ ಎಂಜಿನಿಯರ್‌ಗೆ ಇರುವುದಿಲ್ಲ.

ಸಿಎ ನಿವೇಶನಗಳಲ್ಲದೆ ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಯಾಗಬೇಕಾದ 100 ಅಡಿ ಮತ್ತು 80 ಅಡಿ ರಸ್ತೆಯ ಸುತ್ತಮುತ್ತಲಿನ 180 ಎಕರೆ ಪ್ರದೇಶದ ನಿವೇಶನಗಳನ್ನು ವಸತಿ ನಿವೇಶನಗಳನ್ನಾಗಿ ಎಂಜಿನಿಯರ್‌ಗಳು ಪರಿವರ್ತಿಸಿದ್ದಾರೆ.

‘ಸಿಎ ನಿವೇಶನ ಹಾಗೂ ವಾಣಿಜ್ಯ ಬಳಕೆಯ ನಿವೇಶನಗಳನ್ನು ವಸತಿ ನಿವೇಶನಗಳನ್ನಾಗಿ ಪರಿವರ್ತಿಸಿರುವ ಎಂಜಿನಿಯರ್‌ಗಳ ಮೇಲೆ ತನಿಖೆ ಆಧರಿಸಿ ಎಫ್‌ಐಆರ್ ದಾಖಲಿಸಲಾಗುತ್ತದೆ. ರೈತರಿಗೆ ಪರಿಹಾರ ರೂಪದಲ್ಲಿ ನೀಡಲಾಗಿರುವ ನಿವೇಶನಗಳನ್ನು ಪರಿವರ್ತಿಸಿರುವುದು ಅಕ್ರಮ’ ಎಂದು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಹೇಳಿದರು.

‘ನಿವೇಶನ ಪಡೆದವರೂ ಕಾನೂನು ಕ್ರಮವನ್ನು ಎದುರಿಸಬೇಕಾಗುತ್ತದೆ. ಸಿಎ ನಿವೇಶನಗಳನ್ನು ಬೇರೆ ಪ್ರದೇಶಗಳಲ್ಲಿ ಗೊತ್ತುಪಡಿಸುವುದು (ಮಾರ್ಕಿಂಗ್) ಇದಕ್ಕೆ ಇರುವ ಒಂದು ಪರಿಹಾರ’ ಎಂದರು.

2019ರ ಡಿಸೆಂಬರ್‌ನಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಡೆದ ಕುಂದುಕೊರತೆ ಸಭೆಯಲ್ಲಿ ಬಿಡಿಎಗೆ ಸಲ್ಲಿಸಲಾಗಿದ್ದ ದೂರಿನಿಂದ ಈ ಅಕ್ರಮ ತಿಳಿದುಬಂದಿತ್ತು. ‘ಬಿಡಿಎ ಎಂಜಿನಿಯರಿಂಗ್ ವರ್ಗದ ವರದಿ ಪ್ರಕಾರ ತನಿಖಾ ಸಂಸ್ಥೆಗೆ ಇದನ್ನು ವಹಿಸಲಾಗುವುದು’ ಎಂದು ಬಿಡಿಎ ಆಯುಕ್ತ ಕುಮಾರ ನಾಯಕ್ ತಿಳಿಸಿದರು.

ವಸತಿ ನಿವೇಶನವಾದ ಸಿಎ ನಿವೇಶನಗಳ ವಿವರ

- **31,949** ಚ.ಮೀ., ಬ್ಲಾಕ್ **5**, ಸೆಕ್ಟರ್ **1** (ಮೆಟ್ರೊ, ಬಿಎಂಟಿಸಿ ಡಿಪೊ)
- **1,528** ಚ.ಮೀ., **3,172** ಚ.ಮೀ., ಬ್ಲಾಕ್ **7**, ಸೆಕ್ಟರ್ ಬಿ(ಸಾಂಸ್ಕೃತಿಕ ಚಟುವಟಿಕೆ)
- **10,545** ಚ.ಮೀ., **12,468** ಚ.ಮೀ ಮತ್ತು **9,636** ಚ.ಮೀ ವಾಣಿಜ್ಯ ಪ್ರದೇಶ, ಬ್ಲಾಕ್ **7**, ಸೆಕ್ಟರ್ ಇ
- **15,202** ಚ.ಮೀ. ವಾಣಿಜ್ಯ ಪ್ರದೇಶ ಬ್ಲಾಕ್ **4**, ಸೆಕ್ಟರ್ ಡಿ– **3,852** ಚ.ಮೀಗೆ ಕಡಿತ
- ಬ್ಲಾಕ್ **5** ಸೆಕ್ಟರ್ **1**ರ ವಾಣಿಜ್ಯ ನಿವೇಶನ ಎಸ್‌ಟಿಪಿ ಪಂಪಿಂಗ್ ಸ್ಟೇಷನ್‌ಗೆ ಬಳಕೆ
- ಸೆಕ್ಟರ್ **7**ರ ವಾಣಿಜ್ಯ ನಿವೇಶನಕ್ಕೆ ರಸ್ತೆ ಸಂಪರ್ಕ ನಿರ್ಬಂಧಿಸಲಾಗಿದೆ
- ಸೆಕ್ಟರ್ ಇನಲ್ಲಿರುವ ಬಹುತೇಕ ಸಿಎ ನಿವೇಶನಗಳನ್ನು ವಸತಿ ನಿವೇಶನಗಳನ್ನಾಗಿ ಪರಿವರ್ತಿಸಲಾಗಿದೆ
- ಬ್ಲಾಕ್ **4** ಸೆಕ್ಟರ್ ಸಿನಲ್ಲಿ ಸಿಎ ನಿವೇಶನಗಳನ್ನು ಶೇ 35ರಷ್ಟು ಕಡಿತಗೊಳಿಸಲಾಗಿದೆ

108 ‘ನಮ್ಮ ಕ್ಲಿನಿಕ್’ಗೆ ಸಿಎಂ ಚಾಲನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಏಕಕಾಲಕ್ಕೆ 108 ‘ನಮ್ಮ ಕ್ಲಿನಿಕ್’ಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ (ಫೆ.7) ಚಾಲನೆ ನೀಡಲಿದ್ದಾರೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

‘ಮಹಾಲಕ್ಷ್ಮಿ ಬಡಾವಣೆಯ ಮಹಾಲಕ್ಷ್ಮಿಪುರ ವಾರ್ಡ್‌ನಲ್ಲಿ ‘ನಮ್ಮ ಕ್ಲಿನಿಕ್’ ಉದ್ಘಾಟಿಸಲಾಗುತ್ತಿದೆ. ಇದೇ ಸಂದರ್ಭದಲ್ಲಿ ಬಿಬಿಎಂಪಿ ವ್ಯಾಪ್ತಿಯ ಇತರ 107 ಕ್ಲಿನಿಕ್‌ಗಳಿಗೂ ಅವರು ಚಾಲನೆ ನೀಡಲಿದ್ದಾರೆ’ ಎಂದಿದ್ದಾರೆ.

ಧಾರವಾಡದ ಬೈರದೇವರಕೊಪ್ಪದಲ್ಲಿ ‘ನಮ್ಮ ಕ್ಲಿನಿಕ್’ ಉದ್ಘಾಟಿಸುವ ಮೂಲಕ ರಾಜ್ಯದಲ್ಲಿ ಏಕಕಾಲಕ್ಕೆ 100 ‘ನಮ್ಮ ಕ್ಲಿನಿಕ್’ಗಳಿಗೆ 2022ರ ಡಿ. 14ರಂದು ಮುಖ್ಯಮಂತ್ರಿ ವರ್ಚುವಲ್ ಮೂಲಕ ಚಾಲನೆ ನೀಡಿದ್ದರು.

‘ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ, ಪ್ರತಿ 50 ಸಾವಿರ ಜನಸಂಖ್ಯೆಗೆ ಒಂದರಂತೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇದೀಗ, 15ನೇ ಹಣಕಾಸು ಆಯೋಗದ ಅನುದಾನದಡಿ ರಾಜ್ಯದಾದ್ಯಂತ ನಗರ ಪ್ರದೇಶಗಳಲ್ಲಿ 15 ಸಾವಿರದಿಂದ 20 ಸಾವಿರ ಜನಸಂಖ್ಯೆಗೆ ಒಂದರಂತೆ ‘ನಮ್ಮ ಕ್ಲಿನಿಕ್’ ತೆರೆಯಲಾಗುತ್ತಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 243 ಮತ್ತು ಉಳಿದ ಜಿಲ್ಲೆಗಳಲ್ಲಿ 195 ‘ನಮ್ಮ ಕ್ಲಿನಿಕ್’ಗಳನ್ನು ಆರಂಭಿಸಲಾಗುತ್ತಿದೆ’ ಎಂದಿದ್ದಾರೆ.

‘ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 9ರಿಂದ ಸಂಜೆ 4.30ರವರೆಗೆ ಈ ಕ್ಲಿನಿಕ್‌ಗಳು ಕಾರ್ಯನಿರ್ವಹಿಸಲಿವೆ. ಒಂದು ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ನಿರೀಕ್ಷಣಾ ಸ್ಥಳ, ಹೊರರೋಗಿಗಳ ತಪಾಸಣೆ ಕೊಠಡಿ, ಚುಚ್ಚು ಮದ್ದು ನೀಡುವ ಕೊಠಡಿ, ಪ್ರಯೋಗಶಾಲೆ, ಯೋಗ, ಔಷಧ ದಾಸ್ತಾನು ಮತ್ತು ವಿತರಣಾ ಕೊಠಡಿ, ಆಡಳಿತ ಕಚೇರಿ, ಹೀಗೆ ಪ್ರತ್ಯೇಕ ಕೊಠಡಿಗಳಿವೆ. ಆಸ್ಪತ್ರೆ ಸಿಬ್ಬಂದಿ, ಮಹಿಳೆ ಮತ್ತು ಪುರುಷ ರೋಗಿಗಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಕಲ್ಪಿಸಲಾಗಿದೆ. ಗರ್ಭಿಣಿ ಮತ್ತು ಜನನ ಸಮಯದ ಆರೈಕೆ, ನವಜಾತ ಮತ್ತು ಶಿಶುವಿನ ಸಮಗ್ರ ಆರೋಗ್ಯ ರಕ್ಷಣೆ, ಲಸಿಕಾಕರಣ ಸೇರಿದಂತೆ 12 ಆರೋಗ್ಯ ಸೇವೆಗಳು ಇಲ್ಲಿ ಸಿಗಲಿದೆ’ ಎಂದೂ ವಿವರಿಸಿದ್ದಾರೆ.

12 ವರ್ಷದ ಬಳಿಕ ನಾಯಿ ಮಾಲೀಕನಿಗೆ 3 ತಿಂಗಳ ಜೈಲು

ಮುಂಬೈ (ಪಿಟಿಐ): ಸಾಕು ನಾಯಿಯೊಂದು ವ್ಯಕ್ತಿಯೊಬ್ಬರಿಗೆ ಕಚ್ಚಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ 12 ವರ್ಷದ ನಂತರ ನಾಯಿಯ ಮಾಲೀಕರಿಗೆ 3 ತಿಂಗಳು ಸಾದಾ ಕಾರಾಗೃಹ ಶಿಕ್ಷೆ ವಿಧಿಸಿ ನ್ಯಾಯಾಲಯ ಆದೇಶ ಹೊರಡಿಸಿದೆ.

ಜ.3ರಂದು ಪ್ರಕರಣದ ವಿಚಾರಣೆ ನಡೆಸಿದ ಗಿರ್‌ಗಾವ್ ಕೋರ್ಟ್‌ನ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಎನ್.ಎ.ಪಟೇಲ್, ನಾಯಿಯ ಮಾಲೀಕ ಸೈರಸ್ ಪರ್ಸಿ ಹೊರ್ಮುಸ್‌ಜಿ (44) ಅವರನ್ನು ತಪ್ಪಿತಸ್ಥರೆಂದು ಪರಿಗಣಿಸಿ ತೀರ್ಪು ನೀಡಿದ್ದಾರೆ. ‘ಇಂಥ ಆಕ್ರಮಣಕಾರಿ ನಾಯಿಗಳನ್ನು ಹೊರಗೆ ಸುತ್ತಾಡಿಸುವ ಸಂದರ್ಭದಲ್ಲಿ ಅಗತ್ಯ ಮುಂಜಾಗ್ರತೆ ವಹಿಸದಿದ್ದಲ್ಲಿ ಅದು ಸಾರ್ವಜನಿಕರಿಗೆ ಹಾನಿಯುಂಟು ಮಾಡಲಿದೆ’ ಎಂದಿದ್ದಾರೆ.

ಗಣಿಗಾರಿಕೆಗೆ ಅನುಮತಿ ನ್ಯಾಯಾಂಗ ನಿಂದನೆ: ಅ.ನ.ಯಲ್ಲಪ್ಪರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಕೆಐಒಸಿಎಲ್ ಕಂಪನಿಗೆ ಸಂಡೂರು ತಾಲ್ಲೂಕಿನ ಸ್ವಾಮಿಮಲೈ ಮತ್ತು ದೇವಗಿರಿ ಗುಡ್ಡಗಳನ್ನು ಕಬ್ಬಿಣ ಅದಿರು ಗಣಿಗಾರಿಕೆಗೆ ಅನುಮತಿ ನೀಡಿರುವುದು ನ್ಯಾಯಾಂಗ ನಿಂದನೆ ಎಂದು ಪರಿಸರ ತಜ್ಞ ಅ.ನ.ಯಲ್ಲಪ್ಪರೆಡ್ಡಿ ತಿಳಿಸಿದ್ದಾರೆ.

ಈ ಕಂಪನಿಯು 401.57 ಹೆಕ್ಟೇರ್ ಪ್ರದೇಶವನ್ನು 50 ವರ್ಷಗಳಿಗೆ ಗುತ್ತಿಗೆ ಪಡೆದು ‘ಕರ್ನಾಟಕ ಗಣಿ ಮತ್ತು ಭೂ ವಿಜ್ಞಾನ’ ಇಲಾಖೆಯ ಜತೆಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಗಣಿಗಾರಿಕೆಗಾಗಿ 2022 ರ ಡಿಸೆಂಬರ್ 16 ರಂದು ಅರಣ್ಯ ಸಂರಕ್ಷಣಾ ಕಾಯ್ದೆ 1980 ಅಡಿಯಲ್ಲೇ ಕೇಂದ್ರ ಪರಿಸರ ಇಲಾಖೆಯಿಂದ ಅನುಮತಿ ಪಡೆದಿದ್ದೇವೆ. ₹ 329.17 ಕೋಟಿ ಶುಲ್ಕ ಪಾವತಿ ಮಾಡಿದ್ದೇವೆ ಎಂದೂ ಕೆಐಒಸಿಎಲ್ ವ್ಯವಸ್ಥಾಪಕ ನಿರ್ದೇಶಕರು ಹೇಳಿಕೊಂಡಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸ್ವಾಮಿಮಲೈ ಮತ್ತು ದೇವಗಿರಿಗುಡ್ಡಗಳ ಪ್ರದೇಶಗಳನ್ನು ಪರಿಶೀಲನೆ ಮಾಡಿ ವರದಿ ಕೊಡುವವರೆಗೂ ಮುಂದುವರೆಯುವಂತಿಲ್ಲ ಎಂದು ಸುಪ್ರೀಂಕೋರ್ಟ್ ಆದೇಶಿಸಿತ್ತು. ಇದು ಸರ್ಕಾರಗಳಿಗೆ ಸ್ಪಷ್ಟವಾಗಿ ತಿಳಿದಿದೆ. ಆದರೂ ಈ ಅನುಮತಿ ನೀಡಿರುವುದು ನೇರವಾಗಿ ನ್ಯಾಯಾಲಯ ನಿಂದನೆಯಾಗುತ್ತದೆ ಎಂದಿದ್ದಾರೆ.




ಅ.ನ. ಯಲ್ಲಪ್ಪ ರೆಡ್ಡಿ

‘ಸಂಡೂರು ಅರಣ್ಯ ಪ್ರದೇಶದ ಪರಿಸರಕ್ಕೆ ಕೋಟ್ಯಂತರ ವರ್ಷಗಳ ಪರಂಪರೆ ಇದೆ. ಬಿಳಿಗಿರಿರಂಗನ ಬೆಟ್ಟದಿಂದ ಬಳ್ಳಾರಿಯವರೆಗೆ ಹಬ್ಬಿದ ಈ ಪರ್ವತ ಶ್ರೇಣಿ ಅಮೂಲ್ಯ ಮತ್ತು ಅನನ್ಯವಾದ ಜೀವಿ ಸಂಕುಲವನ್ನು ಹೊಂದಿದೆ. ಕ್ರೇಟನ್ ಶೀಲ್ಡ್ ಎಂದು ಕರೆಯಲ್ಪಡುವ ಈ ಅಚಲ ಕಲ್ಲು ಹಾಸಿನ ಅಡಿಪಾಯದ ಮೇಲೆಯೇ ನಮ್ಮ ನಾಡು ನಿಂತಿದೆ ಎನ್ನಬಹುದು. ಒಂದೂವರೆ ಶತಕೋಟಿ ವರ್ಷಗಳಲ್ಲಿ ಅನೇಕ ಹವಾಮಾನ ವಿಪ್ಲವಗಳನ್ನು ಯಶಸ್ವಿಯಾಗಿಯೂ ಎದುರಿಸಿರುವುದು ಈ ಪರ್ವತ-ಶ್ರೇಣಿಯಾದ್ಯಂತ ದಾಖಲುಗೊಂಡಿದೆ’ ಎಂದು ಅವರು ಹೇಳಿದ್ದಾರೆ.

ಇಲ್ಲಿನ ಕಾಡು ಶ್ರೀಗಂಧ, ರಕ್ತಚಂದನಗಳ ನೆಲೆವೀಡು. ಸಾವಿರಾರು ಜಾತಿಯ ಗಿಡಮೂಲಿಕೆಗಳು, ಪಾದರಸದ ಮಾಲಿನ್ಯ ಹೀರುವ ಕಮರದಂತ ಮರಗಳು ಮತ್ತು ಔಷಧೀಯ ಕೈಗಾರಿಕೆಗಳಲ್ಲಿ ಹೇರಳವಾಗಿ ಬಳಕೆಯಾಗುವ ಧೂಪದಮರ (ಬೋಸವೆಲ್ಲಿಯ) ಪ್ರಭೇದಗಳು ಇಲ್ಲಿವೆ. ಸಂಡೂರು ಪ್ರದೇಶದ ಶೇ 40 ರಷ್ಟು ಬೆಟ್ಟಗುಡ್ಡಗಳು ಈಗಾಗಲೇ ನಾಶವಾಗಿದ್ದು ಸಾವಿರಾರು ಎಕರೆ ಪ್ರದೇಶವು ಗುರುತು ಸಿಗದಷ್ಟು ನಾಶವಾಗಿರುವುದು ಉಪಗ್ರಹ ಸೆರೆ ಹಿಡಿದಿರುವ ಚಿತ್ರಗಳಲ್ಲಿ ಕಾಣಬಹುದು ಎಂದು ಯಲ್ಲಪ್ಪರೆಡ್ಡಿ ಹೇಳಿದ್ದಾರೆ.

ಕಬ್ಬಿಣ ಅದಿರು ಗಣಿಗಾರಿಕೆಗೆ ಅವಕಾಶ ನೀಡಿದರೆ, ಭಯಾನಕ ಸ್ಥಿತಿಗೆ ತಲುಪುವ ದಿನಗಳು ದೂರವಿಲ್ಲ. ಸರ್ಕಾರಗಳು ಕುರುಡಾಗಿರುವಾಗ ಜನರೇ ಎದುರಿಸಿ ನಿಂತು ಈ ವಿಧ್ವಂಸ ಕೃತ್ಯವನ್ನು ಹಿಮ್ಮೆಟ್ಟಿಸಬೇಕಾಗಿದೆ ಎಂದು ಅವರು ಹೇಳಿದ್ದಾರೆ.



ಪುಸ್ತಕ ಬಿಡುಗಡೆ...

ನಗರದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸಮಾರಂಭದಲ್ಲಿ ಪತ್ರಕರ್ತ ವಿಶ್ವೇಶ್ವರ ಭಟ್ ಅನುವಾದಿಸಿರುವ ಅನುಪಮ್ ಖೇರ್ ಅವರ ‘ಇಂದಿನ ದಿನವೇ ಶುಭ ದಿನವು’, ಕಿರಣ್ ಉಪಾಧ್ಯಾಯ ಅವರ ‘ಪರದೇಶವಾಸಿ’, ರಾಧಾಕೃಷ್ಣ ಎಸ್. ಭಡ್ತಿ ಅವರ ‘ಸುಪ್ತ ಸಾಗರ’ ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು. (ಎಡದಿಂದ) ರಾಧಾಕೃಷ್ಣ ಎಸ್. ಭಡ್ತಿ, ಜಿ.ಬಿ. ಹರೀಶ್, ನಿರಂಜನ್ ವಾನಳ್ಳಿ, ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್, ವಿಶ್ವೇಶ್ವರ ಭಟ್, ರೋಹಿತ್ ಚಕ್ರತೀರ್ಥ ಮತ್ತು ಕಿರಣ್ ಉಪಾಧ್ಯಾಯ ಇದ್ದಾರೆ.

ಬೆದರಿಕೆ: ಹೈಕೋರ್ಟ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂರು ಕೋಟಿ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಕ್ರಿಮಿನಲ್ ಪ್ರಕರಣದಲ್ಲಿ ಬೆಂಗಳೂರಿನ ಅಲಯನ್ಸ್ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಮಧುಕರ ಜಿ.ಅಂಗೂರ್ ಅವರ ಜಾಮೀನು ರದ್ದುಪಡಿಸಲು ಕೋರಿದ ಅರ್ಜಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಪರ ಹಿರಿಯ ವಕೀಲರಿಗೆ ಬೆದರಿಕೆ ಹಾಕಿರುವುದಕ್ಕೆ ಹೈಕೋರ್ಟ್ ಕಿಡಿ ಕಾರಿದೆ.

ಜಾಮೀನು ರದ್ದುಪಡಿಸುವಂತೆ ಕೋರಿ ಬೆಂಗಳೂರಿನ ಅಲಯನ್ಸ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ನಿವೇದಿತಾ ಮಿಶ್ರಾ ಮತ್ತು ಅಲಯನ್ಸ್ ಬ್ಯುಸಿನೆಸ್ ಸ್ಕೂಲ್‌ನ ನಿರ್ದೇಶಕ ಅಭಯ್ ಛೆಬ್ಬಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಇಂತಹ ಘಟನೆಯನ್ನು ಸಹಿಸುವುದಿಲ್ಲ’ ಎಂದು ಮಧುಕರ್ ಅಂಗೂರ್‌ಗೆ ಖಡಕ್ ಎಚ್ಚರಿಕೆ ನೀಡಿದೆ.

ಅಲಯನ್ಸ್ ವಿವಿ ರಿಜಿಸ್ಟ್ರಾರ್ ಪರ ಹಾಜರಾಗಿದ್ದ ಹಿರಿಯ ವಕೀಲ ಎಂ.ಎಸ್. ಶ್ಯಾಮಸುಂದರ್, ‘ಇತ್ತೀಚೆಗೆ ನನ್ನ ಮನೆಯ ಮುಂದೆ ಕೆಲವು ಸಮಾಜಘಾತುಕ ವ್ಯಕ್ತಿಗಳು ಸುಳಿದಾಡಿದ್ದಾರೆ. ನನಗೆ ಬೆದರಿಕೆಯಿದೆ. ನನ್ನ ಮಹಿಳಾ ಸಹೋದ್ಯೋಗಿಯ ಚಲನವಲನಗಳ ಮೇಲೂ ಮಧುಕರ್ ಅಂಗೂರ್ ಪರ ವ್ಯಕ್ತಿಗಳು ನಿಗಾ ಇಟ್ಟಿದ್ದಾರೆ’ ಎಂದು ನ್ಯಾಯಪೀಠಕ್ಕೆ ದೂರಿದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, ಈ ಹೇಳಿಕೆಯ ಸತ್ಯಾಸತ್ಯತೆ ಅರಿಯಲು ಮಧುಕರ್ ಅಂಗೂರ್ ಅವರನ್ನು ನ್ಯಾಯಾಲಯಕ್ಕೆ ಕರೆಸಿ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಮಧುಕರ ಅಂಗೂರ್, ‘ನನ್ನ ನಿರ್ದೇಶನದಡಿ ಇಂತಹ ಯಾವುದೇ ಘಟನೆ ನಡೆದಿಲ್ಲ. ನಾನೊಬ್ಬ ಕಾನೂನು ಪರಿಪಾಲಕ ನಾಗರಿಕ. ಒಂದು ವೇಳೆ ನನ್ನ ಅನುಯಾಯಿಗಳು ತಿಳಿದೋ, ತಿಳಿಯದೆಯೋ ಇಂತಹ ಕೃತ್ಯದಲ್ಲಿ ಭಾಗಿಯಾಗಿದ್ದರೆ ಅದಕ್ಕಾಗಿ ನ್ಯಾಯಾಲಯದ ಬೇಷರತ್ ಕ್ಷಮೆ ಕೋರುತ್ತೇನೆ’ ಎಂದು ಪ್ರಮಾಣಪತ್ರ ಸಲ್ಲಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ‘ಭವಿಷ್ಯದಲ್ಲಿ ಇಂತಹ ಘಟನೆ ಮರುಕಳಿಸಿದರೆ ಕಠಿಣ ಕ್ರಮ ಕೈಗೊಳ್ಳಲು ನ್ಯಾಯಾಲಯ ಹಿಂಜರಿಯುವುದಿಲ್ಲ’ ಎಂದು ಎಚ್ಚರಿಸಿ ವಿಚಾರಣೆಯನ್ನು ಮಾರ್ಚ್ 1ಕ್ಕೆ ಮುಂದೂಡಿದೆ.

ಪ್ರಕರಣವೇನು?: ‘ಅಲಯನ್ಸ್ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಯಾವುದೇ ಆರ್ಥಿಕ ವಹಿವಾಟು ನಡೆಸಬಾರದು ಎಂದು ಮಧುಕರ ಅಂಗೂರ್ ಅವರಿಗೆ ಬೆಂಗಳೂರು ಸಿವಿಲ್ ನ್ಯಾಯಾಲಯ ನಿರ್ದೇಶಿಸಿತ್ತು. ಆದರೂ ಮೆಸರ್ಸ್ ಅಲಯನ್ಸ್ ವಿಶ್ವವಿದ್ಯಾಲಯ ಮತ್ತು ಮೆಸರ್ಸ್ ಶ್ರೀವಾರಿ ಶೈಕ್ಷಣಿಕ ಸೇವೆಗಳು ಹೆಸರಿನ ಸಂಸ್ಥೆಯ ಅಡಿಯಲ್ಲಿ 2016ರಿಂದ 2017ರ ಅವಧಿಯಲ್ಲಿ ಪ್ರತ್ಯೇಕ ಖಾತೆ ತೆರೆದು, ಒಟ್ಟು ₹ 107 ಕೋಟಿ ಮೊತ್ತವನ್ನು ತಮ್ಮ ಖಾತೆಗೆ ಅಕ್ರಮವಾಗಿ ವರ್ಗಾಯಿಸಿಕೊಂಡಿದ್ದಾರೆ’ ಎಂದು ಆರೋಪ ಮಧುಕರ ಅಂಗೂರ್ ಮೇಲಿತ್ತು.

ಈ ಆರೋಪಕ್ಕೆ ಸಂಬಂಧಿಸಿದಂತೆ ಆನೇಕಲ್, ಜೆ.ಪಿ. ನಗರ, ಮಡಿವಾಳ ಮತ್ತು ಶಂಕರಪುರ ಪೊಲೀಸ್ ಠಾಣೆಗಳಲ್ಲಿ ನಾಲ್ಕು ಪ್ರತ್ಯೇಕ ಪ್ರಕರಣ ದಾಖಲಾಗಿದ್ದವು. ಈ ಸಂಬಂಧ ಜಾರಿ ನಿರ್ದೇಶನಾಲಯವು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ, ಮಧುಕರ ಅಂಗೂರ್ ಅವರನ್ನು ಬಂಧಿಸಿತ್ತು. ಹೈಕೋರ್ಟ್, 2022ರ ಮೇ 3ರಂದು ಮಧುಕರ್ ಅಂಗೂರ್‌ಗೆ ಜಾಮೀನು ಮಂಜೂರು ಮಾಡಿತ್ತು. ಇದನ್ನು ರದ್ದುಪಡಿಸುವಂತೆ ಕೋರಿ ಅಲಯನ್ಸ್ ವಿಶ್ವವಿದ್ಯಾಲಯ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ.

137 ವಿದ್ಯಾರ್ಥಿನಿಯರು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಶಕ್ತಿನಗರದ ಸಿಟಿ ಕಾಲೇಜ್ ಆಫ್ ನರ್ಸಿಂಗ್ ಸಂಸ್ಥೆಯ ಹಾಸ್ಟೆಲ್‌ನಲ್ಲಿರುವ 137 ವಿದ್ಯಾರ್ಥಿನಿಯರು ಕಲುಷಿತ ಆಹಾರ ಸೇವನೆಯಿಂದಾಗಿ ಸೋಮವಾರ ಅಸ್ವಸ್ಥಗೊಂಡಿದ್ದಾರೆ.

ಮಾಂಸಾಹಾರ ಸೇವಿಸಿದ್ದ ವಿದ್ಯಾರ್ಥಿನಿಯರಲ್ಲಿ ಸೋಮವಾರ ಮಧ್ಯಾಹ್ನ ವಾಂತಿ, ಭೇದಿ ಕಾಣಿಸಿಕೊಂಡಿತ್ತು. ಹೊಟ್ಟೆ ನೋವಿನಿಂದ ನರಳುತ್ತಿದ್ದ ವಿದ್ಯಾರ್ಥಿನಿಯರನ್ನು ನಗರದ ಸಿಟಿ ಆಸ್ಪತ್ರೆ, ಮಂಗಳಾ ನರ್ಸಿಂಗ್ ಹೋಂ, ಕೆಎಂಸಿ ಹಾಗೂ ಎ.ಜೆ ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಮಧ್ಯಾಹ್ನ ಊಟ ಸೇವಿಸಿದ ಬಳಿಕ ಹೊಟ್ಟೆ ನೋವು, ವಾಂತಿ, ಭೇದಿ ಶುರುವಾಗಿತ್ತು. ಚಿಕನ್, ಫ್ರೈಡ್ ರೈಸ್ ಸೇವಿಸಿದವರಲ್ಲಿ ಹೆಚ್ಚು ಸಮಸ್ಯೆ ಕಾಣಿಸಿಕೊಂಡಿದೆ’ ಎಂದು ಅಸ್ವಸ್ಥ ವಿದ್ಯಾರ್ಥಿನಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.



ಅಸ್ವಸ್ಥಗೊಂಡ ಕೆಲ ವಿದ್ಯಾರ್ಥಿನಿಯರನ್ನು ಮಂಗಳೂರಿನ ಸಿಟಿ ಆಸ್ಪತ್ರೆಗೆ ಕರೆತರಲಾಯಿತು

ಜಿಲ್ಲಾಧಿಕಾರಿ ರವಿಕುಮಾರ್ ಎಂ.ಆರ್ ಹಾಗೂ ಜಿಲ್ಲಾ ಆರೋಗ್ಯ ಸರ್ವೇಕ್ಷಣಾಧಿಕಾರಿ ಕೆ.ಜಗದೀಶ, ಪೊಲೀಸ್ ಆಯುಕ್ತ ಎನ್.ಶಶಿಕುಮಾರ್, ಶಾಸಕ ವೇದವ್ಯಾಸ ಕಾಮತ್ ಹಾಗೂ ಕಾಂಗ್ರೆಸ್ ಮುಖಂಡ ಜೆ.ಆರ್. ಲೋಬಿ ಅವರು ಸಿಟಿ ಆಸ್ಪತ್ರೆಗೆ ಭೇಟಿ ನೀಡಿ ವಿದ್ಯಾರ್ಥಿನಿಯರ ಆರೋಗ್ಯ ವಿಚಾರಿಸಿದರು.

ಭಾನುವಾರವೂ ವಾಂತಿ ಭೇದಿ: ಭಾನುವಾರವೂ ಆಹಾರ ಸೇವಿಸಿದ್ದ ಕೆಲವು ವಿದ್ಯಾರ್ಥಿನಿಯರಲ್ಲಿ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿತ್ತು. ಸೋಮವಾರ ಮಧ್ಯಾಹ್ನ ಹಾಸ್ಟೆಲ್‌ನ ಬಹುತೇಕ ವಿದ್ಯಾರ್ಥಿನಿಯರು ಅಸ್ವಸ್ಥಗೊಂಡರು ಎಂದು ಮೂಲಗಳು ತಿಳಿಸಿವೆ.

‘ಜಿಲ್ಲಾ ಆರೋಗ್ಯ ಇಲಾಖೆಯ ತಂಡವು ವಿದ್ಯಾರ್ಥಿನಿಯರು ವಾಸವಿದ್ದ ಹಾಸ್ಟೆಲ್‌ಗೆ ಭೇಟಿ ನೀಡಿ ಪರಿಶೀಲಿಸಿದೆ. ಅಸ್ವಸ್ಥಗೊಳ್ಳಲು ಕಾರಣ ಏನೆಂದು ಪರಿಶೀಲಿಸಲಿದೆ’ ಎಂದು ಡಾ. ಜಗದೀಶ್ ತಿಳಿಸಿದರು.

ವಿಐಎಸ್‌ಎಲ್ ಮುಚ್ಚದಿರಿ: ಮೋದಿಗೆ ಸಿದ್ದರಾಮಯ್ಯ ಪತ್ರ

ಬೆಂಗಳೂರು: ‘ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು (ವಿಐಎಸ್‌ಎಲ್) ಯಾವುದೇ ಕಾರಣಕ್ಕೂ ಮುಚ್ಚಬಾರದು’ ಎಂದು ಆಗ್ರಹಿಸಿ ಪ್ರಧಾನಿ ನರೇಂದ್ರ ಮೋದಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

‘ಈ ಕಾರ್ಖಾನೆಯು ಲಕ್ಷಾಂತರ ಕನ್ನಡಿಗರ ಹೆಮ್ಮೆ ಮತ್ತು ಜೀವನೋಪಾಯದ ಮೂಲ. ಭದ್ರಾವತಿಯು ಕರ್ನಾಟಕದ ಉಕ್ಕಿನ ನಗರ ಎಂದು ಹೆಸರು ಪಡೆಯಲು ಈ ಕಾರ್ಖಾನೆ ಕಾರಣ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ರಾಜ್ಯದಲ್ಲಿ ಬಾಕಿ ಇರುವ ಎಲ್ಲ ಉಕ್ಕು ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಭರವಸೆಯನ್ನು ಬಿಜೆಪಿ ನೀಡಿತ್ತು. ಆದರೆ ಉಕ್ಕು ಆಧಾರಿತ ರಾಜ್ಯದ ಏಕೈಕ ಸರ್ಕಾರಿ ಸ್ವಾಮ್ಯವನ್ನು ಉಳಿಸಲು ಬಿಜೆಪಿ ಯಾವುದೇ ಪ್ರಯತ್ನ ಮಾಡಿಲ್ಲ’ ಎಂದಿದ್ದಾರೆ.

ನಗರದಲ್ಲಿ ಇಂದು

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ರಾಷ್ಟ್ರೀಯ ಪುರಸ್ಕಾರ ಪ್ರದಾನ: ಎಚ್.ಎನ್. ನಾಗಮೋಹನ್ ದಾಸ್, ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಅತಿಥಿ: ವೀಣಾ ಶರ್ಮಾ ಭೂಸನೂರಮಠ, ಆಯೋಜನೆ: ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಮತ್ತು ಯು.ಆರ್. ಅನಂತಮೂರ್ತಿ ಪುಣ್ಯಸ್ಥಳ ಅಭಿವೃದ್ಧಿ ಜಂಟಿಕ್ರಿಯಾ ಸಮಿತಿ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಬಿ.ಎಸ್. ಜ್ಞಾನಪ್ರಕಾಶ್ ಅವರ ‘ಜ್ಞಾನ ಚಕ್ಷುರ’ ಕವನ ಸಂಕಲನ ಬಿಡುಗಡೆ: ಸುವರ್ಣ ಅಮರನಾಥ್, ಅತಿಥಿಗಳು: ಎಂ. ಜ್ಯೋತಿಶ್ವರಪ್ಪ, ಸೈಯದ್ ಅಜ್ಞತ್, ವಾಣಿ ಶ್ರೀರಂಗರಾಜು, ಲತಾ ಹೆಗಡೆ, ಆರ್. ಚಂದ್ರಶೇಖರ್ ಭಟ್, ಆಯೋಜನೆ ಮತ್ತು ಸ್ಥಳ: ಜಾಗೃತಿ ಸಂಸ್ಥೆ, ಸಮತಾ ಲೇಡೀಸ್ ಕ್ಲಬ್, ಲಾಲ್‌ಬಾಗ್ 4ನೇ ಅಡ್ಡರಸ್ತೆ, ಸುಧಾಮನಗರ, ಬೆಳಿಗ್ಗೆ 11.45

2023ನೇ ಸಾಲಿನ ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿ ಪ್ರದಾನ: ಬಸವರಾಜ ಕಲ್ಗುಡಿ, ಕೆ. ಮರುಳಸಿದ್ದಪ್ಪ, ಪ್ರಶಸ್ತಿ ಪುರಸ್ಕೃತರು: ಬಂಜಗೆರೆ ಜಯಪ್ರಕಾಶ್, ನಟರಾಜ್ ಹುಳಿಯಾರ್, ಪ್ರಾಸ್ತಾವಿಕ ನುಡಿ: ಎಚ್. ದಂಡಪ್ಪ, ಅಭಿನಂದನಾ ಭಾಷಣ: ಸಿ.ಜಿ. ಲಕ್ಷ್ಮೀಪತಿ, ಎಂ.ಎಸ್. ಆಶಾದೇವಿ, ಆಯೋಜನೆ: ಡಾ. ಜಿಎಸ್ಸೆಸ್ ವಿಶ್ವಸ್ತ ಮಂಡಲಿ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4

ಡಾ.ಜಿ.ಎಸ್. ಶಿವಪ್ರಸಾದ್ ಅವರ ‘ಅಪ್ಪ ನೆಟ್ಟ ಆಲದ ಮರ’ ಪುಸ್ತಕ ಬಿಡುಗಡೆ: ಎಸ್.ಜಿ. ಸಿದ್ಧರಾಮಯ್ಯ, ಕೃತಿ ಪರಿಚಯ: ಎಂ.ಎಸ್. ಆಶಾದೇವಿ, ಆಯೋಜನೆ: ನವಕರ್ನಾಟಕ ಪ್ರಕಾಶನ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4ರಿಂದ



ಚಂದ್ರಶೇಖರ ಕಂಬಾರ


ಸಂಗೀತೋತ್ಸವ: ಉದ್ಘಾಟನೆ: ಬಿ. ವೀರಪ್ಪ, ಅತಿಥಿಗಳು: ಚಂದ್ರಶೇಖರ ಕಂಬಾರ, ವಿವೇಕ್ ಸುಬ್ಬಾರೆಡ್ಡಿ, ಅಧ್ಯಕ್ಷತೆ: ದೇವದಾಸ್, ಆಯೋಜನೆ: ಗಾನಗಂಗಾ, ಸ್ಥಳ: ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

‘ರಂಗಸಂಪನ್ನರಿಗೆ ರಂಗಗೌರವ’, ‘ಊರುಭಂಗ’ ನಾಟಕ ಪ್ರದರ್ಶನ: ಅತಿಥಿಗಳು: ವಿಮಲಾ ರಂಗಾಚಾರ್, ಗಣೇಶ್ ಭಟ್ಟ, ಕೆ.ಎಂ. ರಾಘವೇಂದ್ರನ್, ಶೀಲಾ ಮೆನನ್, ಆಯೋಜನೆ ಮತ್ತು ಸ್ಥಳ: ಎಂ.ಇ.ಎಸ್. ರಂಗಶಾಲೆಯ ಕಿಶೋರ ಕೇಂದ್ರ, ಮಲ್ಲೇಶ್ವರ, ಸಂಜೆ 5.30

ಶ್ರೀನಿವಾಸ್ ಜಿ. ಕಪ್ಪಣ್ಣ 75 ಸಾಂಸ್ಕೃತಿಕ ಸಂಭ್ರಮದ ಅಂಗವಾಗಿ ‘ಚಿಟ್ಟೆ’ ನಾಟಕ ಪ್ರದರ್ಶನ: ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಅತಿಥಿಗಳು: ಎಂ ಪ್ರಕಾಶಮೂರ್ತಿ, ಕೆ.ವೈ. ನಾರಾಯಣಸ್ವಾಮಿ, ನಾಗತಿಹಳ್ಳಿ ರಮೇಶ್, ಆರ್.ಕೆ. ಹೆಗಡೆ, ನಾಟಕಕಾರರು: ಬೇಲೂರು ರಘುನಂದನ್, ನಿರ್ದೇಶನ ಮತ್ತು ಸಂಗೀತ: ಕೃಷ್ಣಮೂರ್ತಿ ಕವತಾರ್, ಆಯೋಜನೆ: ಸವಿಗಾನ, ಸ್ಥಳ: ಅವ್ವ ಸಭಾಂಗಣ, ಬನಶಂಕರಿ 3ನೇ ಹಂತ, ಸಂಜೆ 6

‘ಅಂಗುಲೀಮಾಲ’ ನಾಟಕ ಪ್ರದರ್ಶನ: ಉದ್ಘಾಟನೆ: ಮರಿಸ್ವಾಮಿ, ಅಧ್ಯಕ್ಷತೆ: ಆಂಜನೇಯ, ಅತಿಥಿಗಳು: ವೆಂಟಕರಾಜು, ಜಿ. ತಿಪ್ಪೇಸ್ವಾಮಿ, ನಾಟಕ ರಚನೆ: ಪ್ರಭುಶಂಕರ, ನಿರ್ದೇಶನ: ಆರ್. ರಾಮಮೂರ್ತಿ, ಆಯೋಜನೆ: ರಂಗಸೇತುವೆ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6

ಪ್ರವಚನ ವಾಹಿನಿ ಕಾರ್ಯಕ್ರಮ: ‘ಇಂದಿನ ಸಮಾಜಕ್ಕೆ ಶಂಕರರ ಕೊಡುಗೆಗಳು’ ಕುರಿತು ಉಪನ್ಯಾಸ: ಮಂಜುನಾಥ್ ಭಟ್ ವಿನಾಯಕ, ಆಯೋಜನೆ ಮತ್ತು ಸ್ಥಳ: ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30



ದೊಡ್ಡರಂಗೇಗೌಡ ಜನ್ಮದಿನ ಸಂಭ್ರಮದಲ್ಲಿ ‘ಕಾವ್ಯ ವೈವಿಧ್ಯಮಯ ಹಾಗೂ ಬಾಳ ಬಾಂಧವ್ಯದ ಹೆಜ್ಜೆ ಗುರುತುಗಳ ಮೆಲುಕು’: ಉದ್ಘಾಟನೆ: ಮನು ಬಳಿಗಾರ್, ಅಧ್ಯಕ್ಷತೆ: ಬಸವಲಿಂಗಯ್ಯ ಹಿರೇಮಠ, ಪ್ರಾಸ್ತಾವಿಕ ನುಡಿ: ಉಪೇಂದ್ರಕುಮಾರ್ ಎಂ.ಆರ್., ಅತಿಥಿಗಳು: ಅ.ನಾ. ಪ್ರಹ್ಲಾದರಾವ್, ನಿಡಸಾಲೆ ಪುಟ್ಟಸ್ವಾಮಯ್ಯ, ಗೋವಿಂದಹಳ್ಳಿ ಕೃಷ್ಣೇಗೌಡ, ಉಪಸ್ಥಿತಿ: ದೊಡ್ಡರಂಗೇಗೌಡ, ಆಯೋಜನೆ: ಸಮನ್ವಯ ಸಾಹಿತಿ ಡಾ. ದೊಡ್ಡರಂಗೇಗೌಡರ ಅಭಿಮಾನಿಗಳ ಬಳಗ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4ರಿಂದ

12 ಕಿ.ಮೀ ಉದ್ದದ ರಸ್ತೆಗೆ ಪುನೀತ್‌ರಾಜ್ ಕುಮಾರ್ ಹೆಸರು

ಬೆಂಗಳೂರು: ನಗರದ ಪ್ರಮುಖ ರಸ್ತೆಯೊಂದಕ್ಕೆ ನಟ ದಿವಂಗತ ಪುನೀತ್‌ರಾಜ್ ಕುಮಾರ್ ರಸ್ತೆಯೆಂದು ನಾಮಕರಣ ಮಾಡಲು ರಾಜ್ಯ ಸರ್ಕಾರವು ತೀರ್ಮಾನಿಸಿದೆ.

ಬನ್ನೇರಘಟ್ಟ ರಸ್ತೆಯ ಮೆಗಾ ಸಿಟಿ ಮಾಲ್‌ನಿಂದ ನಾಯಂಡಹಳ್ಳಿ ಜಂಕ್ಷನ್ ನಡುವಿನ ಹೊರವರ್ತುಲ ರಸ್ತೆಗೆ (12 ಕಿ.ಮೀ ಉದ್ದ) ಪುನೀತ್ ರಾಜ್‌ಕುಮಾರ್ ರಸ್ತೆಯೆಂದು ನಾಮಕರಣ ಮಾಡಲು ತೀರ್ಮಾನಿಸಲಾಗಿದ್ದು, ಫೆ.7ರಂದು ಸಂಜೆ 6ಕ್ಕೆ ಪದ್ಮನಾಭ ನಗರದ ಬಳಿ ರಸ್ತೆಯ ನಾಮಫಲಕ ಅನಾವರಣ ಕಾರ್ಯಕ್ರಮ ನಡೆಯಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಸ್ತೆಯ ನಾಮಫಲಕ ಅನಾವರಣ ಮಾಡಲಿದ್ದಾರೆ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ.ಹರೀಶ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಕಂದಾಯ ಇಲಾಖೆ ಸಚಿವ ಆರ್.ಅಶೋಕ್ ಮಾತನಾಡಿ, ಕಾರ್ಯಕ್ರಮಕ್ಕೆ ನಟ ಸುದೀಪ್ ಹಾಗೂ ಪುನೀತ್ ಕುಟುಂಬಸ್ಥರು ಬರಲಿದ್ದಾರೆ ಎಂದು ತಿಳಿಸಿದರು.

ಅಶೋಕ್ ಲೇಲ್ಯಾಂಡ್, ರಿಲಯನ್ಸ್ ಇಂಡಸ್ಟ್ರೀಸ್‌ನಿಂದ ಟ್ರಕ್ ಅಭಿವೃದ್ಧಿ

ಹೈಡ್ರೋಜನ್ ಇಂಧನ ಚಾಲಿತ ಟ್ರಕ್ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಹಾಗೂ ಅಶೋಕ್ ಲೇಲ್ಯಾಂಡ್ ಕಂಪನಿಗಳು ಒಟ್ಟಾಗಿ, ಹೈಡ್ರೋಜನ್ ಇಂಧನದಿಂದ ಚಲಿಸುವ ಭಾರಿ ಸಾಮರ್ಥ್ಯದ ಟ್ರಕ್ ಅನಾವರಣಗೊಳಿಸಿವೆ. ಇಲ್ಲಿ ಸೋಮವಾರ ಆರಂಭವಾದ ಇಂಧನ ಸಪ್ತಾಹದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಟ್ರಕ್ ಅನಾವರಣ ಮಾಡಿದರು.

ಅಶೋಕ್ ಲೇಲ್ಯಾಂಡ್ ಹಾಗೂ ರಿಲಯನ್ಸ್ ಇಂಡಸ್ಟ್ರೀಸ್ ಕಳೆದ ಒಂದು ವರ್ಷದಿಂದ ಈ ಟ್ರಕ್ ಅಭಿವೃದ್ಧಿಯಲ್ಲಿ ತೊಡಗಿವೆ. 2022ರ ಆಗಸ್ಟ್‌ನಿಂದ ಇದು ಪ್ರಾಯೋಗಿಕ ಬಳಕೆಯಲ್ಲಿ ಇತ್ತು. ಈ ಟ್ರಕ್‌ನ ಒಟ್ಟಾರೆ ವಿನ್ಯಾಸವು ಡೀಸೆಲ್ ಚಾಲಿತ ಟ್ರಕ್‌ಗಳಿಗೆ ಹೋಲುವಂತಿದೆ ಎಂದು ಪ್ರಕಟಣೆ ತಿಳಿಸಿದೆ.



ಅಶೋಕ್ ಲೇಲ್ಯಾಂಡ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಅಭಿವೃದ್ಧಿಪಡಿಸಿರುವ ಹೈಡ್ರೋಜನ್ ಇಂಧನ ಚಾಲಿತ ಟ್ರಕ್

‘ಸುಸ್ಥಿರ ಹಾಗೂ ಪರಿಸರ ಪೂರಕ ವಾಹನ ತಯಾರಿಕಾ ವಲಯದಲ್ಲಿ ನಾಯಕತ್ವದ ಸ್ಥಾನ ಪಡೆಯುವುದು ನಮ್ಮ ಗುರಿ’ ಎಂದು ಅಶೋಕ್ ಲೇಲ್ಯಾಂಡ್ ಕಂಪನಿಯ ಅಧ್ಯಕ್ಷ ಮತ್ತು ಮುಖ್ಯ ತಾಂತ್ರಿಕ ಅಧಿಕಾರಿ ಡಾ.ಎನ್. ಸರವಣನ್ ಹೇಳಿದ್ದಾರೆ.

ಹೈಡ್ರೋಜನ್ ಚಾಲಿತ ಟ್ರಕ್ ಹೊರಸೂಸುವ ಇಂಗಾಲದ ಪ್ರಮಾಣವು ತೀರಾ ನಗಣ್ಯ. ಈ ಟ್ರಕ್‌ನ ಸಾಮರ್ಥ್ಯವು ಸಾಂಪ್ರದಾಯಿಕ ಎಂಜಿನ್ ಹೊಂದಿರುವ ಟ್ರಕ್‌ಗಳಿಗೆ ಸರಿಸಮವಾಗಿರುತ್ತದೆ. ಅಲ್ಲದೆ, ಹೈಡ್ರೋಜನ್ ಚಾಲಿತ ಟ್ರಕ್‌ಗಳ ನಿರ್ವಹಣಾ ವೆಚ್ಚ ಕಡಿಮೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಹೇಳಿದೆ.

ರಿಲಯನ್ಸ್ ಕಂಪನಿಯು ಮುಂದಿನ ದಿನಗಳಲ್ಲಿ ಭಾರಿ ಸಾಮರ್ಥ್ಯದ ಟ್ರಕ್‌ಗಳಲ್ಲಿ ಹೈಡ್ರೋಜನ್ ಚಾಲಿತ ಎಂಜಿನ್ ಬಳಕೆಯನ್ನು ವ್ಯಾಪಕವಾಗಿ ಪರೀಕ್ಷೆಗೆ ಒಳಪಡಿಸಲಿದೆ. ನಂತರದಲ್ಲಿ ಈ ಟ್ರಕ್‌ಗಳನ್ನು ರಿಲಯನ್ಸ್ ಕಂಪನಿಯು ತನ್ನಲ್ಲಿ ಬಳಕೆಗೆ ತೆಗೆದುಕೊಳ್ಳಲಿದೆ.

ಕ್ಷೇಮ ಕುಶಲ



ಪರೀಕ್ಷೆಗೆ ಇರಲಿ ಸಿದ್ಧತೆ ಜತೆ ಕೌಶಲ

ರಮ್ಯಾ ಶ್ರೀಹರಿ

ನಾವು ಯೋಜಿಸಿಕೊಂಡ ಯಾವುದೇ ಕೆಲಸ ಸುಸೂತ್ರವಾಗಿ ನಡೆದು ಫಲಪ್ರದವಾಗಬೇಕಾದರೆ ಸಂಕಲ್ಪದ ಜೊತೆಗೆ ಸಿದ್ಧತೆ, ಪರಿಶ್ರಮ, ದೃಢ ಮನಸ್ಸು, ಧೈರ್ಯ ಮತ್ತು ಕೌಶಲಗಳೂ ಮುಖ್ಯವಾಗಿ ಇರಬೇಕು. ಪರೀಕ್ಷೆಗಾಗಿ ತಯಾರಿ ಎಂಬುದು ಕೊನೆ ಗಳಿಗೆಯಲ್ಲಿ ಮಾಡಬೇಕಾದ ಕೆಲಸವಲ್ಲ, ಅದು ಶೈಕ್ಷಣಿಕ ವರ್ಷದ ಮೊದಲಿನಿಂದಲೇ ಆರಂಭವಾಗಬೇಕು. ಪಠ್ಯವಿಷಯಗಳನ್ನು ಅರ್ಥಮಾಡಿಕೊಳ್ಳಲು, ಮನನ ಮಾಡಿ ನೆನಪಿಟ್ಟುಕೊಂಡು ಪರೀಕ್ಷೆಯಲ್ಲಿ ಪ್ರಸ್ತುತಪಡಿಸಲು ಸಾಕಷ್ಟು ಸಮಯಾವಕಾಶ ಬೇಕು. ಓದುವ ವಿಧಾನಗಳಲ್ಲಿ ಪ್ರಯೋಗಗಳನ್ನು ಮಾಡಿ, ನಮಗೆ ಸೂಕ್ತವಾದುದನ್ನು ಆಯ್ದುಕೊಳ್ಳಲು, ನಮಗೆ ನೆನಪಿಟ್ಟುಕೊಳ್ಳಲು ಅನುಕೂಲವಾಗುವಂತಹ ಟಿಪ್ಪಣಿಗಳನ್ನು ತಯಾರಿಸಿಕೊಳ್ಳಲು, ಒಮ್ಮೆ ಅರ್ಥಮಾಡಿಕೊಂಡ ವಿಷಯವನ್ನು ಅಭ್ಯಾಸದ ಮೂಲಕ ಹೃದ್ಗತ ಮಾಡಿಕೊಳ್ಳಲು ಸಮಯ ಬೇಕು.

ಪರೀಕ್ಷೆಗೆ ಸಿದ್ಧವಾಗುವ ಸಮಯ ಕೇವಲ ಉತ್ತಮ ಶ್ರೇಣಿಗಳಿಸುವುದಕ್ಕಾಗಿಯಷ್ಟೇ ಅಲ್ಲದೆ, ಆ ಸಮಯವನ್ನು ಶಿಸ್ತು, ಶ್ರದ್ಧೆಗಳನ್ನು ರೂಢಿಸಿಕೊಳ್ಳುವ ಕಾಲವಾಗಿಯೂ ಕಾಣಬಹುದು. ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುವ ಸಮಯದಲ್ಲಿ ಕೆಲವು ಜೀವನ ಮೌಲ್ಯಗಳನ್ನು ಅನ್ವೇಷಿಸಿಕೊಂಡು ಅದನ್ನು ಅಳವಡಿಸಿಕೊಳ್ಳುವುದೂ ಸಾಧ್ಯವಿದೆ, ಹಾಗೆಯೇ ನಮ್ಮಲ್ಲಿನ ಸಾಮರ್ಥ್ಯ, ಸಂಪನ್ಮೂಲಗಳನ್ನು ಕಂಡುಕೊಂಡು ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದನ್ನೂ ಕಲಿಯಲು ಸರಿಯಾದ ಸಮಯ.



ಕಲಿಕೆಯ ಮೆಟ್ಟಿಲುಗಳನ್ನು ಒಂದೊಂದಾಗಿ ಏರುವಾಗಿನ ಹಾದಿಯಲ್ಲುಂಟಾಗುವ ಏಳು -ಬೀಳುಗಳನ್ನು ಹೇಗೆ ನಿರ್ವಹಿಸಬೇಕು ಎನ್ನುವುದನ್ನು ತಿಳಿದುಕೊಳ್ಳುವ ಅವಕಾಶವನ್ನು ಪರೀಕ್ಷಾ ಸಿದ್ಧತೆಯ ಕಾಲ ವಿದ್ಯಾರ್ಥಿ ಹಾಗೂ ಪೋಷಕರು ಇಬ್ಬರಿಗೂ ಒದಗಿಸುತ್ತದೆ. ಬದುಕಿನ ಬಗ್ಗೆ ಎಷ್ಟೆಲ್ಲಾ ಅರಿಯಲು, ಕೆಲವು ಅಭ್ಯಾಸಗಳನ್ನು ರೂಢಿಸಿಕೊಳ್ಳಲು, ಕೆಲವೊಂದನ್ನು ಸಮಯಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳಲು, ಮತ್ತೆ ಕೆಲವು ಪೂರಕವಲ್ಲದ ಅಭ್ಯಾಸಗಳನ್ನು ತ್ಯಜಿಸಲು, ಅನೇಕ ಮೌಲಿಕ ಜೀವನಕೌಶಲಗಳನ್ನು ಕಲಿಯುವುದರ ಜತೆಗೆ ಪರೀಕ್ಷೆಯನ್ನು ಒತ್ತಡವಿಲ್ಲದೇ ಎದುರಿಸಲು ನೆರವಾಗುತ್ತದೆ. ಆ ನಿಟ್ಟಿನಲ್ಲಿ ಸಹಕಾರಿಯಾಗುವಂತಹ ಕೆಲವು ವಿಚಾರಗಳು ಇಲ್ಲಿವೆ:

> ಪರೀಕ್ಷೆಗೆ ಸಿದ್ಧವಾಗುವ ಸಮಯದಲ್ಲಿ ರೂಢಿಯಾಗುವ ಶಿಸ್ತು, ಶ್ರದ್ಧೆ ಜೀವನಪರ್ಯಂತ ನೆರವಿಗೆ ಬರುತ್ತವೆ.

1. ಎಲ್ಲ ಒತ್ತಡವೂ ಕೆಟ್ಟದ್ದೇನಲ್ಲ, ಒತ್ತಡ ಒಳ್ಳೆಯದೂ ಆಗಿರುತ್ತದೆ. 'ಪರೀಕ್ಷೆ ಹತ್ತಿರವಾಗುತ್ತಿದೆ, ಅದಕ್ಕಾಗಿ ಓದಿ ತಯಾರಾಗಬೇಕು' ಎನ್ನುವ ಸಣ್ಣ ಪ್ರಮಾಣದ ಆತಂಕ ಒಳ್ಳೆಯದೇ. ಇಂತಹ ಸಕಾರಾತ್ಮಕ ಆತಂಕವಿಲ್ಲದಿದ್ದರೆ ಮಕ್ಕಳಲ್ಲಿ ಓದಿನ ಕಡೆಗೆ ಗಮನ ಕಡಿಮೆಯಾಗುತ್ತದೆ. ಪೋಷಕರು 'ನೀನು ಸರಿಯಾಗಿ ಓದಿಕೊಳ್ಳಬೇಕು' ಎಂದು ಎಷ್ಟು ಹೇಳಿದರೂ ಕೇಳದ ಮಕ್ಕಳು ತಾವೇ 'ಓದದೇ ಇದ್ದರೆ ಏನಾಗುತ್ತದೆ' ಎನ್ನುವುದನ್ನು ಮನಸ್ಸಿಗೆ ತಂದುಕೊಂಡಾಗ ಓದಿನ ಬಗ್ಗೆ ಜಾಗೃತರಾಗುತ್ತಾರೆ. ಹಾಗಾಗಿ ಒತ್ತಡ ವಿದ್ಯಾರ್ಥಿಯ ಮನಸ್ಸಿನೊಳಗಿನದಾಗಿರಬೇಕೇ ಹೊರತು ಹೊರಗಿನಿಂದ ಬಂದದ್ದಾಗಿರಬಾರದು.

2. ದಿನವೂ ನಿಯಮಿತ ಅಭ್ಯಾಸ ಮಾಡಲು ಮಕ್ಕಳಿಗೆ ತಮ್ಮ ಜೀವನಶೈಲಿಯಲ್ಲಿ ಒಂದು ಸ್ಥಿರತೆಯ ಅವಶ್ಯಕತೆಯಿರುತ್ತದೆ. ದಿನಚರಿ ಏರುಪೇರಾಗದಂತೆ, ಓದುವ ಸಮಯ ಯಾವ ರೀತಿಯಲ್ಲೂ ಕಳೆದುಹೋಗದಂತೆ ಜಾಗರೂಕರಾಗಿರುವ ಮತ್ತು ಎಷ್ಟೇ ಕಷ್ಟವಾದರೂ ಒಂದು ವೇಳಾಪಟ್ಟಿಗೆ ಬದ್ಧರಾಗಿರುವ ನಿಷ್ಠೆ ಬೆಳೆಸಿಕೊಳ್ಳುವುದು ಅವಶ್ಯಕ. ಪರೀಕ್ಷೆ ಸಮಯದಲ್ಲಿ ಮಕ್ಕಳಿಗೆ ಅನಾರೋಗ್ಯವಿರಬಹುದು ಅಥವಾ ಕುಟುಂಬದಲ್ಲಿನ ಕೆಲವು ಪ್ರತಿಕೂಲ ಸಂದರ್ಭಗಳಿರಬಹುದು ಅವುಗಳನ್ನೇ ನೆಪವಾಗಿಸಿಕೊಳ್ಳದಂತೆ ನೋಡಬೇಕಿದೆ.

3. ಪ್ರಯೋಜನವನ್ನರಿಯದೆ ಯಾವ ಜೀವಿಯೂ ಯಾವ ಕೆಲಸವನ್ನೂ ಮಾಡುವುದಿಲ್ಲ, ಅಂದ ಮೇಲೆ ಮಕ್ಕಳು ಮಾತ್ರ ತಮ್ಮ ಓದಿನ ಪ್ರಯೋಜನವನ್ನರಿಯದೆ ಸುಮ್ಮನೆ ಓದಿ ಪರೀಕ್ಷೆ ಬರೆಯಬೇಕೆನ್ನುವುದು ನ್ಯಾಯವೇ? ವಿದ್ಯೆಯಿಂದ ಮನುಷ್ಯನ ಜೀವನ ಹೇಗೆ ಉದಾತ್ತತೆಯನ್ನು ಪಡೆಯುತ್ತದೆ ಎನ್ನುವುದಷ್ಟೇ ಅಲ್ಲದೆ ತಾವು ಕಲಿಯುತ್ತಿರುವ ವಿಜ್ಞಾನ, ಸಮಾಜ ವಿಜ್ಞಾನ, ಗಣಿತ, ಭಾಷೆಗಳು ಹೇಗೆ ಮನುಷ್ಯನ ಏಳಿಗೆಗೆ, ನೆಮ್ಮದಿಗೆ ಕಾರಣವಾಗಿದೆ ಎನ್ನುವುದನ್ನು ತಿಳಿಹೇಳಬೇಕಿದೆ.

4. ಯಾವ ಕೆಲಸವೇ ಆಗಲಿ ಪ್ರೀತಿಯಿಂದ ಮಾಡಿದಾಗ ಅದರಿಂದ ದೊರಕುವ ಸಂತೃಪ್ತಿ, ಸಮಾಧಾನ ಹೊರಪ್ರಪಂಚದ ಅಳತೆಗೋಲುಗಳಾದ ಸೋಲು-ಗೆಲುವುಗಳನ್ನು ಮೀರಿದ್ದು ಎಂದು ಮನವರಿಕೆಯಾದರೆ ಮಕ್ಕಳು ಕಲಿಕೆಯನ್ನು ಒಂದು ಸಂಭ್ರಮವಾಗಿಸಿಕೊಳ್ಳುತ್ತಾರೆ. ಪಠ್ಯೇತರ ಚಟುವಟಿಕೆಗಳು ಕಲಿಕೆಯ ಆನಂದವನ್ನು ಹೆಚ್ಚಿಸುವುದರಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಶೈಕ್ಷಣಿಕ ವರ್ಷದ ಆರಂಭದಿಂದಲೂ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ನಡುವೆ ಸಮತೋಲನ ಕಂಡುಕೊಳ್ಳುವುದು ಪರೀಕ್ಷೆಯ ಸಮಯದಲ್ಲಿ ಉಪಯೋಗಕ್ಕೆ ಬರುತ್ತದೆ.

5. ಸಹಪಾಠಿಗಳೊಂದಿಗಿನ ಸೌಹಾರ್ದ ಸಂಬಂಧವೂ ಮಕ್ಕಳನ್ನು ಓದಿನೆಡೆಗೆ ಪ್ರೇರೇಪಿಸುತ್ತದೆ. ಗುಂಪು ಕಲಿಕೆಯಿಂದ ಮಕ್ಕಳ ಆಲೋಚನಾ ಸಾಮರ್ಥ್ಯ, ಸಂವಹನ ಶಕ್ತಿ ಬೆಳೆಯುತ್ತದೆ. ಮೊದಲಿನಿಂದಲೂ ಸಹಪಾಠಿಗಳ ಒಡನಾಟದಲ್ಲಿ ಕಲಿಯುವ ಮಕ್ಕಳು ಓದಿನ ಕಷ್ಟ-ಸುಖಗಳನ್ನು ಪರಸ್ಪರ ಹಂಚಿಕೊಂಡ ಕಾರಣದಿಂದ ಪರೀಕ್ಷೆಯ ಸಮಯದಲ್ಲಿ ಧೈರ್ಯದಿಂದ ಇರುತ್ತಾರೆ.

6. ಮಕ್ಕಳ ಪ್ರತಿಯೊಂದು ನಡೆ, ನುಡಿ, ನಿರ್ಧಾರ ಎಲ್ಲದರಲ್ಲೂ ಪೋಷಕರು ಅತಿಕ್ರಮಣ ಪ್ರವೇಶ ಮಾಡಿದರೆ, ಓದುವ ಕೋಣೆಯಲ್ಲಿ ನಿರಂತರ ಅವರನ್ನು ಕಾವಲು ಕಾಯುವುದು ಮಕ್ಕಳಿಗೆ ತಮ್ಮ ಮೇಲೇ ಅಪನಂಬಿಕೆ ಉಂಟಾಗಲು ಕಾರಣವಾದೀತು. ಅವರವರ ನಡೆಗೆ, ಸಾಫಲ್ಯ-ವೈಫಲ್ಯಗಳಿಗೆ ಅವರನ್ನೇ ಹೊಣೆಗಾರರಾಗಿಸುವುದನ್ನು ಪರೀಕ್ಷಾಕಾಲದಿಂದಲೇ ಆರಂಭಿಸುವುದೊಳಿತು.

7. ಓದದೇ ಪರೀಕ್ಷೆಯಲ್ಲಿ ಫೇಲಾಗುವುದು ಅವಮಾನ, ದುಃಖಕ್ಕೆ ಕಾರಣವಾಗುತ್ತದೆ ಎಂಬ ನಕಾರಾತ್ಮಕ ಮಾತುಗಳನ್ನಾಡದೆ ಒಂದು ಪರೀಕ್ಷೆ ಪಾಸಾದಾಗ ತೆರೆದುಕೊಳ್ಳುವ ಮುಂದಿನ ಶೈಕ್ಷಣಿಕ ಹಾದಿಯ ಅನೇಕ ಅವಕಾಶಗಳ ಬಗ್ಗೆ ಮಾತನಾಡಿದಾಗ ಮಕ್ಕಳ ಬುದ್ಧಿ, ಮನಸ್ಸು ವಿಸ್ತಾರಗೊಳ್ಳುತ್ತದೆ. ಸಣ್ಣಪುಟ್ಟ ಸೋಲು ನಿರಾಶೆಗಳಿಗೆ ಎದೆಗುಂದದೆ ಅವನ್ನು ಮೀರಿ ಗುರಿಸಾಧನೆಯ ಕಡೆಗೆ ಲಕ್ಷ್ಯ ಕೊಟ್ಟಾಗ ಮಕ್ಕಳ ಮನೋಬಲ ವೃದ್ಧಿಸುತ್ತದೆ.

8. ಪರೀಕ್ಷೆಗೆ ಎಷ್ಟೇ ಚೆನ್ನಾಗಿ ತಯಾರಾಗಿದ್ದರೂ ಪಾಸಾಗುವುದು/ಫೇಲಾಗುವುದು, ಪಡೆಯುವ ಅಂಕಗಳು, ಮುಂದಿನ ಶೈಕ್ಷಣಿಕ/ಔದ್ಯೋಗಿಕ ಅವಕಾಶಗಳೂ ಎಲ್ಲವೂ ಅನಿಶ್ಚಿತತೆಯಿಂದ ಕೂಡಿರುತ್ತವೆ; ಇದು ಜೀವನದ ಸಹಜ ಲಕ್ಷಣ. ಅನಿಶ್ಚಿತತೆ ನಮ್ಮನ್ನು ನಿಷ್ಕ್ರಿಯರನ್ನಾಗಿಸದಂತೆ ಎಚ್ಚರವಹಿಸುತ್ತಾ ನಮ್ಮ ಕೈಲಿರುವ ಕೆಲಸವನ್ನು ಚೆನ್ನಾಗಿ ಮಾಡಿ, ಕೈಮೀರಿದ್ದನ್ನೂ ಶಾಂತವಾಗಿ ಸ್ವೀಕರಿಸುವ ಮನೋಭಾವವನ್ನು ಬೆಳೆಸಿಕೊಳ್ಳುವುದು ಒಂದು ಅತ್ಯಂತ ಮೌಲಿಕ ಜೀವನಕೌಶಲವನ್ನು ಕರಗತಮಾಡಿಕೊಂಡಂತೆಯೇ ಸರಿ.

ಲೋಕಲ್ ಆಹಾರ ಟೋಟಲ್ ಆರೋಗ್ಯ

ಡಾ. ಶ್ರೀನಿವಾಸ ಹರಪನಹಳ್ಳಿ

ಆಹಾರಕ್ಕೂ ಆರೋಗ್ಯಕ್ಕೂ ಇರುವ ಸಂಬಂಧ ಎಂತಹುದು ಎಂದು ನಮಗೆಲ್ಲ ಗೊತ್ತೇ ಇದೆ. ಆಹಾರವಿಲ್ಲದ ಜಗತ್ತನ್ನು ಕಲ್ಪಿಸಿಕೊಳ್ಳಲೂ ಆಗದು. ಹಿರಿಯರು, ವೈದ್ಯರು ಮತ್ತು ಆಹಾರತಜ್ಞರು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಆಹಾರದ ಮಹತ್ವ ಎಂಥದ್ದು ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ. ಹೀಗಿದ್ದೂ, ದಿನನಿತ್ಯ ಸೇವಿಸುವ ಆಹಾರದ ಬಗ್ಗೆ ಹಾಗೂ ಆರೋಗ್ಯದ ಮೇಲೆ ಆಹಾರದ ಪರಿಣಾಮಗಳ ಬಗ್ಗೆ ಕೊಂಚ ತಿಳಿದುಕೊಳ್ಳುವುದು ಉತ್ತಮ.

ಆಹಾರವೆನ್ನುವುದು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತದೆ. ಜಾತಿ, ಧರ್ಮ, ಸಂಸ್ಕೃತಿ ಮಾತ್ರವಲ್ಲ ಭೌಗೋಳಿಕ ಅಂಶಗಳು ಇಲ್ಲಿ ಮುಖ್ಯವಾಗುತ್ತವೆ. ಉದಾಹರಣೆಗೆ, ವಿಜಯಪುರದವರು ದಿನಾಲೂ ಜೋಳದ ರೊಟ್ಟಿಯನ್ನೇ ಇಷ್ಟಪಟ್ಟರೆ ಹಾಸನದವರಿಗೆ ರಾಗಿಮುದ್ದೆಯೇ ಮುದ್ದು! ಅದೇ ರೀತಿ ಇಟಾಲಿಯನ್ನರಿಗೆ ಪಾಸ್ತಾ, ನೂಡಲ್ಸ್ ನಿತ್ಯದ ಆಹಾರವಾದರೆ, ಮಾಂಸ ಮತ್ತು ಮೆಕ್ಕೆಜೋಳದ ಪದಾರ್ಥಗಳನ್ನು ಅಮೆರಿಕನ್ನರು ನಿತ್ಯ ಸೇವಿಸುತ್ತಾರೆ. ಮೀನು ಮತ್ತು ಆಲೂ(ಚಿಪ್ಸ್) ಬ್ರಿಟಿಷರಿಗೆ ಪ್ರಿಯ.

ಇಲ್ಲಿ ಗಮನಿಸಲೇಬೇಕಾದ ಅಂಶವೇನೆಂದರೆ ಎಲ್ಲರೂ ಅವರ ಸುತ್ತಮುತ್ತಲಿನ ಪರಿಸರದಲ್ಲೇ ಬೆಳೆಸಿದ ಪದಾರ್ಥಗಳನ್ನು ಹೆಚ್ಚಿನ ಮಟ್ಟಿಗೆ ಉಪಯೋಗಿಸುತ್ತಿರುವುದು. ಇದಕ್ಕೆ ಮುಖ್ಯಕಾರಣ ಅಲ್ಲಿನ ನೆಲದ ಸತ್ವವನ್ನು ಹೀರಿಕೊಂಡು ಬೆಳೆದ ಆಹಾರಧಾನ್ಯಗಳು ಅಥವಾ ತರಕಾರಿಗಳು ವಿಶಿಷ್ಟ ರುಚಿ ಹೊಂದಿ ಅಲ್ಲಿನ ಜನರ ಆರೋಗ್ಯಕ್ಕೆ ಕಾರಣವಾಗಿರುತ್ತವೆ. ನೈಸರ್ಗಿಕವಾಗಿ ಬೆಳೆದ ಸ್ಥಳೀಯ ಆಹಾರದಲ್ಲಿ ಕಂಡು ಬರುವ ಸತ್ವ ಬೇರೆಡೆಯಿಂದ ತಂದ ಸಂಸ್ಕರಿಸಿದ ಆಹಾರದಲ್ಲಿ ಇರುವುದಿಲ್ಲ. ಇದು



ವೈಜ್ಞಾನಿಕವಾಗಿಯೂ ಸಾಬೀತಾಗಿದೆ.

ಹೊರ ರಾಜ್ಯ ಅಥವಾ ಹೊರ ದೇಶದ ಖಾದ್ಯಗಳನ್ನು ಆಗಾಗ್ಗೆ ಸವಿಯುತ್ತೇವೆ. ಆದರೆ ಅವುಗಳು ನಿತ್ಯದ ಆಹಾರ ಪದ್ಧತಿಯಲ್ಲಿ ಇರುವುದಿಲ್ಲ. ಅದೇನಿದ್ದರೂ ಜಿಹ್ವಾಚಾಪಲ್ಯಕ್ಕೆ ಮಾತ್ರ. ಪೂರ್ವಜರಿಗೆ ಪರಿಸರಕ್ಕೆ ತಕ್ಕಂಥ ಆಹಾರಧಾನ್ಯ ಬೆಳೆಸುವ, ಫಸಲು ಸಂಗ್ರಹಿಸುವ ಪರಿಣತಿ ಇತ್ತು. ಸಾಂಪ್ರದಾಯಿಕವಾಗಿ ಬೆಳೆಸಿದ ಆಹಾರ ಆರೋಗ್ಯದ ಮೇಲೆ ಬೀರುವ ಉತ್ತಮ ಅಂಶಗಳ ಬಗ್ಗೆ ಅರಿತಿದ್ದರು. ನಮ್ಮ ಕಿಚನ್ ಗಾರ್ಡನ್ ಹಾಗೂ ಟೆರೇಸ್ ಗಾರ್ಡನ್ ಪರಿಕಲ್ಪನೆಗಳು ಹುಟ್ಟಿದ್ದೇ ಇವುಗಳ ತಳಹದಿಯ ಮೇಲೆ.

ಇತ್ತೀಚಿನ ದಿನಗಳಲ್ಲಿ ಪ್ರಪಂಚ ಒಂದು 'ಗ್ಲೋಬಲ್ ವಿಲೇಜ್' ಆಗಿ ಪರಿವರ್ತನೆಗೊಂಡಿದೆ. ಯಾವುದೇ ವಸ್ತು ಜಗತ್ತಿನ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಕೆಲವೇ ಗಂಟೆಗಳಲ್ಲಿ ತಲುಪುವ ವ್ಯವಸ್ಥೆ ಬಂದಿದೆ. ಜತೆಗೆ ಅಧಿಕ ಇಳುವರಿ ನೀಡುವ ಹೈಬ್ರಿಡ್ ತಂತ್ರಜ್ಞಾನ ಬಂದು ರೈತರು ತಮ್ಮ ಸಾಂಪ್ರದಾಯಿಕ ಉಳುಮೆಯನ್ನು ತೊರೆದು ಹೆಚ್ಚು ದುಡ್ಡು ತರುವ, ರಾಸಾಯನಿಕಗಳನ್ನು ಹೊಂದಿರುವ ಧಾನ್ಯ-ದಿನಸಿಗಳನ್ನು ಬೆಳೆಯುವ ಅನಿವಾರ್ಯತೆ ಎದುರಾಗಿದೆ. ಇದರ ಪರಿಣಾಮ ಆರೋಗ್ಯದ ಮೇಲೂ ಆಗಿದೆ.

ಸದ್ಯಕ್ಕೆ ಅನೇಕರಲ್ಲಿ ಕಂಡುಬರುವ ಸ್ಥೂಲಕಾಯ, ಮಧುಮೇಹ, ಶ್ವಾಸಸಂಬಂಧಿ ಕಾಯಿಲೆಗಳು ಬದಲಾದ ಆಹಾರಪದ್ಧತಿಯ ಪರಿಣಾಮಗಳು. ಹಾಗಾಗಿ ಸ್ಥಳೀಯವಾಗಿ ಸಿಗುವ ತಾಜಾ ಆಹಾರದಲ್ಲಿಯೇ ಆರೋಗ್ಯದ ಗುಟ್ಟಿದೆ ಎಂಬುದನ್ನು ಮರೆಯದಿರೋಣ.

ಸವಾಲುಗಳೇನು?

ಸ್ಥಳೀಯ ಆಹಾರ ಬಳಕೆಯಲ್ಲಿ ಸವಾಲುಗಳು ಇಲ್ಲವೆಲ್ಲಂದಿಲ್ಲ. ಸ್ಥಳೀಯ ಆಹಾರದ ಮೇಲೆ ಸಂಪೂರ್ಣವಾಗಿ ಅವಲಂಬನೆಗೊಂಡರೆ ಕೊಂಚಮಟ್ಟಿಗೆ ಅನನೂಕೂಲಗಳಿವೆ. ನಿತ್ಯದ ಅಡುಗೆಗೆ ಬೇಕಾಗುವ ಪ್ರತಿಯೊಂದು ಸಾಮಗ್ರಿಯೂ ನಮ್ಮಲ್ಲೇ ಬೆಳೆಯಲು ಸಾಧ್ಯವಿಲ್ಲ. ಅವಾಗ ಅಂಥ ಪದಾರ್ಥಗಳನ್ನು ಹೊರಗಡೆಯಿಂದ ತರಿಸುವುದು ಅನಿವಾರ್ಯ. ಇಲ್ಲದಿದ್ದರೆ ಆಹಾರದಲ್ಲಿ ಏಕತಾನತೆ ಕಾಡುತ್ತದೆ. ಸ್ಥಳೀಯ ಆಹಾರ ಸ್ವಲ್ಪ ದುಬಾರಿಯೆನ್ನಬಹುದು. ಏಕೆಂದರೆ ಇಲ್ಲಿ ಇಳುವರಿ ಕೊಂಚ ಕಡಿಮೆ. ಕೆಲ ರೈತರಷ್ಟೇ ಕಷ್ಟಪಟ್ಟು ಓಡಾಡಿ ಸಾಗುವಳಿ ಮಾಡುವುದರಿಂದ ಅವರಿಗೆ ತಗಲುವ ವೆಚ್ಚ ಕೂಡ ಜಾಸ್ತಿಯೇ ಎನ್ನಬಹುದು.

ಪ್ರಯೋಜನಗಳು

- ಸ್ಥಳೀಯ ಆಹಾರ ಸದಾಕಾಲ ಲಭ್ಯವಿರುತ್ತದೆ. ತರಕಾರಿಗಳು, ಹಣ್ಣು-ಹಂಪಲುಗಳು ಮತ್ತು ಹೈನು ಪದಾರ್ಥಗಳು ತಾಜಾಸ್ಥಿತಿಯಲ್ಲೇ ಸಿಗುತ್ತವೆ. ಅಕ್ಕಪಕ್ಕದ ಹಳ್ಳಿಯವರು, ತೋಟದವರು ಮಾರುಕಟ್ಟೆಯಲ್ಲಿ ನಿತ್ಯ ಮಾರುವುದರಿಂದ ನಾವು ಇದನ್ನು ಎಲ್ಲಿಂದಲೋ ತರಿಸುವ, ಶೇಖರಿಸುವ ಪ್ರಮೇಯವೇ ಬರುವುದಿಲ್ಲ.
- ಪ್ಯಾಕ್ ಮಾಡಿದ ತಕ್ಷಣ ತರಕಾರಿಗಳು ಮತ್ತು ಹಣ್ಣು-ಹಂಪಲುಗಳಲ್ಲಿ ಜೀವಸತ್ವಗಳು ನಾಶವಾಗತೊಡಗುತ್ತವೆ. ಇನ್ನು ಅವುಗಳನ್ನು ಹಲವಾರು ದಿನಗಳ ನಂತರ ಸೇವಿಸಿದರೆ ಅವು ಹೇಗೆ ಪೌಷ್ಟಿಕವೂ ಮತ್ತು ಸ್ವಾದಿಷ್ಟವೂ ಆಗಿರಲು ಸಾಧ್ಯ?. ಈ ಸ್ಥಳೀಯ ಆಹಾರಗಳನ್ನು ಕೊಳ್ಳುವುದರಿಂದ ಅಲ್ಲಿನ ರೈತರಿಗೆ, ಹೊಲದಲ್ಲಿ ದುಡಿಯುವವರಿಗೆ ಆದಾಯವೂ ಸಿಗುತ್ತದೆ.
- ಇಂದಿನ ಕಾಲದ ಮುಖ್ಯ ಸವಾಲೆಂದರೆ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಯನ್ನು (ಕಾರ್ಬನ್ ಫುಟ್ ಪ್ರಿಂಟ್) ಆದಷ್ಟು ಕಡಿಮೆ ಮಾಡುವುದು. ಆಹಾರಸಂಗ್ರಹ, ಸಾಗಾಣಿಕೆಯಲ್ಲಿ ಅನೇಕ ರೀತಿಯ ಯಂತ್ರಗಳು, ಉಪಕರಣಗಳು ಮತ್ತು ವಾಹನಗಳು ಉಪಯೋಗಿಸಲ್ಪಡುತ್ತವೆ. ಇವೆಲ್ಲಗಳಿಂದ ಹೊರಸೂಸುವ ಇಂಗಾಲದ ಡೈಆಕ್ಸೈಡ್ ವಾತಾವರಣದ ಮೇಲೆ ಅಗಾಧ ಒತ್ತಡ ಬೀರುತ್ತದೆ. ಇದನ್ನು ಕಡಿಮೆಮಾಡಲು ಉತ್ತಮ ಪರಿಹಾರವೆಂದರೆ ಆಹಾರವನ್ನು ಸ್ಥಳೀಯವಾಗೇ ಬೆಳೆದು ಅಲ್ಲಿಯೇ ಉಪಯೋಗಿಸುವುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಎಸ್ಸೆಸ್ಸೆಲ್ಸಿ

27) ಎರಡು ಸಮಾಂತರ ಶ್ರೇಢಿಗಳ ಸಾಮಾನ್ಯ ವ್ಯತ್ಯಾಸ ಒಂದೇ ಆಗಿದೆ. ಅವುಗಳ 100ನೇ ಪದಗಳ ನಡುವಿನ ವ್ಯತ್ಯಾಸ 100 ಆದರೆ 1000ನೇ ಪದಗಳ ನಡುವಿನ ವ್ಯತ್ಯಾಸವೇನು?

ಪರಿಹಾರ:– ಎರಡೂ ಸಮಾಂತರ ಶ್ರೇಢಿಯ ಮೊದಲ ಪದಗಳು ಕ್ರಮವಾಗಿ a_1 ಮತ್ತು a_2 ($a_1 > a_2$) ಆಗಿರಲಿ.

ಸಾಮಾನ್ಯ ವ್ಯತ್ಯಾಸ d ಆಗಿರಲಿ

ಮೊದಲ ಪದ =

$$a_1 + (100-1)d \quad (\because a_n = a+(n-1)d)$$

$$= a_1 + 99d$$

ಎರಡನೇ ಪದ=

$$a_2 + (100-1)d \quad (\because a_n = a+(n-1)d)$$

$$= a_2 + 99d$$

ದತ್ತ ಪ್ರಶ್ನೆಯ ಪ್ರಕಾರ

$$(a_1 + 99)d - (a_2 + 99)d = 100$$

$$a_1 - a_2 = 100$$

ಈಗ 1000^{th} term of the 1^{st} AP

$$a_1 + (1000-1)d \quad (\because a_n = a+(n-1)d)$$

$$= a_1 + 999d$$

1000^{th} term of the 2nd AP

$$a_2 + (100-1)d \quad (\because a_n = a+(n-1)d)$$

$$= a_2 + 99d$$

ಆದ್ದರಿಂದ ಇವುಗಳ 1000ನೇ ಪದಗಳ ನಡುವಿನ ವ್ಯತ್ಯಾಸ


$$= (a_1 + 999)d - (a_2 + 999)d$$

$$a_1 - a_2 = 100$$

∴ 1000ನೇ ಪದಗಳ ನಡುವಿನ ವ್ಯತ್ಯಾಸ 100.

28) ಒಂದು ಲಂಬಕೋನ ತ್ರಿಭುಜದಲ್ಲಿ ವಿಕರ್ಣದ ಮೇಲಿನ ವರ್ಗವು ಉಳಿದೆರಡು ಬಾಹುಗಳ ವರ್ಗಗಳ ಮೊತ್ತಕ್ಕೆ ಸಮನಾಗಿರುತ್ತದೆ ಎಂಬುದನ್ನು ಸಾಧಿಸಿ

ಉತ್ತರ:–



ನಾವು ಸಾಧಿಸಬೇಕಾದುದು $AC^2 = AB^2 + BC^2$

ರಚನೆ: $BD \perp AC$ ರಚಿಸಬೇಕು. (ಚಿತ್ರ ನೋಡಿ)

ಸಾಧನೆ: ΔABC ಯು ಒಂದು ಲಂಬಕೋನ ತ್ರಿಭುಜವಾಗಿದ್ದು $\angle B$ ಯು ಲಂಬಕೋನವಾಗಿದೆ.

ಈಗ $\Delta ADB \sim \Delta ABC$ ($\because$ ಪ್ರಮೇಯ 2.7)

ಆದ್ದರಿಂದ $\frac{AD}{AB} = \frac{AB}{AC}$ ($\because$ ಬಾಹುಗಳು ಸಮಾನುಪಾತದಲ್ಲಿವೆ)

ಅಥವಾ $(AD) \times (AC) = AB^2$ ....(1)

ಅಲ್ಲದೆ $\Delta BDC \sim \Delta ABC$ (($\because$ ಪ್ರಮೇಯ 2.7)

ಆದ್ದರಿಂದ $\frac{CD}{BC} = \frac{BC}{AC}$

ಅಥವಾ $(CD) \times (AC) = BC^2$ .... (2)

(1) ಮತ್ತು (2) ನ್ನು ಕೂಡಿಸುವುದರಿಂದ

$(AD) \times (AC) + (CD) \times (AC) = AB^2 + BC^2$

ಅಥವಾ $AC\,(AD+CD) = AB^2 + BC^2$

ಅಥವಾ $AC \times AC = AB^2 + BC^2$

$\Rightarrow AC^2 = AB^2 + BC^2$


29) 12 ಸೆಂ.ಮೀ. ಪಾದ ತ್ರಿಜ್ಯ ಹಾಗೂ 20 ಸೆಂ.ಮೀ. ಎತ್ತರವಿರುವ ಶಂಕುವನ್ನು ಮೇಲ್ಭಾಗದಿಂದ ಪಾದ ತ್ರಿಜ್ಯ 3 ಸೆಂ.ಮೀ. ಇರುವಂತೆ ಒಂದು ಸಣ್ಣ ಶಂಕುವನ್ನು ಕತ್ತರಿಸಲಾಗಿದೆ. ಹೀಗೆ ಕತ್ತರಿಸಿದಾಗ ಶೃಂಗ ಬಿಂದು ಎಷ್ಟು ಕೆಳಗಡೆ ಇಳಿಯಬಹುದು? ಈ ರೀತಿ ಮಾಡಿದ ಭಿನ್ನಕದ ಘನಫಲವನ್ನು ಕಂಡುಹಿಡಿಯಿರಿ.

ಪರಿಹಾರ:–

$$r_1 = 12\text{ cm}, \quad h_1 = 20\text{ cm}, \quad r_2 = 3\text{ cm}, \quad h_2 = ?$$

$$\frac{r_1}{r_2} = \frac{h_1}{h_2} \quad \therefore \frac{12}{3} = \frac{20}{h_2}$$

$$\therefore h_2 = \frac{3 \times 20}{12} = 5\text{ cm}$$



ಭಿನ್ನಕದ ಘನಫಲ

$$= \frac{1}{3}\pi h(r_1^2 + r_2^2 + r_1 r_2)$$

$$= \frac{1}{3} \times \frac{22}{7} \times 15(12^2 + 3^2 + 12 \times 3)$$

$$= \frac{110}{7} \times (144 + 9 + 36)$$

$$= \frac{110}{7} \times 189 = 2,970$$

∴ ಭಿನ್ನಕದ ಘನಫಲ = 2,970 cu.cm.

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪಿಯುಸಿ ಭೌತವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮಾದರಿ ಪ್ರಶ್ನೋತ್ತರ

ಗಣಿತ

ಪಿಯುಸಿ

41) x - ಅಕ್ಷವನ್ನು ಮೂಲ ಬಿಂದುವಿನಲ್ಲಿ ಸ್ಪರ್ಶ ಮಾಡುವ ವೃತ್ತಗಳ ಸಮೂಹದ ಅವಕಲನ ಸಮೀಕರಣವನ್ನು ಕಂಡುಹಿಡಿಯಿರಿ

ಪರಿಹಾರ: (.......ಹಿಂದಿನ ಸಂಚಿಕೆಯಿಂದ)

$$x^2 + y^2 = 2y\frac{\left[x + y\frac{dy}{dx}\right]}{\frac{dy}{dx}}$$

ಅಥವಾ $$\frac{dy}{dx}(x^2 + y^2) = 2xy + 2y^2\frac{dy}{dx}$$

ಅಥವಾ $$\frac{dy}{dx} = \frac{2xy}{x^2 - y^2}$$ ದೊರೆಯುತ್ತದೆ.

ಈ ಸಮೀಕರಣವು ವೃತ್ತಗಳ ಸಮೂಹದ ಅವಕಲನ ಸಮೀಕರಣವಾಗಿದೆ

42) $$\int \frac{x^2}{(x^2+1)(x^2+4)}dx$$ ಕಂಡುಹಿಡಿಯಿರಿ.

ಪರಿಹಾರ:

$\frac{x^2}{(x^2+1)(x^2+4)}$ ತೆಗೆದುಕೊಳ್ಳಿ x^2ಗೆ y ಎಂದು ಆದೇಶಿಸಿದಾಗ

$$\frac{x^2}{(x^2+1)(x^2+4)} = \frac{y}{(y+1)(y+4)}$$ ಎಂದು ಬರೆಯುತ್ತೇವೆ.

$$\frac{y}{(y+1)(y+4)} = \frac{A}{y+1} + \frac{B}{y+4}$$

ಹೀಗಾಗಿ $y = A(y+4) + B(y+1)$ ಆಗುತ್ತದೆ.

y ನ ಸಹಗುಣಕ ಮತ್ತು ಸ್ಥಿರಪದಗಳನ್ನು ಎರಡೂ ಬದಿಯಲ್ಲಿ ಹೋಲಿಸಿದಾಗ $A + B = 1$ ಮತ್ತು $4A + B = 0$ ಸಿಗುತ್ತದೆ.

$A + B = 1$ ಮತ್ತು $4A + B = 0$ ಪರಿಹರಿಸಿದಾಗ $A = \frac{-1}{3}$ and $B = \frac{4}{3}$ ಸಿಗುತ್ತದೆ.

ಹೀಗಾಗಿ $$\frac{x^2}{(x^2+1)(x^2+4)} = -\frac{1}{3(x^2+1)} + \frac{4}{3(x^2+4)}$$

ಆದ್ದರಿಂದ $$\int \frac{x^2 dx}{(x^2+1)(x^2+4)} = -\frac{1}{3}\int \frac{dx}{x^2+1} + \frac{4}{3}\int \frac{dx}{x^2+4}$$

$$= \frac{-1}{3}\tan^{-1}x + \frac{4}{3} \times \frac{1}{2}\tan^{-1}\frac{x}{2} + C$$

$$= \frac{-1}{3}\tan^{-1}x + \frac{2}{3}\tan^{-1}\frac{x}{2} + C$$

43)

$$X + Y = \begin{bmatrix} 5 & 2 \\ 0 & 9 \end{bmatrix} \text{ ಮತ್ತು } X - Y = \begin{bmatrix} 3 & 6 \\ 0 & -1 \end{bmatrix}$$

ಆದರೆ, X ಮತ್ತು Y ಗಳನ್ನು ಕಂಡುಹಿಡಿಯಿರಿ.

ಪರಿಹಾರ: ಈಗ $$(X+Y)+(X-Y) = \begin{bmatrix} 5 & 2 \\ 0 & 9 \end{bmatrix} + \begin{bmatrix} 3 & 6 \\ 0 & -1 \end{bmatrix}$$

ಅಥವಾ $$(X+X)+(Y-Y) = \begin{bmatrix} 8 & 8 \\ 0 & 8 \end{bmatrix} \Rightarrow 2X = \begin{bmatrix} 8 & 8 \\ 0 & 8 \end{bmatrix}$$

ಅಥವಾ $$X = \frac{1}{2}\begin{bmatrix} 8 & 8 \\ 0 & 8 \end{bmatrix} = \begin{bmatrix} 4 & 4 \\ 0 & 4 \end{bmatrix}$$

ಹಾಗೂ $$(X+Y)-(X-Y) = \begin{bmatrix} 5 & 2 \\ 0 & 9 \end{bmatrix} - \begin{bmatrix} 3 & 6 \\ 0 & -1 \end{bmatrix}$$

ಅಥವಾ $$(X-X)+(Y+Y) = \begin{bmatrix} 5-3 & 2-6 \\ 0 & 9+1 \end{bmatrix} \Rightarrow 2Y = \begin{bmatrix} 2 & -4 \\ 0 & 10 \end{bmatrix}$$

$$\therefore \quad Y = \frac{1}{2}\begin{bmatrix} 2 & -4 \\ 0 & 10 \end{bmatrix} = \begin{bmatrix} 1 & -2 \\ 0 & 5 \end{bmatrix}$$

44) $\int_0^2 e^x dx$ನ್ನು ಮೊತ್ತದ ಮಿತಿಯನ್ನಾಗಿ ಕಂಡುಹಿಡಿಯಿರಿ.

ಪರಿಹಾರ: ವ್ಯಾಖ್ಯೆಯಂತೆ

$$\int_0^2 e^x dx = (2-0)\lim_{n\to\infty}\frac{1}{n}\left[e^0 + e^{\frac{2}{n}} + e^{\frac{4}{n}} \ldots\ldots + e^{\frac{2n-2}{n}}\right]$$

$a = 1,\ r = e^{\frac{2}{n}}$ = ಆಗಿರುವ ಗುಣೋತ್ತರ ಶ್ರೇಢಿಯು n ಪದಗಳ ಮೊತ್ತ ಉಪಯೋಗಿಸಿ.

$$\int_0^2 e^x dx = 2\lim_{n\to\infty}\frac{1}{n}\left[\frac{e^{\frac{2n}{n}} - 1}{e^{\frac{2}{n}} - 1}\right] = 2\lim_{n\to\infty}\frac{1}{n}\left[\frac{e^2 - 1}{e^{\frac{2}{n}} - 1}\right]$$

$$= \frac{2(e^2-1)}{\lim_{n\to\infty}\left[\frac{e^{\frac{2}{n}}-1}{\frac{2}{n}}\right]2} = e^2 - 1 \qquad \left(\lim_{h\to 0}\frac{(e^h-1)}{h} = 1 \text{ ಉಪಯೋಗಿಸಿ}\right).$$

6.2.23

‘ಗುತ್ತಿಗೆದಾರರ ಅನುಕೂಲಕ್ಕೆ ಒವಿಡಿಎಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡಲು ‘ಆಪ್ಶನಲ್ ವೆಂಡರ್ ಬಿಲ್ ಡಿಸ್ಕೌಂಟಿಂಗ್ ವ್ಯವಸ್ಥೆ’ (ಒವಿಡಿಎಸ್) ಅಳವಡಿಸಿ, ಕಾಮಗಾರಿಗಳ ಬಾಕಿ ಬಿಲ್ ಪಾವತಿಸಲಾಗುವುದು. ಈ ವ್ಯವಸ್ಥೆಯಲ್ಲೂ ಬಿಲ್‌ಗಳ ಜ್ಯೇಷ್ಠತೆ ಆಧಾರದಲ್ಲಿಯೇ ಹಣ ಪಾವತಿಸಲಾಗುವುದು. ಸುಳ್ಳು ಬಿಲ್ ಸಲ್ಲಿಸಿ ಹಣ ಪಡೆಯಲು ಅವಕಾಶ ಇಲ್ಲ’ ಎಂದು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯ್‌ಪುರ ತಿಳಿಸಿದ್ದಾರೆ.

ಒವಿಡಿಎಸ್ ಅಳವಡಿಸುವುದಕ್ಕೆ ಗುತ್ತಿಗೆದಾರರು ವ್ಯಕ್ತಪಡಿಸಿರುವ ಆಕ್ಷೇಪಗಳಿಗೆ ಪ್ರತಿಕ್ರಿಯಿಸಿರುವ ಅವರು, ‘2020 ಡಿಸೆಂಬರ್‌ವರೆಗಿನ ಬಿಲ್‌ಗಳನ್ನು ಈಗಾಗಲೇ ಪಾವತಿಸಲಾಗಿದೆ. ನಂತರ 2 ವರ್ಷಗಳ ಬಾಕಿ ಬಿಲ್ ಸುಮಾರು ₹ 2,700 ಕೋಟಿ ಪಾವತಿಸಿ ಗುತ್ತಿಗೆದಾರರ ಸಂಕಷ್ಟ ಪರಿಹರಿಸಲು ಈ ವ್ಯವಸ್ಥೆ ಅಳವಡಿಸಲಾಗುತ್ತಿದೆ’ ಎಂದರು.

‘ಕೆಲವು ಗುತ್ತಿಗೆದಾರರು ಶೇ 24, ಇನ್ನೂ ಕೆಲವರು ಶೇ 36ರಷ್ಟು ಬಡ್ಡಿ ದರದಲ್ಲಿ ಸಾಲ ಪಡೆದು ಕಾಮಗಾರಿಗಳನ್ನು ನಿರ್ವಹಿಸಿದ್ದಾರೆ. ಅಂಥವರಿಗೆ ಬ್ಯಾಂಕಿನಿಂದ ಸಾಲ ಪಡೆದು ನೆರವಾಗಬೇಕೆಂಬ ಕಾರಣಕ್ಕೆ ಈ ವ್ಯವಸ್ಥೆ. ಅಗತ್ಯ ಇರುವ ಗುತ್ತಿಗೆದಾರರು ಸ್ವಇಚ್ಛೆಯಿಂದ ಆಯ್ಕೆ ಮಾಡಿಕೊಳ್ಳಬಹುದು. ಆರ್‌ಬಿಐ ಮಾರ್ಗಸೂಚಿ ಪ್ರಕಾರ 6 ತಿಂಗಳ ಅವಧಿಗೆ ಮಾತ್ರ ಬಿಲ್ ಡಿಸ್ಕೌಂಟಿಂಗ್ ಮಾಡಬಹುದು. ಮರುಪಾವತಿ ಅವಧಿಯ ಬಡ್ಡಿಯನ್ನು ಗುತ್ತಿಗೆದಾರರು ಕೊಡಬೇಕಿದೆ’ ಎಂದು ಸಮರ್ಥಿಸಿದರು.


‘ಗುತ್ತಿಗೆದಾರರು ಆರೋಪಿಸಿದಂತೆ, ಇದು ಅವ್ಯವಹಾರವಲ್ಲ, ಗುತ್ತಿಗೆದಾರರ ಅನುಕೂಲಕ್ಕಾಗಿ ಈ ವ್ಯವಸ್ಥೆ ಅಳವಡಿಸಲು ನಾನೇ ಆಸಕ್ತಿ ವಹಿಸಿದ್ದೆ. ಬಿಲ್ ಡಿಸ್ಕೌಂಟಿಂಗ್ ಅವಧಿಯಲ್ಲಿ ಬಿಜೆಪಿ ಸರ್ಕಾರವಿತ್ತು ಎನ್ನುವುದು ಕಾಕತಾಳೀಯ. ಬೇನಾಮಿ ಹೆಸರಿನಲ್ಲಿ ನಡೆಯುವ ಕಾಮಗಾರಿಗಳಿಗೂ ನಮಗೂ ಸಂಬಂಧ ಇಲ್ಲ. ಟೆಂಡರ್‌ನಲ್ಲಿ ತಾಂತ್ರಿಕವಾಗಿ ಅರ್ಹರಾದ ಯಾರು ಬೇಕಾದರೂ ಗುತ್ತಿಗೆ ವಹಿಸಿಕೊಳ್ಳಬಹುದು. ಸುಳ್ಳು ಬಿಲ್ ಎನ್ನುವುದು ಮೇಲ್ನೋಟಕ್ಕೆ ಗೊತ್ತಾದರೆ ತಾಂತ್ರಿಕ ಮತ್ತು ಜಾಗೃತ ಕೋಶದ ಎಂಜಿನಿಯರ್ ಮೂಲಕ ಪರಿಶೀಲನೆ ನಡೆಸಲಾಗುವುದು’ ಎಂದರು.

ದ್ವೇಷ ಅಪರಾಧ: ಎಫ್‌ಐಆರ್ ವಿಳಂಬಕ್ಕೆ ಸುಪ್ರೀಂ ತರಾಟೆ

ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ನಾಯಕರು ಮತ್ತು ಅವರಿಗೆ ಸಂಬಂಧಿಸಿದ ವಹಿವಾಟುಗಳ ಕುರಿತು ಡಿಆರ್‌ಐ, ಜಾರಿ ನಿರ್ದೇಶನಾಲಯ ಮತ್ತು ಸಿಬಿಐನಂತಹ ಸಂಸ್ಥೆಗಳು ಅತ್ಯಂತ ಕ್ರಿಯಾಶೀಲವಾಗಿವೆ. ಆದರೆ, ಇಷ್ಟೊಂದು ಗಂಭೀರವಾದ ಆರೋಪಗಳು ಇದ್ದರೂ ಅದಾನಿ ಸಮೂಹದ ಕುರಿತಂತೆ ಈ ಸಂಸ್ಥೆಗಳು ಸುಮ್ಮನಿರುವುದು ಏಕೆ? ಸಾವಿರಾರು ಷೆಲ್ ಕಂಪನಿಗಳನ್ನು ಸರ್ಕಾರವು ಮುಚ್ಚಿಸಿದೆ. ಆದರೆ, ಅದಾನಿ ಸಮೂಹದ ಜೊತೆಗೆ ನಂಟು ಹೊಂದಿರುವ ಷೆಲ್ ಕಂಪನಿಗಳನ್ನು ಸುಮ್ಮನೆ ಬಿಟ್ಟಿರುವುದು ಏಕೆ? ಅದಾನಿ ಸಮೂಹ ಅಥವಾ ಅದಕ್ಕೆ ಸಂಬಂಧಿಸಿದ ಸಂಸ್ಥೆಗಳು ಮತ್ತು ವ್ಯಕ್ತಿಗಳಿಂದ ಚುನಾವಣಾ ಬಾಂಡ್ ಮೂಲಕ ಎಷ್ಟು ದೇಣಿಗೆ ಬಂದಿದೆ ಎಂಬುದನ್ನು ಬಿಜೆಪಿ ಬಹಿರಂಗಪಡಿಸುತ್ತದೆಯೇ? ಅದಾನಿ ಪ್ರಕರಣದ ಕುರಿತು ಹೇಳಿಕೆ ಕೊಡಲೇಬೇಕಾದ ಸಂದರ್ಭ ಬಂದಾಗ ಸರ್ಕಾರದ ಪ್ರತಿನಿಧಿಗಳು ಸಂಕ್ಷಿಪ್ತವಾದ ಹೇಳಿಕೆಯನ್ನಷ್ಟೇ ಕೊಡುತ್ತಿರುವುದು ಏಕೆ? ಅಲ್ಲಗಳೆಯುವ ರೀತಿಯಲ್ಲಿ ಅಥವಾ ಸಂವೇದನಾರಹಿತವಾಗಿ ಮಾತನಾಡುತ್ತಿರುವುದು ಏಕೆ? ಸಂಸತ್ತಿನಲ್ಲಿ ಚರ್ಚೆ ಮಾಡುವುದಕ್ಕೆ ಸರ್ಕಾರ ಸಿದ್ಧವಿಲ್ಲದಿರುವುದು ಏಕೆ? ಸ್ವತಂತ್ರವಾದ ತನಿಖೆಗೆ ಆದೇಶ ಮಾಡಿಲ್ಲದಿರುವುದು ಏಕೆ? ಅದಾನಿ ಸಮೂಹವನ್ನು ಮಾಧ್ಯಮದ ಒಂದು ವರ್ಗವು ರಕ್ಷಣೆ ಮಾಡಲು ಯತ್ನಿಸುತ್ತಿರುವುದು ಹಾಗೂ ಸಮೂಹದ ಮೇಲಿರುವ ಆರೋಪಗಳ ಬಗ್ಗೆ ತನಿಖೆ ಆಗಬೇಕು ಎಂದು ಆಗ್ರಹಿಸುತ್ತಿರುವವರ ವಿರುದ್ಧ ಮಾಡುತ್ತಿರುವ ಟೀಕೆಗಳ ಹಿಂದೆ ಮತ್ತು ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯನ್ನು ನಿಂದಿಸುತ್ತಿರುವುದರ ಹಿಂದೆ ವ್ಯವಸ್ಥಿತ ಷಡ್ಯಂತ್ರ ಇದೆಯೇ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ದೇಶದ ವಹಿವಾಟು ವಾತಾವರಣ, ಬಂಡವಾಳ ಮಾರುಕಟ್ಟೆಗಳ ವಿಶ್ವಾಸಾರ್ಹತೆ, ನಿಯಂತ್ರಣ ಮತ್ತು ಆಡಳಿತ ವ್ಯವಸ್ಥೆಗಳ ಆರೋಗ್ಯದ ದೃಷ್ಟಿಯಿಂದ ಮುಖ್ಯವಲ್ಲವೇ? ಅದೂ ಅಲ್ಲದೆ ವ್ಯಾಪಾರ ವ್ಯವಸ್ಥೆಯ ಒಟ್ಟು ವರ್ಚಸ್ಸಿನ ದೃಷ್ಟಿಯಿಂದಲೂ ಇದು ಮಹತ್ವದ್ದಲ್ಲವೇ?

ರಷ್ಯಾ– ಉಕ್ರೇನ್ ಸಂಘರ್ಷ ಬರುವ ದಿನಗಳಲ್ಲಿ ತೀವ್ರತೆ ಪಡೆದುಕೊಳ್ಳಲಿದೆಯೇ?

ವರ್ಷ ಕಳೆದರೂ ಮುಗಿಯದ ಕದನ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಉಕ್ರೇನ್ ಮತ್ತು ರಷ್ಯಾ ನಡುವಿನ ಕದನಕ್ಕೆ ಇನ್ನೇನು ವರ್ಷ ತುಂಬುತ್ತದೆ. 2022ರ ಫೆಬ್ರುವರಿ 24ರಂದು ಉಕ್ರೇನಿನ ಮೇಲೆ ರಷ್ಯಾ ದಾಳಿ ಆರಂಭಿಸಿದಾಗ, ರಷ್ಯಾದ ಸೇನಾ ಸಾಮರ್ಥ್ಯದ ಎದುರು ಉಕ್ರೇನ್ ಹೆಚ್ಚು ಕಾಲ ಎದೆಸೆಟೆಸಿ ನಿಲ್ಲಲಾರದು ಎಂಬ ಅಭಿಪ್ರಾಯವಿತ್ತು. ರಷ್ಯಾ ಕೂಡ ಅದೇ ಲೆಕ್ಕಾಚಾರದೊಂದಿಗೆ ಉಕ್ರೇನ್ ಮೇಲೆರಗಿತ್ತು. ಆದರೆ ಉಕ್ರೇನ್ ಮಂಡಿಯೂರಲಿಲ್ಲ. ಪೂರ್ಣ ಸಾಮರ್ಥ್ಯ ಬಳಸಿ ಪ್ರತಿರೋಧ ಒಡ್ಡತೊಡಗಿತು. ಉಕ್ರೇನ್ ಬೆಂಬಲಕ್ಕೆ ಹಿಂಬದಿಯಿಂದ ಅಮೆರಿಕ ನಿಂತಿತು. ಇತರ ನ್ಯಾಟೊ ರಾಷ್ಟ್ರಗಳು ಕದನ ತಮ್ಮ ಬಾಗಿಲಿನವರೆಗೂ ಬಾರದಿದ್ದರೆ ಸಾಕು ಎಂದು ಉಕ್ರೇನ್ ಬತ್ತಳಿಕೆ ಬರಿದಾಗದಂತೆ ನೋಡಿಕೊಂಡವು.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ರಷ್ಯಾ ವಿರುದ್ಧ ಕೆಲವು ಬಾರಿ ಖಂಡನಾ ನಿರ್ಣಯ ಮಂಡಿಸಲಾಯಿತೇ ವಿನಾ ಹೆಚ್ಚೇನೂ ಮಾಡಲು ಸಾಧ್ಯವಾಗಲಿಲ್ಲ!

ಉಕ್ರೇನ್ ತನ್ನ ನಾಗರಿಕರ ಕೈಗೆ ಶಸ್ತ್ರ ಕೊಟ್ಟಿತು, ಯುರೋಪಿನ ವಿವಿಧ ದೇಶಗಳ ನಿವೃತ್ತ ಯೋಧರು ಉಕ್ರೇನ್ ಪರ ಕಾದಾಡಲು ಹೊರಟಿದ್ದಾರೆ ಎಂಬ ಸುದ್ದಿ ಬಂತು. ಎದೆಗುಂದಿದ ರಷ್ಯಾವು ಸಿರಿಯಾದಿಂದ ಉಗ್ರರನ್ನು, ಬಾಡಿಗೆ ಸೈನಿಕರನ್ನು ಕರೆತಂದು ಕದನಕ್ಕೆ ಇಳಿಸಿದೆ ಎಂಬ ಆರೋಪ ಉಕ್ರೇನ್ ಕಡೆಯಿಂದ ಬಂತು. ಉಭಯ ಸೇನೆಯ ಒಂದಿಷ್ಟು ಸೈನಿಕರು ಪ್ರಾಣ ತೆತ್ತರು. ರಷ್ಯಾದ ಇಂತಿಷ್ಟು ಸೈನಿಕರು ಮತ್ತು ಸೇನಾ ಅಧಿಕಾರಿಗಳು ಸಾವನ್ನಪ್ಪಿದ್ದಾರೆ ಎಂದು ಉಕ್ರೇನ್ ಕೊಟ್ಟ ಲೆಕ್ಕವನ್ನು ರಷ್ಯಾ ಒಪ್ಪಲಿಲ್ಲ. ರಷ್ಯಾದ ಅಂಕಿಸಂಖ್ಯೆಗಳನ್ನು ಉಕ್ರೇನ್ ತಳ್ಳಿಹಾಕಿತು. ಯುದ್ಧಕ್ಕೆ ಕೊನೆಹಾಡಲು ಒಂದು ಹಂತದಲ್ಲಿ ಮಾತುಕತೆಯ ಮೇಜು ಸಿದ್ಧವಾಗಿತ್ತಾದರೂ ಆ ಪ್ರಯತ್ನಕ್ಕೆ ಯಶಸ್ಸು ಸಿಗಲಿಲ್ಲ. ತಂತ್ರಗಾರಿಕೆಯ ಭಾಗವಾಗಿ ರಷ್ಯಾ ಮತ್ತು ಅಮೆರಿಕ ಉರುಳಿಸಿದ ದಾಳ ಫಲಿತಾಂಶ ನೀಡಲಿಲ್ಲ.

ಮೊದಲಿಗೆ ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳು ರಷ್ಯಾವನ್ನು ಆರ್ಥಿಕ ದಿಗ್ಬಂಧನದ ಮೂಲಕ ಕಟ್ಟಿಹಾಕಲು ಯತ್ನಿಸಿದವು. ರಷ್ಯಾದ ಕಚ್ಚಾವಸ್ತುಗಳನ್ನು ಬಹಿಷ್ಕರಿಸಲಾಯಿತು. ರಷ್ಯಾದೊಂದಿಗಿನ ವಾಣಿಜ್ಯಿಕ ವ್ಯವಹಾರಗಳಿಗೆ ತಡೆಬಿತ್ತು. ಅಂತರರಾಷ್ಟ್ರೀಯ ಪಾವತಿ ವ್ಯವಸ್ಥೆಯಿಂದ (ಸ್ವಿಫ್ಟ್) ರಷ್ಯಾವನ್ನು ಹೊರಗಿಡಲಾಯಿತು. ಈ ಕ್ರಮಗಳಿಂದಾಗಿ ರಷ್ಯಾದ ಜಿಡಿಪಿ ಕುಸಿಯುತ್ತದೆ, ವಿದೇಶಿ ವಿನಿಮಯ ಸಂಗ್ರಹ ಕರಗುತ್ತದೆ, ಆರ್ಥಿಕ ಸಂಕಷ್ಟಕ್ಕೆ ರಷ್ಯಾ ಒಳಗಾಗಲಿದೆ ಮತ್ತು ಉಕ್ರೇನ್ ಆಕ್ರಮಣದಿಂದ ಅದು ಹಿಂದೆ ಸರಿಯಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ ಹಾಗಾಗಲಿಲ್ಲ. ಕೆನಡಾ, ಆಸ್ಟ್ರೇಲಿಯಾ ಮತ್ತು ಅಮೆರಿಕವು ರಷ್ಯಾದಿಂದ ತೈಲವನ್ನು ಆಮದು ಮಾಡಿಕೊಳ್ಳುವುದಿಲ್ಲ ಎಂಬ ನಿಲುವು ತಳೆದವು ನಿಜ, ಆದರೆ ಜರ್ಮನಿ, ಫ್ರಾನ್ಸ್ ಮತ್ತು ಇತರ ಐರೋಪ್ಯ ದೇಶಗಳಿಗೆ ಬದಲಿ ವ್ಯವಸ್ಥೆ ಕಾಣದಾಯಿತು. ಅವು ಹಂತಹಂತವಾಗಿ ರಷ್ಯಾ ಮೇಲಿನ ತೈಲ ಮತ್ತು ಅನಿಲ ಅವಲಂಬನೆ ಕಡಿದುಕೊಳ್ಳುವುದಾಗಿ ಪ್ರಕಟಿಸಿದವು. ಹಾಗಾಗಿ ಒಮ್ಮೆಲೇ ರಷ್ಯಾಕ್ಕೆ ಆರ್ಥಿಕ ಹೊಡೆತ ಬೀಳಲಿಲ್ಲ.

ರಷ್ಯಾ ಬದಲಿ ಗ್ರಾಹಕರನ್ನು ಮತ್ತು ಪಾವತಿ ವ್ಯವಸ್ಥೆಯನ್ನು ಕಂಡುಕೊಂಡಿತು. ಭಾರತ, ಚೀನಾ ಮತ್ತು ಟರ್ಕಿಗೆ ಹೆಚ್ಚಿನ ತೈಲವನ್ನು ಕಡಿಮೆ ಬೆಲೆಗೆ ಪೂರೈಸಿತು ಮತ್ತು ಆಯಾ ದೇಶಗಳ ಕರೆನ್ಸಿಯಲ್ಲಿಯೇ ಹಣ ಪಡೆಯಿತು. ಮುಖ್ಯವಾಗಿ ರಷ್ಯಾ ಅಗತ್ಯ ವಸ್ತುಗಳ ವಿಷಯದಲ್ಲಿ ಒಂದಿಷ್ಟು ಸ್ವಾವಲಂಬನೆ ಸಾಧಿಸಿತ್ತು ಮತ್ತು ಒಂದು ದಿಕ್ಕಿನ ದ್ವಾರ ಮುಚ್ಚಿದಾಗ ಚೀನಾ, ಬೆಲಾರಸ್ ಮತ್ತು ಟರ್ಕಿಯಿಂದ ತನಗೆ ಬೇಕಿದ್ದ ಉತ್ಪನ್ನಗಳನ್ನು ಆಮದು ಮಾಡಿಕೊಂಡಿತು. ಹಾಗಾಗಿ ದಿಗ್ಬಂಧನದ ಬಿಸಿ ಜನಜೀವನವನ್ನು ಹೆಚ್ಚು ಬಾಧಿಸಲಿಲ್ಲ. ಮೋಟಾರು ವಾಹನ ತಯಾರಿಕೆ, ವಿಮಾನಯಾನ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳು ಹಿನ್ನಡೆ ಅನುಭವಿಸಿದವು. ಕಡಿಮೆ ಬೆಲೆಗೆ ತೈಲವನ್ನು ರಫ್ತು ಮಾಡಿದ್ದರಿಂದ ಕೊಂಚ ಆದಾಯ ನಷ್ಟವಾಯಿತು. ಆದರೆ ಇಡಿಯಾಗಿ ಆರ್ಥಿಕತೆ ಕುಸಿಯಲಿಲ್ಲ. ದಿಗ್ಬಂಧನ ಎಂಬ ಮೊಂಡು ಅಸ್ತ್ರ ರಷ್ಯಾವನ್ನು ಬಾಗುವಂತೆ ಮಾಡಲಿಲ್ಲ.

ಇತ್ತ ರಷ್ಯಾ ತನ್ನ ಮೇಲಿನ ತೈಲಾವಲಂಬನೆಯನ್ನು ಬಳಸಿಕೊಂಡು ಯುರೋಪಿನ ಪ್ರಮುಖ ರಾಷ್ಟ್ರಗಳ ಮೇಲೆ ಒತ್ತಡ ಹೇರಲು ನೋಡಿತು. ತೈಲ ಮತ್ತು ಅನಿಲ ಪೂರೈಕೆ ನಿಲ್ಲಿಸುವ ಬೆದರಿಕೆ ಒಡ್ಡಿತು. ಆದರೆ ಅಮೆರಿಕ ಮತ್ತು ಕತಾರ್ ದ್ರವೀಕೃತ ಸ್ವಾಭಾವಿಕ ಅನಿಲ ಪೂರೈಕೆಯನ್ನು ಐರೋಪ್ಯ ರಾಷ್ಟ್ರಗಳಿಗೆ ಹೆಚ್ಚಿಸಿದವು. ನೈಜೀರಿಯಾ, ಅಲ್ಜೀರಿಯಾ ಮತ್ತು ನಾರ್ವೆ ಕೂಡ ಹೆಗಲು ಕೊಟ್ಟವು. ರಷ್ಯಾದ ಬೆದರಿಕೆಯ ತಂತ್ರ ಕೆಲಸ ಮಾಡಲಿಲ್ಲ. ನಂತರ ಪುಟಿನ್, ಚಳಿಗಾಲವನ್ನು ಉಕ್ರೇನ್ ವಿರುದ್ಧ ಅಸ್ತ್ರವಾಗಿ ಬಳಸಲು ನೋಡಿದರು. ವಿದ್ಯುತ್ ಸ್ಥಾವರಗಳನ್ನು ಗುರಿಯಾಗಿಸಿಕೊಂಡು ರಷ್ಯಾ ದಾಳಿ ನಡೆಸಿತು. ಉಕ್ರೇನಿನ ಹಲವು ನಗರಗಳಲ್ಲಿ ಕತ್ತಲು ಆವರಿಸಿತು. ಉಕ್ರೇನ್ ಅಧೀರಗೊಳ್ಳಲಿಲ್ಲ.

ವೈದ್ಯಕೀಯ ಮತ್ತು ಇತರ ಅಗತ್ಯ ಸೇವೆಗಳಿಗೆ ವಿದ್ಯುತ್ ಅಭಾವ ಕಾಡದಂತೆ ನೋಡಿಕೊಳ್ಳಲು ಅಮೆರಿಕ ಮತ್ತು ಐರೋಪ್ಯ ಒಕ್ಕೂಟ ಹೆಚ್ಚಿನ ಸಾಮರ್ಥ್ಯದ ಜನರೇಟರ್‌ಗಳನ್ನು ಉಕ್ರೇನಿಗೆ ರವಾನಿಸಿದವು. ಜನ ಮೇಣದ ಬತ್ತಿಗಳನ್ನು, ಕಟ್ಟಿಗೆಗಳನ್ನು ಉರುವಲಾಗಿ ತಮ್ಮ ಅಗತ್ಯಗಳಿಗೆ ಬಳಸಿಕೊಂಡರು. ಥರ್ಮಲ್ ಬಟ್ಟೆಗಳು ಜನರನ್ನು ಬೆಚ್ಚಗಿಡಲು ನೆರವಾದವು. ಹೀಗೆ ಉಭಯ ದೇಶಗಳು ಪರಸ್ಪರ ಬಗ್ಗುಬಡಿಯಲು ರೂಪಿಸಿದ ತಂತ್ರಗಳು ಯಶ ಕಾಣಲಿಲ್ಲ. ಹಾಗಾಗಿ ಯುದ್ಧ ದೀರ್ಘ ಅವಧಿಗೆ ಮುಂದುವರಿಯಿತು.



ಉಕ್ರೇನ್– ರಷ್ಯಾ ನಡುವಿನ ಈ ಕದನ ಒಂದಿಷ್ಟು ಪ್ರಶ್ನೆಗಳನ್ನು ಮುಂದೆಮಾಡಿತು ಮತ್ತು ಜಗತ್ತು ಬದಲಾಗಿದೆ ಎಂಬುದನ್ನು ತೋರಿಸಿತು. ಅಮೆರಿಕ ಮತ್ತು ಅದರ ಐರೋಪ್ಯ ಮಿತ್ರ ರಾಷ್ಟ್ರಗಳು ಯುರೋಪ್ ಸಮಸ್ಯೆಯನ್ನು ಜಾಗತಿಕ ಸಮಸ್ಯೆ ಎಂದು ಇದುವರೆಗೆ ಬಿಂಬಿಸುತ್ತಾ ಬಂದಿದ್ದವು. ಆದರೆ ಬದಲಾದ ಕಾಲಘಟ್ಟದಲ್ಲಿ ಅದನ್ನು ಒಪ್ಪಿಕೊಳ್ಳಲು ಇತರ ದೇಶಗಳು ಸಿದ್ಧವಿಲ್ಲ ಎಂಬುದು ಉಕ್ರೇನ್ ಯುದ್ಧದ ವಿಷಯದಲ್ಲಿ ಜಾಹೀರಾಯಿತು.

ಜಗತ್ತಿನ ಯಾವುದೇ ಭಾಗದಲ್ಲಿ ಬಿಕ್ಕಟ್ಟು ಉಂಟಾದಾಗ ಸೂಪರ್ ಪವರ್ ಅಥವಾ ಶಕ್ತ ರಾಷ್ಟ್ರದ ಆಣತಿಯಂತೆ ನಡೆದುಕೊಳ್ಳಬೇಕಿಲ್ಲ ಎನ್ನುವ ಸಂದೇಶ ಹೊರಹೊಮ್ಮಿತು. ರಷ್ಯಾ ಮತ್ತು ಪಶ್ಚಿಮ ರಾಷ್ಟ್ರಗಳ ನಡುವಿನ ಕಾದಾಟದಲ್ಲಿ ಯಾವುದೇ ಗುಂಪಿನೊಂದಿಗೆ ಗುರುತಿಸಿಕೊಳ್ಳಬೇಕಿಲ್ಲ ಎಂಬುದನ್ನು ಉಕ್ರೇನ್ ಯುದ್ಧಕ್ಕೆ ಪ್ರತಿಕ್ರಿಯಿಸಿದ ರೀತಿಯಲ್ಲಿ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕ ಭಾಗದ ರಾಷ್ಟ್ರಗಳು ತೋರಿಸಿದವು. ಹೆಚ್ಚಿನ ದೇಶಗಳು ಉಕ್ರೇನ್ ಪರ ಅನುಕಂಪ ಮತ್ತು ರಷ್ಯಾದ ಅಮಾನವೀಯ ಕೃತ್ಯಗಳಿಗೆ ಖಂಡನೆ ವ್ಯಕ್ತಪಡಿಸಿದವು, ಆದರೆ ನೇರವಾಗಿ ಉಕ್ರೇನನ್ನು ಬೆಂಬಲಿಸುವ ನಿಲುವು ಪ್ರಕಟಿಸಲಿಲ್ಲ.

ಒಟ್ಟಾರೆಯಾಗಿ ನೋಡುವುದಾದರೆ, ವರ್ಷದ ಅವಧಿಯ ಈ ಸಂಘರ್ಷದಲ್ಲಿ ರಷ್ಯಾದ ಸೇನೆಗೆ ಹಿನ್ನಡೆಯಾಗಿದೆ. ಉಕ್ರೇನ್ ಬಡಕಲಾಗಿದೆ. ಅಮೆರಿಕದ ಶಸ್ತ್ರಾಸ್ತ್ರ ಮತ್ತು ಆರ್ಥಿಕ ನೆರವು ನಿಂತ ದಿನ ಉಕ್ರೇನ್ ಕದನ ಕಣದಲ್ಲಿ ಕುಸಿಯುತ್ತದೆ. ಸದ್ಯದ ಮಟ್ಟಿಗಂತೂ ಅಮೆರಿಕ ಮತ್ತು ಮಿತ್ರರಾಷ್ಟ್ರಗಳು ಉಕ್ರೇನಿನ ಬತ್ತಳಿಕೆ ತುಂಬುತ್ತಲೇ ಇವೆ. ಲಿಯೋಪಾರ್ಡ್ ಯುದ್ಧವಾಹನಗಳನ್ನು ಪೂರೈಸುವುದಾಗಿ ಇತ್ತೀಚೆಗೆ ಜರ್ಮನಿ ಹೇಳಿದೆ. ಅತ್ತ ಪುಟಿನ್, ಸ್ಟಾಲಿನ್‌ಗ್ರಾಡ್ ಕದನಕ್ಕೆ 80 ವರ್ಷ ತುಂಬಿದ ಹಿನ್ನೆಲೆಯಲ್ಲಿ ಮಾತನಾಡುತ್ತಾ, ಇದೀಗ ಮತ್ತೊಮ್ಮೆ ಜರ್ಮನಿಯ ಲಿಯೋಪಾರ್ಡ್ ಯುದ್ಧವಾಹನಗಳನ್ನು ಎದುರಿಸಬೇಕಿದೆ ಎಂದು ಇತಿಹಾಸವನ್ನು ಕೆದಕಿದ್ದಾರೆ.

ಸ್ಟಾಲಿನ್‌ಗ್ರಾಡ್ ಕದನ ಎರಡನೇ ವಿಶ್ವಸಮರಕ್ಕೆ ಮಹತ್ವದ ತಿರುವು ನೀಡಿದ ರೋಚಕ ಕದನ. ಆ ಯುದ್ಧದಲ್ಲಿ ಜರ್ಮನಿಯ ವಿರುದ್ಧ ಸೋವಿಯತ್ ಮೇಲುಗೈ ಸಾಧಿಸಿತ್ತು. ಆ ಸಮರವನ್ನು ಉಲ್ಲೇಖಿಸುವ ಮೂಲಕ ಉಕ್ರೇನ್ ಜೊತೆಗಿನ ಸಂಘರ್ಷ ಬರುವ ದಿನಗಳಲ್ಲಿ ತೀವ್ರತೆ ಪಡೆದುಕೊಳ್ಳಲಿದೆ ಎಂಬ ಸೂಚನೆಯನ್ನು ಪುಟಿನ್ ನೀಡಿರಲಿಕ್ಕೆ ಸಾಕು.

ಸಂಧಾನ ಅಥವಾ ಮಾತುಕತೆಗೆ ತೆರೆದುಕೊಳ್ಳದ ಎರಡು ಪಡೆಗಳ ನಡುವಿನ ಯುದ್ಧ, ದೀರ್ಘ ಅವಧಿಗೆ ಮುಂದುವರಿದರೆ ಅಂತಹ ಯುದ್ಧಗಳು ದೊಡ್ಡದೊಂದು ಅವಘಡದೊಂದಿಗೆ ಮುಕ್ತಾಯವಾಗುವ ಸಾಧ್ಯತೆಯೇ ಹೆಚ್ಚು. ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧ ಆ ಹಾದಿ ಹಿಡಿಯಬಹುದೇ ಎಂಬ ಆತಂಕವಂತೂ ಇದ್ದೇ ಇದೆ.

ಚುರುಮುರಿ



ಖೇಲ್ ಖತಂ ಭಾಗ್ಯ

• ಲಿಂಗರಾಜು ಡಿ.ಎಸ್.

ತಮ್ಮ ಹಿಂಭಾರ, ಮುಂಭಾರ ಹೊತ್ತುಕೊಂಡು ದೇಕುತ್ತಾ ಬಂದ ರಾಜಕಾರಣಿ ‘ತುರೇಮಣೆಣ್ಣ ಯಂಗದೀರಿ? ಅಕ್ಕಾರಿಗೆ ಗಿಫ್ಟ್ ಕೊಡದದೆ, ಸಂದೇನಾಗ ಬತ್ತೀನಿ. ಈ ಸಾರಿ ನನಗೇ ವೋಟಾಕಬಕು’ ಅಂತ ತಾಕೀತು ಮಾಡಿದರು.

‘ಇದೇನಣ್ಣೆ, ಏನೋ ತರಾತುರೀಲಿದೀರಾ?’ ತುರೇಮಣೆ ಕೇಳಿದರು. ‘ಬಜೆಟ್ ಮೀಟಿಂಗ್ ನಡೀತಾ ಅದಲ್ಲ, ನಮ್ಮ ಇಶ್ಯೂಗಳನ್ನೂ ಸೇರ್ಸಮು ಅಂತ ಹೊಂಟಿದ್ದೀನಿ’ ಅಂದರು ನಾಯಕರು.

‘ಏನಣ್ಣ ಅವು?’ ತುರೇಮಣೆ ವಿಚಾರಿಸಿದರು.

‘ನೇತಾರರ ಪಕ್ಷಾಂತರ ಶೇವೆ, ತ್ಯಾಗ ಮನ್ನಿಸಿ ತ್ಯಾಗಭೂಷಣ ಪ್ರಶಸ್ತಿ ಕೊಡಬಕು. ಎಲೆಕ್ಸನ್ನಿಗೆ ಮೊದಲು ಕುಕ್ಕರ್ರು, ಸೀರೆ, ಸ್ಟವ್ವು ಕೊಡದು ಪುಗಸಟ್ಟೆ ಭಾಗ್ಯ ಅನ್ನೋ ಯೋಜನೆಯಲ್ಲಿ ಬರಬಕು’ ಅಂತಂದ್ರು.

‘ಬಜೆಟ್ಟಲ್ಲಿ ಅಕ್ಕಾರು ನಮಗೆ ಏನೇನೋ ಕೊಡ್ತೀವಿ ಅಂದವ್ರೆ’ ತುರೇಮಣೆ ಚಿಮುಟ ಆಡಿಸಿದರು.

‘ದಡ್ಡಾ ದಡ್ಡಾ, ಬಜೆಟ್ ಕಾಸೆಲ್ಲಾ ಎಲ್ಲಿಗೋಗಿ ಸೇರ್ತದೆ ಗೊತ್ತಾ? ಎಲ್ಲಾ ಕಾಮಗಾರಿಗಳಲ್ಲೂ ನಮಗೆ ಪರ್ಸೆಂಟೇಜ್ ತೆಗೆದಿಡೋ ರಾಜಪಾಲು ಯೋಜನೆ ಮಾಡಬಕು. ನಮ್ಮ ಆದಾಯಕ್ಕೆ ತೆರಿಗೆ ಮನ್ನಾ ಆಗಬೇಕು. ಮುಂದ್ಲ ಎಲೆಕ್ಷನ್ನುಗಳಲ್ಲಿ ಹೆಂಡ್ರು, ಮಕ್ಕಳಿಗೇ ಟಿಕೆಟ್ ಕೊಡೋ ವಂಶಪಾರಂಪರ್ಯದ ಬರಾವರ್ದು ಭಾಗ್ಯ ತರಬೇಕು. ಇಂತಾ ಕುಯುಕ್ತಿಗಳ ಬಗ್ಗೆ ತಿಳಕಣಕೆ ಅಧ್ಯಯನ ಕೂಠ ಆಗಬೇಕು’ ಅಂತಂದ್ರು.

‘ಅಣ್ಣೆ, ಇಂತಾ ಯೋಜನೆಗಳಿಲ್ಲದೆ ನಿಮಗೆ ಬದುಕು ಬಂಡಾಟಾಗ್ಯದೇನೋ’ ತುರೇಮಣೆ ಪುಳ್ಳೆ ಹಾಕಿದರು. ‘ನೋಡು, ನಿನಗೀಗ ಅರ್ಥ ಆಯ್ತು, ನಮ್ಮ ವೈವಾಟು ನೂರಿರತವೆ, ಅದುಕ್ಕೆಲ್ಲ ಕಾಸು ಎಲ್ಲಿಂದ ಬಂದತ್ತು? ಸಾಯಗಂಟ ಶಾಸಕನಾಗಬಕು, ಮಂತ್ರಿಯಾಗಬಕು ಅಂತ ತರದೂದು ಮಾಗಾಡದ್ಯಾಕೆ ಅಂದ್ಕಂದೀಯೇ?’ ನಾಯಕರು ಹಲ್ಲುಕಿಸಿದರು.

‘ಸೂಪರ್ ಕಣಣ್ಣ, ಇನ್ನೊಂದು ಯೋಜನೆ ಬುಟ್ಬುಟ್ರಿ, ಹಳೆ ವಾಹನ ಗುಜರೀಗೆ ಹಾಕಿದಂಗೇ ಮೂರುಸಾರಿ ಶಾಸಕನಾದೋನ್ನ ವಂಶಾನೇ ಎಲೆಕ್ಷನ್ನಿಂದ ರಿಟೈರ್ ಮಾಡೋ ಖೇಲು ಖತಂ ಭಾಗ್ಯ ತರಬಕು ಅಲ್ಲುವರಾ?’ ತುರೇಮಣೆ ಮಾತಿಗೆ ನಾಯಕರ ಕರೀ ಮುಖ ಕೆಂಪಾಯಿತು.

ದಿನದ ಟ್ವೀಟ್

ವಾಸ್ತುಶಿಲ್ಪಿಗಳಿಗೊಂದು ಪ್ರಶ್ನೆ



ಭಾರತದಲ್ಲಿನ ವಾಸ್ತುಶಿಲ್ಪಿಗಳು ಉತ್ತರಿಸಬೇಕಾದುದು ಬಹಳಷ್ಟಿದೆ. ಪಟ್ಟಣಗಳು ಮತ್ತು ನಗರಗಳು ಕುರೂಪಗೊಂಡಿರುವುದಕ್ಕೆ ಸರ್ಕಾರದಲ್ಲಿನ ಭ್ರಷ್ಟಾಚಾರ ಮತ್ತು ಕಳಪೆ ಯೋಜನೆಯಷ್ಟೇ ಕಾರಣವಲ್ಲ.

ಅಂಜಲಿ ಮೋಡಿ, ಪತ್ರಕರ್ತೆ

ಕಿಡಿನುಡಿ



ವಕೀಲ ಜಾನ್ ಸತ್ಯಂ ಅವರು ‘ಪ್ರಧಾನಿ ಮೋದಿ ಅವರನ್ನು ಟೀಕಿಸುವ ಲೇಖನವನ್ನು ಹಂಚಿಕೊಂಡಿದ್ದ’ ಕಾರಣಕ್ಕಾಗಿ, ಅವರನ್ನು ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಿಸುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಕೇಂದ್ರ ಸರ್ಕಾರವು ಇದೀಗ ವಕೀಲೆ ವಿಕ್ಟೋರಿಯಾ ಗೌರಿ (ಬಿಜೆಪಿ ಮಹಿಳಾ ಮೋರ್ಚಾದ ಮಾಜಿ ಪ್ರಧಾನ ಕಾರ್ಯದರ್ಶಿ) ಅವರನ್ನು ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಿಸಲು ಮಿಂಚಿನ ವೇಗದಲ್ಲಿ ಸಮ್ಮತಿ ಸೂಚಿಸಿದೆ. ಕೊಲಿಜಿಯಂ ವ್ಯವಸ್ಥೆ ಈಗ ಚೆನ್ನಾಗಿದೆಯೇ?!

ಅರವಿಂದ್ ಗುಣಶೇಖರ್, ಪತ್ರಕರ್ತ

25 ವರ್ಷಗಳ ಹಿಂದೆ

ಶನಿವಾರ, 7-2-1998

• **ಬೊಫೋರ್ಸ್ ಲಂಚ ಸೋನಿಯಾಗೆ ಗೊತ್ತು: ವಿವರ ಬಹಿರಂಗಕ್ಕೆ ಅಡ್ವಾಣಿ ಒತ್ತಾಯ**

ಫೈಜಾಬಾದ್ (ಉತ್ತರ ಪ್ರದೇಶ), ಫೆ. 6 (ಪಿಟಿಐ)– ಬೊಫೋರ್ಸ್ ಫಿರಂಗಿ ಖರೀದಿ ಹಗರಣದ ಬಗ್ಗೆ ಸೋನಿಯಾ ಗಾಂಧಿ ಅವರು ತಮಗೆ ಗೊತ್ತಿರುವ ಮಾಹಿತಿಯನ್ನು ಭಾರತದ ಜನತೆಗೆ ತಿಳಿಸಬೇಕು ಎಂಬ ಸ್ವಿಸ್ ಸರ್ಕಾರದ ಹೇಳಿಕೆಗೆ ಸೋನಿಯಾ ಅವರು ತಕ್ಷಣ ಪ್ರತಿಕ್ರಿಯಿಸಬೇಕು ಎಂದು ಬಿಜೆಪಿ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಅವರು ಒತ್ತಾಯಿಸಿದ್ದಾರೆ.

‘ತಮಗೆ ಗೊತ್ತಿರುವ ಮಾಹಿತಿಯನ್ನು ತಿಳಿಸಬೇಕು ಹಾಗೂ ಈ ಸಂಬಂಧ ತಿಳಿಸಲು ಅದಕ್ಕಿಂತ ಹೆಚ್ಚಿನದೇನೂ ಇಲ್ಲ’ ಎಂಬ ಸ್ವಿಸ್ ಪ್ರಧಾನಮಂತ್ರಿ ಕಚೇರಿಯ ಹೇಳಿಕೆ ‘ಮಹತ್ವವಾದುದು’ ಎಂದು ಅಡ್ವಾಣಿ ಹೇಳಿದ್ದಾರೆ.

• **ಆಫ್ಘಾನಿಸ್ತಾನದಲ್ಲಿ ಭೂಕಂಪ 4,000 ಸಾವು**

ಇಸ್ಲಾಮಾಬಾದ್, ಫೆ. 6 (ಡಿಪಿಎ, ರಾಯಿಟರ್ಸ್)– ಆಫ್ಘಾನಿಸ್ತಾನದ ತಖ್ಖರ್ ಪ್ರಾಂತ್ಯದಲ್ಲಿ ಬುಧವಾರ ಸಂಜೆ ಭಾರಿ ಭೂಕಂಪ ಸಂಭವಿಸಿ ಕನಿಷ್ಠ ನಾಲ್ಕು ಸಾವಿರ ಜನರು ಸತ್ತಿದ್ದಾರೆ.

ತಾಜಿಕ್ ರಾಜಧಾನಿ ದುಶಂಬೆಯಲ್ಲಿ ದುರಂತದ ಸುದ್ದಿಯನ್ನು ಆಫ್ಘನ್ ರಾಯಭಾರಿ ಕಚೇರಿ ಪ್ರಕಟಿಸಿತು. ರಿಕ್ಟರ್ ಮಾಪಕದಲ್ಲಿ 6.1ರಷ್ಟಿದ್ದ ಕಂಪನದ ಕೇಂದ್ರಬಿಂದು ಲೋಸ್ತಾಕ್ ಗ್ರಾಮದಲ್ಲಿತ್ತು.

50 ವರ್ಷಗಳ ಹಿಂದೆ

ಬುಧವಾರ, 7-2-1973

• **ಇಂದಿರಾ ಗಾಂಧಿ ಶಂಕೆ: ವಿಯಟ್ನಾಮ್ ಒಪ್ಪಂದ ಏರ್ಪಾಟಾದ ಬಗೆಯಿಂದ ಹೊಸ ಬಿಕ್ಕಟ್ಟಿಗೆ ದಾರಿ**

ನವದೆಹಲಿ, ಫೆ. 6– ವಿಯಟ್ನಾಂನಲ್ಲಿ ಕದನವಿರಾಮ ಏರ್ಪಟ್ಟಿರುವ ವಿಧಾನದಿಂದ ಅಲ್ಲಿ ಹೊಸ ಬಿಕ್ಕಟ್ಟುಗಳು ತಲೆದೋರಬಹುದು ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಶಂಕೆ ವ್ಯಕ್ತಪಡಿಸಿದರು.

‘ಅಲ್ಲಿನ ಕದನವಿರಾಮದಿಂದ ನಾವು ಸಂತೃಪ್ತರಾಗಿ ತೆಪ್ಪಗಿರುವಂತಾಗಬಾರದು’ ಎಂದರು.

ಇಂದು ಬೆಳಿಗ್ಗೆ ಇಲ್ಲಿ ಐಕ್ಯ ಏಷ್ಯಾ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಕದನ ವಿರಾಮದಿಂದ ಒದಗಿರುವ ಅವಕಾಶವನ್ನು ಏಷ್ಯಾ ರಾಷ್ಟ್ರಗಳು ಉಪಯೋಗಿಸಿಕೊಂಡು ಒಗ್ಗಟ್ಟಾಗಿ ಕ್ರಮ ತೆಗೆದು-ಕೊಳ್ಳಬೇಕು’ ಎಂದು ಅಭಿಪ್ರಾಯಪಟ್ಟರು.

• **ಸಂಪನ್ಮೂಲ ಅಭಿವೃದ್ಧಿಗೆ ಹೆಚ್ಚು ನೆರವು ನೀಡಲು ಶ್ರೀಮಂತ ರಾಷ್ಟ್ರಗಳಿಗೆ ವಾಲ್ಡ್‌ಹೈಂ ಕರೆ**

ನವದೆಹಲಿ, ಫೆ. 6– ಅಭಿವೃದ್ಧಿ ಹೊಂದುತ್ತಿರುವ ದೇಶಗಳು ತಮ್ಮ ಸ್ವಾಭಾವಿಕ ಸಂಪನ್ಮೂಲಗಳನ್ನು ಶೋಧಿಸಿ ವ್ಯವಸ್ಥಿತವಾಗಿ ರೂಢಿಸಿಕೊಳ್ಳಲು ಸಹಾಯಕವಾಗುವಂತೆ, ಆ ದೇಶಗಳಿಗೆ ಹೆಚ್ಚಿನ ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡಬೇಕೆಂದು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಕರ್ಟ್ ವಾಲ್ಡ್‌ಹೈಂ ಅವರು ಶ್ರೀಮಂತ ರಾಷ್ಟ್ರಗಳಿಗೆ ಇಂದು ಕರೆ ನೀಡಿದರು.

ಸಂಗತ

ಹುಡುಗರಿಗೂ ಇರಲಿ ಮುಟ್ಟಿನ ಅರಿವು

ಮುಟ್ಟು ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ವಿಷಯ ಎಂದುಕೊಂಡು, ಗಂಡುಮಕ್ಕಳಿಗೆ ಅದರ ನೆರಳು ಕೂಡ ತಾಕದಂತೆ ದೂರ ಇಟ್ಟಿರುವುದು ಆರೋಗ್ಯಕರ ಬೆಳವಣಿಗೆಯಲ್ಲ

• ಸದಾಶಿವ್ ಸೊರಟೂರು

ಶಾಲೆ, ಕಾಲೇಜುಗಳಲ್ಲಿ ಓದುವ ಹೆಣ್ಣುಮಕ್ಕಳಿಗೆ ಮುಟ್ಟಿನ ರಜೆಯನ್ನು ಕೊಡಬೇಕು ಎಂಬುದರ ಬಗ್ಗೆ ಇತ್ತೀಚೆಗೆ ಚರ್ಚೆಗಳಾಗುತ್ತಿವೆ. ಮೊನ್ನೆ ಶಾಲೆಯಲ್ಲಿ ನಮ್ಮ ನಡುವೆ ಯಾರೋ ಒಂದು ಪ್ರಶ್ನೆ ಎಸೆದರು. ‘ಅಲ್ಲಾ ಸರ್, ಆ ಹುಡುಗಿ ಮೂರು ದಿನ ಬಂದಿಲ್ಲ ಅಂದ್ರೆ ಅವಳು ಮುಟ್ಟಾಗಿದ್ದಾಳೆ ಅನ್ನೋದು ಇಡೀ ಶಾಲೆಗೆ ತಿಳಿಯಲ್ವ? ಪಾಪ ಅವಳಿಗೆ ಎಂತಹ ಮುಜುಗರ, ಶಾಲೆಯಲ್ಲಿ ಗಂಡುಮಕ್ಕಳು ಇರ್ತಾರೆ’ ಅಂದರು. ಪ್ರಶ್ನೆ ಕೇಳಿದವರ ಮನಃಸ್ಥಿತಿ ಬೆರಗು ಹುಟ್ಟಿಸಿತು. ಮುಟ್ಟು ಗುಟ್ಟಾಗಿರಬೇಕೆ? ಅದರಲ್ಲೂ ಗಂಡುಮಕ್ಕಳನ್ನು ಮುಟ್ಟಿನ ವಿಚಾರದಲ್ಲಿ ದೂರ ಇಟ್ಟೇ ಬೆಳೆಸಲಾಗುತ್ತಿದೆ. ಅದು ಅವರಿಗೆ ಸಂಬಂಧವಿರದ ವಿಷಯ ಎಂಬಂತೆ ಭಾವಿಸಲಾಗುತ್ತದೆ. ಇದು ಸರಿಯಲ್ಲ.

ಖಾಸಗಿ ಅಧ್ಯಯನ ಸಂಸ್ಥೆಯೊಂದು ಐದಾರು ವರ್ಷಗಳ ಹಿಂದೆ ದೇಶದ ಮೂರು ರಾಜ್ಯಗಳಲ್ಲಿ ನೂರಾರು ಗಂಡುಮಕ್ಕಳನ್ನು ಬಳಸಿಕೊಂಡು ಮಾಡಿದ ಅಧ್ಯಯನದಲ್ಲಿ ಕುತೂಹಲಕಾರಿ ಅಂಶಗಳು ಹೊರಬಂದಿವೆ. ಎಷ್ಟೋ ಗಂಡುಮಕ್ಕಳು ‘ಮುಟ್ಟು ಎಂದರೇನು? ಅದು ನಮಗೆ ಗೊತ್ತೇ ಇಲ್ಲ’ ಅಂದಿದ್ದಾರೆ. ಕೆಲವರು ಅದೊಂದು ಕಾಯಿಲೆ ಇರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಇನ್ನು ಕೆಲವರು ಆ ಪದ ಕೇಳಿದ್ದೇವೆ, ಆದರೆ ಆ ಬಗ್ಗೆ ಹೆಚ್ಚು ಏನೂ ಗೊತ್ತಿಲ್ಲ ಎಂದಿದ್ದಾರೆ. ಕೆಲವರು ಮುಟ್ಟಿನ ಬಗ್ಗೆ ಅನುಕಂಪವನ್ನು ಮತ್ತೆ ಕೆಲವರು ಕುಹಕವನ್ನು ಹೊರಹಾಕಿದ್ದರು. ಈ ಗಂಡುಮಕ್ಕಳು ಮನೆಯಲ್ಲಿ ಸಹೋದರನ ಪಾತ್ರವನ್ನು, ನಾಳೆ ಗಂಡನ ಪಾತ್ರವನ್ನು ನಂತರ ಅಪ್ಪನ ಪಾತ್ರವನ್ನು ನಿರ್ವಹಿಸುವವರು. ಅವರಿಗೆ ಮುಟ್ಟಿನ ಬಗ್ಗೆ ಸ್ಪಷ್ಟ ತಿಳಿವಳಿಕೆ ನೀಡುವುದರಿಂದ ಅವರು ಅದನ್ನು ಒಂದು ಘನತೆಯಿಂದ ಕಾಣಬಲ್ಲರು ಮತ್ತು ಹೆಣ್ಣನ್ನು ಕಾಳಜಿ ಮಾಡಬಲ್ಲರು ಅಲ್ಲವೇ?

ನಮ್ಮ ಶಾಲೆಯಲ್ಲಿ ಈ ಮೊದಲು ಶುಚಿ ಪ್ಯಾಡ್ ಕೊಡುವಾಗ (ಈಗ ಕೊಡುವುದನ್ನು ನಿಲ್ಲಿಸಲಾಗಿದೆ) ಶಿಕ್ಷಕಿಯರು ಹುಡುಗರ ಗಮನಕ್ಕೆ ಬಾರದಂತೆ ತುಂಬಾ ಕಾಳಜಿ ವಹಿಸುತ್ತಿದ್ದರು. ಹುಡುಗರು ಆಟಕ್ಕೆ ಹೋದಾಗ ಬಾಲಕಿಯರನ್ನು ಕರೆದು ಪ್ಯಾಡ್‌ಗಳನ್ನು ಒಂದು ಹಳೆಯ ಕಾಗದದ ತುಣುಕಿನಲ್ಲಿ ಮುಚ್ಚಿ ಕೊಡುತ್ತಿದ್ದರು. ಪಾಪ, ಹುಡುಗಿಯರಂತೂ ತಾವು ಕಳ್ಳತನ ಮಾಡಿದ್ದೇವೇನೊ ಅನ್ನುವಂತೆ ಓಡಿಹೋಗಿ ಯಾರಿಗೂ ಕಾಣದಂತೆ ಬ್ಯಾಗಿನಲ್ಲಿ ಇಟ್ಟುಕೊಳ್ಳುತ್ತಿದ್ದರು. ಸಂಕೋಚದ ಮುದ್ದೆಯಾಗುತ್ತಿದ್ದರು. ಇಂತಹ ವಾತಾವರಣ ಸೃಷ್ಟಿಯಾದಾಗ, ಒಬ್ಬ ಹೆಣ್ಣುಮಗಳು ಶಾಲೆಯಲ್ಲಿ ಮುಟ್ಟಾದಾಗ ಅದನ್ನು ಒಂದು ಘನತೆಯಾಗಿ ಹೇಗೆ ತೆಗೆದುಕೊಂಡಾಳು? ತನಗೆ ಇದ್ಯಾವ ಶಾಪ ಎಂದು ಹಳಹಳಿಸಬಹುದು ಅಲ್ಲವೇ?

ನಾವು ಶಾಲಾ ಕಾಲೇಜುಗಳಲ್ಲಿ ಹೆಣ್ಣುಮಕ್ಕಳಿಗೆ ಮುಟ್ಟಿನ ಬಗ್ಗೆ ತಿಳಿವಳಿಕೆ ನೀಡುವಾಗ ಹುಡುಗರಿಗೂ ಪ್ರತ್ಯೇಕವಾಗಿ ಅದರ ಬಗ್ಗೆ ಒಂದಿಷ್ಟಾದರೂ ಜ್ಞಾನ ನೀಡುವುದು ಅವಶ್ಯಕ. ಅವನು ಮುಟ್ಟನ್ನು ಗೌರವಿಸುವ, ಅದನ್ನೊಂದು ಹೆಣ್ಣಿನ ಘನತೆಯನ್ನಾಗಿ ನೋಡುವ ಮತ್ತು ಅವಳನ್ನು ಕಾಳಜಿ ಮಾಡುವ ಮನೋಭಾವ ಬೆಳೆಸಿಕೊಳ್ಳಬಹುದು.

‘ಪಾಪು, ಏಳು ನೀ ಮೊದ್ಲು ಸ್ನಾನ ಮಾಡು’ ಎಂದು ಅಮ್ಮ ಕರೆಯುತ್ತಾಳೆ. ‘ಅಕ್ಕ ಮೊದ್ಲು ರೆಡಿಯಾಗ್ಲಿ’ ಮಗನ ವರಾತ. ‘ಬೇಡ, ಅಕ್ಕ ಈ ದಿನ ಇನ್ನೂ ಸ್ವಲ್ಪ ಹೊತ್ತು ಮಲಗಲಿ’ ಅನ್ನುತ್ತಾಳೆ ಅಮ್ಮ. ‘ಓ... ಗೊತ್ತಾಯ್ತು, ಸರೀಮಾ’ ಎಂದು ಎದ್ದು ತಯಾರಾದ ಆ ಹುಡುಗನಿಗೆ ನಾಳೆ ತನ್ನ ಹೆಂಡತಿ, ಮಗಳ ಮುಟ್ಟಿನ ದಿನಗಳನ್ನು ಗೌರವಿಸುವಂತೆ ಅಮ್ಮ ಸೂಕ್ಷ್ಮ ತರಬೇತಿ ನೀಡಿದರು ಎಂದು ಈ ಪುಟ್ಟ ಕಥೆ ಮುಗಿಯುತ್ತದೆ. ವಸುಂಧರಾ ಕದಲೂರು ಅವರು ಬರೆದ ಈ ಕಥೆ ಗಂಡುಮಕ್ಕಳಿಗೆ ನಾವು ಕಲಿಸಬೇಕಾದ ಪಾಠದಂತಿದೆ.

ಮುಟ್ಟನ್ನು ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ವಿಷಯವಾಗಿ ನೋಡಲಾಗುತ್ತದೆ ಮತ್ತು ಅದು ಖಾಸಗಿಯಾಗಿ ಇರಿಸಬೇಕಾದದ್ದು ಹಾಗೂ ಚರ್ಚಿಸದೇ ಇರಬೇಕಾದದ್ದು ಎಂದು ಅರ್ಥೈಸಲಾಗಿದೆ. ಅಲ್ಲದೆ ನಾವು ಅದನ್ನು ಎಂದಿನಿಂದಲೂ ಹಾಗೆಯೇ ನಡೆಸಿಕೊಂಡು ಬಂದಿದ್ದೇವೆ. ಗಂಡುಮಕ್ಕಳನ್ನು ಅದರ ನೆರಳು ಕೂಡ ತಾಕದಂತೆ ದೂರ ಇಟ್ಟಿದ್ದೇವೆ. ಇದು ಆರೋಗ್ಯಕರ ಬೆಳವಣಿಗೆ ಅಲ್ಲ. ಅದನ್ನೊಂದು ಗೋಪ್ಯ ವಿಚಾರವಾಗಿ ಇಡುವುದರ ಪರಿಣಾಮವಾಗಿ, ಹುಡುಗಿಯರು ಮತ್ತು ಮಹಿಳೆಯರು ತಮ್ಮ ಅಗತ್ಯಗಳನ್ನು ವ್ಯಕ್ತಪಡಿಸಲಾಗುವುದಿಲ್ಲ. ಇದು ಗಂಡು ಮತ್ತು ಹೆಣ್ಣು ಭಾವನಾತ್ಮಕವಾಗಿ ಬೆರೆಯಲು ಅಡ್ಡಿಪಡಿಸುತ್ತದೆ.



ಹುಡುಗರಿಗೆ ಮುಟ್ಟಿನ ಬಗ್ಗೆ ತಿಳಿವಳಿಕೆ ನೀಡುವುದರಿಂದ ಶಾಲೆಯಲ್ಲಾಗಲಿ, ಮನೆಯಲ್ಲಾಗಲಿ ಹೆಣ್ಣುಮಗುವು ಮುಟ್ಟಾದ ದಿನಗಳಂದು ಯಾವುದೇ ಮುಜುಗರ ಇಲ್ಲದೆ ಆರಾಮಾಗಿರಬಹುದು. ಆ ಸಮಯದಲ್ಲಿ ಅವಳಲ್ಲಾಗುವ ಭಾವನೆಗಳ ಏರಿಳಿತ, ಸುಸ್ತು, ಕಿರಿಕಿರಿಯನ್ನು ಹುಡುಗರು ಅರ್ಥ ಮಾಡಿಕೊಂಡು ಅವಳನ್ನು ಗೌರವಿಸಬಹುದು. ಅವಳನ್ನು ಕಾಳಜಿ ಮಾಡಬಹುದು.

ಹೆಣ್ಣಿಗೆ ಭಾವನಾತ್ಮಕ ಬೆಂಬಲ ಸಿಕ್ಕಾಗ, ಮುಟ್ಟು ತನಗೊಂದು ಹಿಂಸೆ ಅಂದುಕೊಳ್ಳಲಾರಳು. ಒಂದು ಹುಡುಗಿ ಶಾಲೆಯಲ್ಲಿ ಮುಟ್ಟಾದರೆ ಕದ್ದುಮುಚ್ಚಿ ಶಿಕ್ಷಕಿಯರ ಬಳಿ ಬಂದು ಪಿಸುಮಾತಿನಲ್ಲಿ ಹೇಳದೆ ‘ನಾನು ಮುಟ್ಟಾಗಿದೀನಿ’ ಎಂದು ಘನತೆಯಿಂದ ಹೇಳಿಕೊಳ್ಳುವಂತೆ ಆಗಬೇಕು.

ವಾಚಕರ ವಾಣಿ

ಅರಿಯುವ ಕ್ರಮದಲ್ಲಿ ಅಡಗಿದೆ ಮಹತ್ವ

ಕೇಂದ್ರ ಬಜೆಟ್‌ಗೆ ರಾಜಕೀಯ ನಾಯಕರ ಪ್ರತಿಕ್ರಿಯೆ ಕೇವಲ ಮನರಂಜನೆಯಂತೆ ಇರುತ್ತದೆ ಎಂದು ಆರ್. ಲಕ್ಷ್ಮೀನಾರಾಯಣ ಅವರು ಹೇಳಿರುವುದು (ವಾ.ವಾ., ಫೆ. 2) ಸಮಂಜಸವಲ್ಲ. ಬಜೆಟ್ ವಿಶ್ಲೇಷಣೆಯನ್ನು ಅರಿಯುವ ಕ್ರಮದಲ್ಲಿ ಅದು ಮನರಂಜನೆಯೇ ಅಲ್ಲವೇ ಎಂಬುದು ಅಡಗಿರುತ್ತದೆ. ಬಜೆಟ್‌ನಲ್ಲಿ ಹಣಕಾಸಿನ ತತ್ವ ಮತ್ತು ತಕ್ಷಣದ ಲೆಕ್ಕ ಎರಡೂ ಇರುತ್ತವೆ. ಅಂದರೆ ಬಜೆಟ್, ದೇಶವು ಸರ್ವತೋಮುಖವಾಗಿ ತಲುಪಬೇಕಾದ ಆರ್ಥಿಕ ಗುರಿ ಮತ್ತು ಅದನ್ನು ತೆರಿಗೆ ಸಂಗ್ರಹದಿಂದ ತಲುಪುವ ದಾರಿ ಎರಡನ್ನೂ ಹೊಂದಿರುತ್ತದೆ. ರಾಜಕೀಯ ನಾಯಕರ ಹೇಳಿಕೆಗಳನ್ನು ಗಮನಿಸಿದಾಗ ಈ ವಿವರ ಸ್ಪಷ್ಟವಾಗುತ್ತದೆ.

ವಿವಿಧ ಪಕ್ಷಗಳ ರಾಜ್ಯ ಮತ್ತು ರಾಷ್ಟ್ರ ಮಟ್ಟದ ನಾಯಕರಾದ ಸಿದ್ದರಾಮಯ್ಯ, ಅರವಿಂದ ಕೇಜ್ರಿವಾಲ್, ರಾಹುಲ್ ಗಾಂಧಿ, ಪಿಣರಾಯಿ ವಿಜಯನ್, ಪಿ.ಚಿದಂಬರಂ, ಸುಬ್ರಮಣಿಯನ್ ಸ್ವಾಮಿ, ಎಚ್.ಡಿ.ಕುಮಾರಸ್ವಾಮಿ ಅಂತಹವರು ಈ ಬಾರಿಯೂ ಹಲವು ಪ್ರಮುಖ ಅಂಶಗಳನ್ನು ಮುಂದಿಟ್ಟು, ಬಜೆಟ್‌ನಲ್ಲಿ ನಿಗದಿಯಾಗಿರುವ ಅನುದಾನವನ್ನು ಪ್ರಶ್ನೆ ಮಾಡಿದ್ದಾರೆ. ಪುಸ್ತಕದ ವಿಮರ್ಶೆಯಲ್ಲಿ ಒಂದು ಸಾಹಿತ್ಯ ಕೃತಿಯ ಅಂತರಾತ್ಮವನ್ನು ಗ್ರಹಿಸಿದಂತೆ, ಬಜೆಟ್ ಕುರಿತ ವಿಶ್ಲೇಷಣೆಯಲ್ಲಿ ಅದರ ಅಂತರಂಗವನ್ನು ಗಮನಿಸಬೇಕು. ಆಗ ಅದು ಮನರಂಜನೆಯಂತೆ ಅನಿಸುವುದಿಲ್ಲ.

ಎಸ್.ಆರ್.ವಿಜಯಶಂಕರ, ಬೆಂಗಳೂರು

ಮೋಡಿ ಮಾಡಿದ ಸಿರಿಕಂಠದ ಮಾಧುರ್ಯ

ಹಿಂದೆ, ನಾವು ಚಿಕ್ಕವರಿದ್ದಾಗ ರೇಡಿಯೊದಲ್ಲಿ ಚಿತ್ರಗೀತೆಗಳನ್ನು ಕೇಳಲು ಮನೆಯ ಹಿರಿಯರ ಅನುಮತಿ ಬೇಕಾಗಿತ್ತು. ಹೀಗೆ ಒಮ್ಮೆ ರೇಡಿಯೊ ಹಾಕಿಬಿಟ್ಟಾಗ, ‘ಯಾರೋ ಅದು ರೇಡಿಯೊ ಹಾಕಿದ್ದು, ಓದೋದು ಬಿಟ್ಟು’ ಅಂತ ಗದರಿದರು. ಅಷ್ಟರಲ್ಲಿ ವಾಣಿ ಜಯರಾಂ ಅವರು ಹಾಡಿದ್ದ, ಶ್ರೋತೃಗಳನ್ನು ಕಾಡುತ್ತಿದ್ದ ‘ಬೋಲೊರೆ, ಪಪ್ಪಿಹರಾ’ ಹಾಡು ಪ್ರಸಾರವಾಗುತ್ತಿದ್ದಂತೆಯೇ, ಎಲ್ಲರೂ ಅದನ್ನು ಆಸ್ವಾದಿಸಲಾರಂಭಿಸಿದರು. ರೇಗುವುದು ನಿಂತುಹೋಯಿತು. ಅಲ್ಲಿಂದ ಆರಂಭವಾದ ಅವರ ಸಿನಿಹಾಡುಗಳ ಪಯಣ, ಶ್ರೋತೃಗಳ ಕಿವಿಯಲ್ಲಿ ಸದಾ ಗುನುಗುನಿಸುತ್ತಿದೆ. ಕೀಟ್ಸ್ ಕವಿಯ ‘Melody is sweet, but those unheard are sweeter’ ಎಂಬ ಸಾಲುಗಳ ಸಾತತ್ಯವು ವಾಣಿ ಅವರ ಸಿರಿಕಂಠದ ಮಾಧುರ್ಯಕ್ಕೆ ಸೂಕ್ತವಾಗಿ ಅನ್ವಯವಾಗಿತ್ತು.

ಪ್ರೊ. ಎಂ.ಎಸ್.ರಘುನಾಥ್, ಬೆಂಗಳೂರು

ದಂಡಕ್ಕೆ ರಿಯಾಯಿತಿ: ಅವಧಿ ವಿಸ್ತರಿಸಿ

ಸಂಚಾರ ನಿಯಮ ಉಲ್ಲಂಘನೆಗೆ ವಿಧಿಸಿದ ದಂಡದ ಒಟ್ಟು ಮೊತ್ತದಲ್ಲಿ ಶೇಕಡ 50ರಷ್ಟು ರಿಯಾಯಿತಿ ನೀಡಿ, ಉಳಿದ ಹಣ ಪಾವತಿಗೆ ಸರ್ಕಾರ ಆದೇಶಿಸಿರುವುದು ನಿಜಕ್ಕೂ ಸ್ತುತ್ಯರ್ಹ ಸಂಗತಿ. ಆದರೆ ದಂಡ ಪಾವತಿಸಲು ನೀಡಿರುವ ಸಮಯದ ಅವಧಿ ಅತ್ಯಂತ ಕಡಿಮೆ. ಈ ಅವಧಿಯಲ್ಲಿ ಊರಿನಲ್ಲಿ ಇಲ್ಲದವರು ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಇಷ್ಟು ಕಡಿಮೆ ಸಮಯದಲ್ಲಿ ಹಣ ಹೊಂದಿಸಿಕೊಳ್ಳಲು ಕಷ್ಟವಾಗುತ್ತದೆ. ಹಾಗಾಗಿ ಸರ್ಕಾರ ಈ ಹಣದ ಪಾವತಿಗೆ ಕಾಲಮಿತಿ ಹೆಚ್ಚಿಸಿ ಜನಸಾಮಾನ್ಯರ ಆರ್ಥಿಕ ಬವಣೆಗೆ ಸ್ಪಂದಿಸಬೇಕಿದೆ.

ಆರ್.ವೆಂಕಟರಾಜು, ಬೆಂಗಳೂರು

ಆಗಬೇಕಿರುವುದು ಶಾಲೆ ವಿಲೀನವಲ್ಲ

ಯಾವುದೇ ಸಮಾಜ, ದೇಶದ ಅಭಿವೃದ್ಧಿ ಆಗಬೇಕಾದರೆ ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ಕೊಡಬೇಕಾಗುತ್ತದೆ. ಇಂದಿಗೂ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ, ಕೊಳೆಗೇರಿ, ಬುಡಕಟ್ಟು ಪ್ರದೇಶ, ಹಿಂದುಳಿದ ಪ್ರದೇಶಗಳಲ್ಲಿ ಎಷ್ಟೋ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಶಾಲೆಗೆ ಹೋಗದೆ ದುಡಿಯುತ್ತಿದ್ದಾರೆ ಮತ್ತು ಬೀಡಾಡಿಯಾಗಿ ಕಾಲ ಕಳೆಯುತ್ತಿದ್ದಾರೆ. ಇಂತಹ ಮಕ್ಕಳನ್ನು ಹುಡುಕಿ, ತಂದೆ–ತಾಯಿ, ಮಕ್ಕಳ ಮನಸ್ಸು ಪರಿವರ್ತಿಸಿ ಶಾಲೆಗೆ ಮಕ್ಕಳನ್ನು ಕರೆತರಬೇಕಾಗಿದೆ. ಆಗ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಾಗುತ್ತದೆ, ಇನ್ನೂ ಹೆಚ್ಚಿನ ಶಾಲೆಗಳೇ ಬೇಕಾಗಬಹುದು.

ಇದಾವುದನ್ನೂ ಗಣನೆಗೆ ತೆಗೆದುಕೊಳ್ಳದೆ, ಮಕ್ಕಳ ದಾಖಲಾತಿ ಕಡಿಮೆ ಇರುವ ಶಾಲೆಗಳನ್ನು ವಿಲೀನ ಮಾಡಬೇಕು ಎಂದು ಆಡಳಿತ ಸುಧಾರಣಾ ಆಯೋಗವು ಸರ್ಕಾರಕ್ಕೆ ಶಿಫಾರಸು ಮಾಡಿರುವುದು ದುರದೃಷ್ಟಕರ. ಇಂದು ಆಡಳಿತ ಸುಧಾರಣೆಗೆ ಬೇಕಾಗಿರುವುದು ಪಾರದರ್ಶಕತೆ ಮತ್ತು ಸರ್ಕಾರಿ ಹುದ್ದೆಯಲ್ಲಿರುವ ಪ್ರತಿಯೊಬ್ಬರ ಉತ್ತರದಾಯಿತ್ವ ಅಥವಾ ಹೊಣೆಗಾರಿಕೆ. ಖಾಸಗಿ ಸಂಸ್ಥೆಗಳಲ್ಲಿ ದುಡಿಯುವವರು ಹೊಣೆಗಾರಿಕೆ ಇಲ್ಲದೆ ಕೆಲಸ ಮಾಡಿದರೆ ಒಂದೇ ತಿಂಗಳಲ್ಲಿ ಮನೆಗೆ ಕಳುಹಿಸುತ್ತಾರೆ. ಸರ್ಕಾರಿ ನೌಕರಿಯಲ್ಲಿ ಇರುವವರಿಗೂ ಹೊಣೆಗಾರಿಕೆ ಬೇಕು. ಆಗ ಲಂಚದ ಆಸೆ ಬಿಟ್ಟು, ಆಗುವ ಕೆಲಸಗಳಿಗೆ ಅಡೆತಡೆ ಉಂಟುಮಾಡದೆ ಸಾಧನೆ ತೋರಿಸುವ ಮನೋಭಾವ ಬೆಳೆಯುತ್ತದೆ.

ಗೋಡೆ ಶಿವರಾಜ್ ಸಿರಿಗೇರಿ, ಬಳ್ಳಾರಿ

ಜಾತಿ ನಿಂದನೆ ತರವಲ್ಲ

ಜೆಡಿಎಸ್‌ನ ಪಂಚರತ್ನ ಯಾತ್ರೆಯನ್ನು ಟೀಕಿಸಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ವಿರುದ್ಧ ಶೃಂಗೇರಿ ಮಠ ಒಡೆದ, ಗಾಂಧಿಯ ಕೊಂದ ವಂಶದವರು ಎಂದು ಎಚ್.ಡಿ.ಕುಮಾರಸ್ವಾಮಿ ಅವರು ಮಾಡಿರುವ ವಾಗ್ದಾಳಿ (ಪ್ರ.ವಾ., ಫೆ. 6) ಬಾಲಿಶವಾಗಿದೆ. ಚುನಾವಣೆ ಹತ್ತಿರವಾದಂತೆಲ್ಲಾ ಮತದಾರನನ್ನು ಒಲಿಸಿಕೊಳ್ಳಲು ಹರಸಾಹಸ ಮಾಡುತ್ತಿರುವ ರಾಜಕಾರಣಿಗಳು ಮನಸೋ ಇಚ್ಛೆ ವಾಚಾಳಿತನ ಮೆರೆಯುತ್ತಿರುವುದು ಆರೋಗ್ಯಕರ ಪ್ರಜಾಪ್ರಭುತ್ವದ ಒಳ್ಳೆಯ ಬೆಳವಣಿಗೆ ಅಲ್ಲ.

ಕುಮಾರಸ್ವಾಮಿ ಅವರ ಮನೆಯಲ್ಲಿ ಎಚ್.ಡಿ.ದೇವೇಗೌಡರಿಂದ ಸೂರಜ್ ರೇವಣ್ಣ ಅವರವರೆಗೆ ನವ ರಾಜಕಾರಣಿಗಳಿದ್ದಾರೆ, ಅದಕ್ಕಾಗಿ ನವರತ್ನ ಯಾತ್ರೆ ಮಾಡುವುದು ಸೂಕ್ತ ಎಂದು ಜೋಶಿ ಅವರು ಹೇಳಿರುವುದರಲ್ಲಿ ತಪ್ಪೇನಿದೆ? ಕುಟುಂಬದ ಸದಸ್ಯರನ್ನು ರಾಜಕೀಯದ ಮುನ್ನೆಲೆಗೆ ತರುವುದಕ್ಕೂ ಒಂದು ಇತಿಮಿತಿ ಇರಬೇಕು. ಎಲ್ಲರೂ ಪಕ್ಷದ ಆಯಕಟ್ಟಿನ ಸ್ಥಳದಲ್ಲಿ ಕುಳಿತು ಅಧಿಕಾರ ಚಲಾಯಿಸಲು ಪ್ರಯತ್ನಿಸಿದರೆ ಉಳಿದವರ ಪಾಡೇನು? ವೈಯಕ್ತಿಕವಾಗಿ ಜಾತಿ ನಿಂದನೆ ಮಾಡುವುದು ಕುಮಾರಸ್ವಾಮಿ ಅವರ ಘನತೆಗೆ ಶೋಭೆ ತರುವುದಿಲ್ಲ.

ಎಚ್.ಎನ್. ಕಿರಣ್ ಕುಮಾರ್, ಹಳೇಹಳ್ಳಿ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬೀಳೋ ಮಾರುಕಟ್ಟೆಯಲ್ಲಿ ಕಾಸು ಮಾಡುವ ತಂತ್ರ

'ಶಾರ್ಟ್ ಸೆಲ್ಲಿಂಗ್'

ಷೇರುಪೇಟೆ ಮತ್ತು ಷೇರೊಂದರ ಮೌಲ್ಯ ಕುಸಿಯುವಾಗ ಲಾಭ ಮಾಡಿಕೊಳ್ಳುವ ವಹಿವಾಟನ್ನು 'ಶಾರ್ಟ್ ಸೆಲ್ಲಿಂಗ್' ಎನ್ನಲಾಗುತ್ತದೆ. ಅದಾನಿ ಸಮೂಹದ ಹೂಡಿಕೆ ಬಗ್ಗೆ ವರದಿ ಪ್ರಕಟಿಸಿದ್ದ ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್, ಅದಾನಿ ಸಮೂಹದ ಷೇರುಗಳನ್ನು ಶಾರ್ಟ್ ಸೆಲ್ ಮಾಡುವುದಾಗಿ ಹೇಳಿತ್ತು. ಈ ಸ್ವರೂಪದ ವಹಿವಾಟು ಭಾರತವೂ ಸೇರಿ, ವಿಶ್ವದ ಬಹುತೇಕ ಷೇರು ಮಾರುಕಟ್ಟೆಗಳಲ್ಲಿ ಕಾನೂನುಬದ್ಧ

ಪ್ರಜಾವಾಣಿ ವಾರ್ತೆ



ಅಮೆರಿಕದ ಶಾರ್ಟ್ ಸೆಲ್ಲಿಂಗ್, ಹೂಡಿಕೆ ಮತ್ತು ಸಂಶೋಧನಾ ಸಂಸ್ಥೆ 'ಹಿಂಡನ್‌ಬರ್ಗ್ ರಿಸರ್ಚ್', ಅದಾನಿ ಸಮೂಹವು ಅಕ್ರಮ ಎಸಗಿದೆ ಮತ್ತು ತನ್ನ ಮೌಲ್ಯವನ್ನು ಭಾರಿ ಪ್ರಮಾಣದಲ್ಲಿ ಕೃತಕವಾಗಿ ಉಬ್ಬಿಸಿದೆ ಎಂಬ ವರದಿಯನ್ನು ಪ್ರಕಟಿಸಿತ್ತು. ಅದಾನಿ ಸಮೂಹದ ಮುಂದೆ ಹಲವು ಮಹತ್ವದ ಪ್ರಶ್ನೆಗಳನ್ನು ಇಟ್ಟಿತ್ತು. ಅಮೆರಿಕ ಷೇರುಪೇಟೆಯಲ್ಲಿ ಇರುವ ಅದಾನಿ ಸಮೂಹದ ಷೇರುಗಳನ್ನು ಶಾರ್ಟ್ ಸೆಲ್ಲಿಂಗ್ ಮಾಡುವುದಾಗಿಯೂ ಹೇಳಿತ್ತು. ಇದರ ಪರಿಣಾಮವಾಗಿ ಅದಾನಿ ಸಮೂಹದ ಕಂಪನಿಗಳ ಷೇರು ಮೌಲ್ಯ ಅರ್ಧಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಕುಸಿದಿದೆ.

ಹಿಂಡನ್‌ಬರ್ಗ್ ವರದಿಗೆ ಅದಾನಿ ಸಮೂಹವು 400ಕ್ಕೂ ಹೆಚ್ಚು ಪುಟಗಳ ಪ್ರತಿಕ್ರಿಯೆ ನೀಡಿದೆ. ಆದರೆ, ಈ ಪ್ರತಿಕ್ರಿಯೆಯಲ್ಲಿ ತಾನು ಎತ್ತಿದ ಪ್ರಶ್ನೆಗಳಿಗೆ ಉತ್ತರ ಇಲ್ಲ ಎಂದು ಹಿಂಡನ್‌ಬರ್ಗ್ ಹೇಳಿದೆ.

ಹಿಂಡನ್‌ಬರ್ಗ್ ವರದಿ ಮತ್ತು ಅದಾನಿ ಪ್ರಕರಣದಿಂದಾಗಿ ಶಾರ್ಟ್ ಸೆಲ್ಲಿಂಗ್ ಎಂಬ ಷೇರುಪೇಟೆ ವಹಿವಾಟು ಕಾರ್ಯತಂತ್ರವು ಮುನ್ನೆಲೆಗೆ ಬಂದಿದೆ.

ಭಾರತದಲ್ಲಿ ಶಾರ್ಟ್ ಸೆಲ್ಲಿಂಗ್ ಕಾನೂನುಬಾಹಿರ ಅಲ್ಲ. ಆದರೆ, ನೇಕೆಡ್ ಶಾರ್ಟ್ ಸೆಲ್ಲಿಂಗ್ ಅಂದರೆ, ಷೇರು ತಮ್ಮ ಕೈಗೆ ಬರಲಿದೆ ಎಂಬುದು ಖಚಿತವಾಗಿ ಇಲ್ಲದೆಯೇ ಷೇರುಗಳನ್ನು ಮಾರಾಟ ಮಾಡುವುದಕ್ಕೆ ನಿಷೇಧ ಇದೆ.

2001ರಲ್ಲಿ ಭಾರತೀಯ ಷೇರುಪೇಟೆ ವಿನಿಮಯ ಮಂಡಳಿಯು (ಸೆಬಿ) ಶಾರ್ಟ್ ಸೆಲ್ಲಿಂಗ್ ಮೇಲೆ ನಿಷೇಧ ಹೇರಿತ್ತು.

ಬಾಂಬೆ ಷೇರುಪೇಟೆಯ (ಬಿಎಸ್‌ಇ) ಅಧ್ಯಕ್ಷರಾಗಿದ್ದ ಆನಂದ್ ರಾಠಿ ಅವರು ತಮಗೆ ಸಿಕ್ಕ ಗೌಪ್ಯ ಮಾಹಿತಿಯನ್ನು ಲಾಭ ಮಾಡಿಕೊಳ್ಳುವುದಕ್ಕೆ ಮತ್ತು ಷೇರುಪೇಟೆಯನ್ನು ಚಂಚಲವಾಗಿ ಇರಿಸುವುದಕ್ಕೆ ಬಳಸಿಕೊಂಡರು ಎಂಬ ಆರೋಪದ ಕಾರಣಕ್ಕೆ ಶಾರ್ಟ್ ಸೆಲ್ಲಿಂಗ್ ಮೇಲೆ ನಿಷೇಧ ಹೇರಲಾಗಿತ್ತು. ಬಳಿಕ, ರಾಠಿ ಅವರನ್ನು ಸೆಬಿ ದೋಷಮುಕ್ತಗೊಳಿಸಿತು.

ಶಾರ್ಟ್ ಸೆಲ್ಲಿಂಗ್ ಮೇಲಿನ ನಿಷೇಧ ಬಹುಕಾಲ ಇರಲಿಲ್ಲ. ಮ್ಯೂಚುವಲ್ ಫಂಡ್‌ಗಳೂ ಮತ್ತು ಸಾಂಸ್ಥಿಕ ಹೂಡಿಕೆದಾರರು ಕೂಡ ಶಾರ್ಟ್ ಸೆಲ್ಲಿಂಗ್ ಮಾಡಲು ಸೆಬಿಯು 2008ರಲ್ಲಿ ಅವಕಾಶ ಕೊಟ್ಟಿತು.

ಶಾರ್ಟ್ ಸೆಲ್ಲಿಂಗ್ ಮಾರ್ಗಸೂಚಿಗಳು: ಸಾಂಸ್ಥಿಕ ಹೂಡಿಕೆದಾರರಿಗೆ ಸೆಬಿಯು 2007ರ ಜುಲೈನಲ್ಲಿ ಮಾರ್ಗಸೂಚಿ ಪ್ರಕಟಿಸಿತು.

ಈ ಮಾರ್ಗಸೂಚಿ ಪ್ರಕಾರ, ಸಾಂಸ್ಥಿಕ ಹೂಡಿಕೆದಾರರು ತಾವು ನಡೆಸುತ್ತಿರುವ ವಹಿವಾಟು 'ಶಾರ್ಟ್ ಸೆಲ್ಲಿಂಗ್' ಹೌದೇ ಎಂಬುದನ್ನು ಪ್ರಾಮಾಣಿಕವಾಗಿ ಬಹಿರಂಗಪಡಿಸಬೇಕು. ಚಿಲ್ಲರೆ ಹೂಡಿಕೆದಾರರು ದಿನದ ವಹಿವಾಟಿನ ಮುಕ್ತಾಯಕ್ಕೆ ಮೊದಲು ಇದೇ ರೀತಿಯಲ್ಲಿ ತಮ್ಮ ವಹಿವಾಟಿನ ಬಗ್ಗೆ ತಿಳಿಸಬೇಕು. ಸಾಂಸ್ಥಿಕ ಹೂಡಿಕೆದಾರರು ಒಂದೇ ದಿನದ ವಹಿವಾಟಿನಲ್ಲಿ ಶಾರ್ಟ್ ಸೆಲ್ಲಿಂಗ್ ನಡೆಸುವಂತಿಲ್ಲ. ಚಿಲ್ಲರೆ ಹೂಡಿಕೆದಾರ ಮತ್ತು ಖರೀದಿದಾರರ ನಡುವಣ ಕರಾರು ಪೂರ್ಣಗೊಳ್ಳುವ ಹೊತ್ತಿಗೆ ಷೇರುಗಳನ್ನು ನೀಡಲು ಸಾಧ್ಯವಾಗದಿರುವುದನ್ನು 'ನೇಕೆಡ್ ಸೆಲ್ಲಿಂಗ್' ಎನ್ನುತ್ತಾರೆ. ಖರೀದಿ ಕರಾರು ಪೂರ್ಣಗೊಳ್ಳುವ ಹೊತ್ತಿಗೆ ಎಲ್ಲ ಹೂಡಿಕೆದಾರರು ಷೇರುಗಳನ್ನು ನೀಡಲು ಬದ್ಧರಾಗಿರಬೇಕು ಎಂಬುದು ಸೆಬಿಯ ನಿಯಮವಾಗಿದೆ.


ಕರಾರು ಪೂರ್ಣಗೊಳ್ಳುವ ಹೊತ್ತಿಗೆ ದಲ್ಲಾಳಿಗಳು ಷೇರು ನೀಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಷೇರುಪೇಟೆಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಯಾರೊಬ್ಬರೂ ಇದನ್ನು ಉಲ್ಲಂಘಿಸಲು ಸಾಧ್ಯವಾಗದಷ್ಟು ಈ ಕ್ರಮಗಳು ಕಠಿಣವಾಗಿರಬೇಕು ಎಂದು ಸೆಬಿ ಹೇಳಿದೆ.

2020ರ ಮಾರ್ಚ್‌ನಲ್ಲಿ ಕೂಡ ಒಂದು ಬಾರಿ ಶಾರ್ಟ್ ಸೆಲ್ಲಿಂಗ್ ಮೇಲೆ ನಿಷೇಧ ಹೇರಲಾಗಿತ್ತು. 2020ರಲ್ಲಿ ಸೃಷ್ಟಿಯಾದ ಬಿಕ್ಕಟ್ಟು ಇದಕ್ಕೆ ಕಾರಣ. ಶಾರ್ಟ್ ಸೆಲ್ಲಿಂಗ್‌ನಿಂದಾಗಿ ಮಾರುಕಟ್ಟೆಯು ಅಸ್ಥಿರಗೊಳ್ಳುತ್ತಿದೆ ಎಂದು ಜಗತ್ತಿನ ವಿವಿಧ ಭಾಗಗಳ ಹಣಕಾಸು ಪ್ರಾಧಿಕಾರಗಳು ಭಾವಿಸಿದ್ದರಿಂದ ನಿಷೇಧ ಹೇರಲಾಯಿತು. ಈ ನಿಷೇಧದಿಂದಾಗಿ ಷೇರುಪೇಟೆಯು ನ್ಯಾಯಸಮ್ಮತ, ಮುಕ್ತ, ದಕ್ಷ ಮತ್ತು ವ್ಯವಸ್ಥಿತ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಾಧ್ಯ ಎಂದು ನಿಯಂತ್ರಣ ಸಂಸ್ಥೆಗಳು ಹೇಳಿದ್ದವು. ಆದರೆ, 2020ರ ಅಕ್ಟೋಬರ್‌ನಲ್ಲಿ ಶಾರ್ಟ್ ಸೆಲ್ಲಿಂಗ್ ಮೇಲಿನ ನಿಷೇಧವನ್ನು ತೆರವು ಮಾಡಲಾಯಿತು.

ಶಾರ್ಟ್ ಸೆಲ್ಲಿಂಗ್ ಕಾರ್ಯತಂತ್ರವು ವರ್ತಕರಿಗೆ ದೊಡ್ಡ ಮೊತ್ತದ ಲಾಭ ತಂದು ಕೊಡುತ್ತದೆ. ಆದರೆ ಷೇರುಪೇಟೆಯಲ್ಲಿ ಸಮಸ್ಯೆಗೆ ಕಾರಣವಾಗಬಹುದು ಎಂಬುದು ಶಾರ್ಟ್ ಸೆಲ್ಲಿಂಗ್‌ನ ಟೀಕಾಕಾರರ ಆಕ್ಷೇಪ.

'ಶಾರ್ಟ್ ಸೆಲ್ಲಿಂಗ್'


ಯಾವುದೇ ಷೇರು ಕುಸಿಯುತ್ತದೆ ಎಂಬುದು ತಾಂತ್ರಿಕ ವಿಶ್ಲೇಷಣೆಯಲ್ಲಿ ಗೊತ್ತಾದಾಗ, ಟ್ರೇಡರ್ ಅದನ್ನು 'ಶಾರ್ಟ್ ಸೆಲ್' ಮಾಡಲು ನಿರ್ಧರಿಸುತ್ತಾನೆ. ಈ ವಹಿವಾಟಿನಲ್ಲಿ ಷೇರುಗಳನ್ನು ಖರೀದಿಸುವ ಮುನ್ನವೇ ಮಾರಾಟ ಮಾಡಲಾಗುತ್ತದೆ. ಇದು ಅತ್ಯಂತ ಸಂಕೀರ್ಣವಾದ ಮತ್ತು ನಷ್ಟದ ಸಾಧ್ಯತೆ ಅತ್ಯಧಿಕವಾಗಿರುವ ವಹಿವಾಟು ವಿಧಾನ. ಶಾರ್ಟ್ ಸೆಲ್ಲಿಂಗ್ ವಹಿವಾಟು ಈ ರೀತಿ ನಡೆಯುತ್ತದೆ



- ಶಾರ್ಟ್ ಸೆಲ್ಲಿಂಗ್ ವಹಿವಾಟು ನಿಗದಿತ ಅವಧಿಯ 'ಕಾಂಟ್ರಾಕ್ಟ್'ಗಳ ಮೂಲಕ ನಡೆಯುತ್ತದೆ. ಶಾರ್ಟ್ ಸೆಲ್ಲಿಂಗ್ ವಹಿವಾಟಿನ ವೇಳೆ ಷೇರುಗಳನ್ನು ಮಾರಾಟ ಮಾಡುವಾಗ, ಅವುಗಳನ್ನು ಮತ್ತೆ ಖರೀದಿಸುವ ಷರತ್ತಿನೊಂದಿಗೇ ವಹಿವಾಟು ಆರಂಭಿಸಲಾಗಿರುತ್ತದೆ. ಟ್ರೇಡರ್ ಅವನ್ನು ಮರುಖರೀದಿಸದೇ ಇದ್ದರೆ, ನಿಗದಿತ ಅವಧಿಯೊಳಗೆ ಸ್ವಯಂಚಾಲಿತವಾಗಿ ಷೇರುಗಳ ಖರೀದಿ ನಡೆಯುತ್ತದೆ. ಈ ಅವಧಿಯನ್ನು ವಿಸ್ತರಿಸಬೇಕೆಂದರೆ, ಟ್ರೇಡರ್ ಹೆಚ್ಚುವರಿ ಶುಲ್ಕಗಳನ್ನು ಪಾವತಿಸಬೇಕಾಗುತ್ತದೆ
- ಭಾರತದಲ್ಲಿ ಶಾರ್ಟ್ ಸೆಲ್ಲಿಂಗ್‌ಗೆ ಕಠಿಣ ನಿಯಮಗಳಿವೆ. ಈಗ ಭಾರತದ ಷೇರು ಮಾರುಕಟ್ಟೆಯ 'ಫ್ಯೂಚರ್ಸ್ ಮತ್ತು ಆಪ್ಷನ್ಸ್' ಮಾರುಕಟ್ಟೆಯಲ್ಲಷ್ಟೇ ಶಾರ್ಟ್ ಸೆಲ್ಲಿಂಗ್‌ಗೆ ಅವಕಾಶವಿದೆ

'ಬೈ ಅಂಡ್ ಹೋಲ್ಡ್'

- ಷೇರಿನ ಮೌಲ್ಯ ಏರುಗತಿಯಲ್ಲಿ ಇರುವಾಗ ಷೇರನ್ನು ಖರೀದಿಸಿ, ಅದು ಭವಿಷ್ಯದಲ್ಲಿ ಮತ್ತಷ್ಟು ಏರುವವರೆಗೆ ಕಾಯುವುದು. ಇದನ್ನು 'ಬೈ ಅಂಡ್ ಹೋಲ್ಡ್' ಎಂದು ಕರೆಯಲಾಗುತ್ತದೆ. 'ಪೊಸಿಷನ್' ಎಂದೂ ಕರೆಯಲಾಗುತ್ತದೆ. ಷೇರನ್ನು ಖರೀದಿಸಿ, ಅದನ್ನು ಮತ್ತೆ ಮಾರಾಟ ಮಾಡುವವರೆಗಿನ ಅವಧಿ ದೀರ್ಘವಾಗಿರುತ್ತದೆ. ಅದು ಕೆಲವು ವಾರಗಳಿಂದ ಹಿಡಿದು, ಹಲವು ವರ್ಷಗಳವರೆಗೆ ಹೋಗಬಹುದು
- ಷೇರು ಮಾರುಕಟ್ಟೆಯಲ್ಲಿ ವಹಿವಾಟು ನಡೆಸುವ 'ಟ್ರೇಡರ್'ಗಳಲ್ಲಿ ಬಹುತೇಕ ಮಂದಿ ಈ ಸ್ವರೂಪದ ವಹಿವಾಟನ್ನೇ ನಡೆಸುತ್ತಾರೆ. ಚಿಲ್ಲರೆ ಹೂಡಿಕೆದಾರರಲ್ಲೂ ಬಹುತೇಕ ಮಂದಿ ಈ ಸ್ವರೂಪದ ವಹಿವಾಟಿನಲ್ಲೇ ಹೆಚ್ಚು ಹೂಡಿಕೆ ಮಾಡುತ್ತಾರೆ
- ಕೂಲಂಕಷವಾಗಿ ವಿಶ್ಲೇಷಿಸಿ ಹೂಡಿಕೆ ಮಾಡಿದಾಗ, ಈ ಸ್ವರೂಪದ ಹೂಡಿಕೆಯಲ್ಲಿ ನಷ್ಟದ ಸಾಧ್ಯತೆಗಳು ಕಡಿಮೆ. ಷೇರುಗಳ ಬೆಲೆಯಲ್ಲಿ ಏರಿಳಿತವಿದ್ದರೂ ದೀರ್ಘಾವಧಿಯಲ್ಲಿ ಲಾಭದ ಸಾಧ್ಯತೆ ಅತ್ಯಧಿಕವಾಗಿರುತ್ತವೆ




- ಷೇರಿನ ಬೆಲೆ ಏರಿಕೆಯಾಗಲಿ ಎಂದು ಟ್ರೇಡರ್ ಹಲವು ತಿಂಗಳಿನಿಂದ ಎರಡು–ಮೂರು ವರ್ಷಗಳವರೆಗೆ ಕಾಯುವುದಾದರೆ, ಅದನ್ನು 'ಶಾರ್ಟ್ ಪೊಸಿಷನ್' ಎಂದು ಕರೆಯುತ್ತಾರೆ.
- ಟ್ರೇಡರ್ ಒಮ್ಮೆ ಖರೀದಿಸಿದ ಷೇರನ್ನು ಗರಿಷ್ಠ ಐದು ವರ್ಷಗಳವರೆಗೆ ಕಾಯ್ದುಕೊಂಡಿದ್ದು, ಆನಂತರ ಮಾರಾಟ ಮಾಡಿದರೆ ಅದನ್ನು 'ಮೀಡಿಯಂ ಪೊಸಿಷನ್' ಎಂದು ಕರೆಯಲಾಗುತ್ತದೆ
- ಟ್ರೇಡರ್ ಒಮ್ಮೆ ಖರೀದಿಸಿದ ಷೇರನ್ನು ಐದು ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯವರೆಗೆ ಕಾಯ್ದಿಟ್ಟುಕೊಂಡು, ಆನಂತರ ಮಾರಾಟ ಮಾಡಿದರೆ ಅದನ್ನು 'ಲಾಂಗ್ ಪೊಸಿಷನ್' ಎಂದು ಕರೆಯಲಾಗುತ್ತದೆ

ಆಧಾರ: ಸೆಬಿ, ಪಿಟಿಐ | ಪ್ರಜಾವಾಣಿ ಗ್ರಾಫಿಕ್ಸ್

'ಎಲೆಕ್ಟ್ರಿಷಿಯನ್' ಶರಣ್!

ಸ್ಯಾಂಡಲ್‌ವುಡ್‌ನ 'ಅಧ್ಯಕ್ಷ' ಶರಣ್ ಪ್ರತಿಯೊಂದು ಸಿನಿಮಾದಲ್ಲೂ ವಿಭಿನ್ನವಾದ ಪಾತ್ರಗಳ ಮೂಲಕ ಪ್ರೇಕ್ಷಕರ ಎದುರಿಗೆ ಬರುವ ನಟ. 'ಗುರು ಶಿಷ್ಯರು' ಸಿನಿಮಾದಲ್ಲಿ ಮೇಷ್ಟ್ರಾಗಿ ಬಂದ ಶರಣ್, ಇದೀಗ ಎಲೆಕ್ಟ್ರಿಷಿಯನ್ ಆಗಿ ತೆರೆಯಲ್ಲಿ ಪವರ್ ತೋರಿಸಲು ಬರುತ್ತಿದ್ದಾರೆ.

ಶರಣ್ ಅವರ ಜನ್ಮದಿನದಂದೇ(ಫೆ.6) ಹೊಸ ಪ್ರಾಜೆಕ್ಟ್ ಸೆಟ್ಟೇರಿದ್ದು, ಈ ಚಿತ್ರಕ್ಕೆ 'ಪುಗ್ಸಟ್ಟೆ ಲೈಫು ಪುರುಸೊತ್ತೇ ಇಲ್ಲ' ಸಿನಿಮಾ ಖ್ಯಾತಿಯ ಅರವಿಂದ್ ಕುಪ್ಲಿಕರ್ ನಿರ್ದೇಶನ ಮಾಡಲಿದ್ದಾರೆ. ಡಾರ್ಕ್ ಹ್ಯೂಮರ್ ಸಬ್ಜೆಕ್ಟ್ ಒಳಗೊಂಡ ಈ ಚಿತ್ರದಲ್ಲಿ ಶರಣ್ ಅವರ ಪಾತ್ರ ಹಿಂದಿನ ಸಿನಿಮಾಗಳಿಗಿಂತ ವಿಭಿನ್ನವಾಗಿರಲಿದೆ. ಬಾಗಲಕೋಟೆಯಲ್ಲಿ ನಡೆಯುವ ಕಥೆಯನ್ನು ಚಿತ್ರ ಒಳಗೊಂಡಿದ್ದು, ಉತ್ತರ ಕರ್ನಾಟಕ ಶೈಲಿ ಭಾಷೆಯಲ್ಲಿ ಶರಣ್ ಗಮನ ಸೆಳೆಯಲಿದ್ದಾರೆ ಎಂದಿದ್ದಾರೆ ಅರವಿಂದ್.




ಶ್ರೀಧರ ಕೃಪ ಕಂಬೈನ್ಸ್ ಬ್ಯಾನರ್‌ನಡಿ ನಿರ್ಮಾಣವಾಗುತ್ತಿರುವ ಚಿತ್ರ ಇದಾಗಿದ್ದು, ಬಿ.ಬಸವರಾಜ್ ಹಾಗೂ ಶ್ರೀಧರ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಅರವಿಂದ್ ಕುಪ್ಲಿಕರ್ ನಿರ್ದೇಶನ ಮಾಡುತ್ತಿದ್ದಾರೆ. ಸಂಚಾರಿ ವಿಜಯ್ ಅಭಿನಯದ 'ಪುಗ್ಸಟ್ಟೆ ಲೈಫು ಪುರುಸೊತ್ತೇ ಇಲ್ಲ' ಸಿನಿಮಾ ನಂತರ ಅರವಿಂದ್ ಆ್ಯಕ್ಷನ್ ಕಟ್ ಹೇಳುತ್ತಿರುವ ಎರಡನೇ ಸಿನಿಮಾವಿದು. ಅಚ್ಯುತ್ ಕುಮಾರ್, ರಂಗಾಯಣ ರಘು ಸೇರಿದಂತೆ ಹಲವು ಕಲಾವಿದರು ಚಿತ್ರದ ತಾರಾಬಳಗದಲ್ಲಿ ಇರಲಿದ್ದಾರೆ. ಫೆ.20ರಿಂದ ಚಿತ್ರೀಕರಣ ಆರಂಭವಾಗಲಿದೆ. ಚಿತ್ರದ ಶೀರ್ಷಿಕೆ ಹಾಗೂ ಸಿನಿಮಾ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಶೀಘ್ರದಲ್ಲೇ ಹಂಚಿಕೊಳ್ಳುವುದಾಗಿ ಚಿತ್ರತಂಡ ತಿಳಿಸಿದೆ.

ದೊಡ್ಡ ಮೊತ್ತಕ್ಕೆ 'ಗೌಳಿ' ಹಕ್ಕು

ಅದ್ದೂರಿಯಾದ ಮೇಕಿಂಗ್ ಹಾಗೂ ಟೈಟಲ್ ಟೀಸರ್ ಮೂಲಕವೇ ಸದ್ದು ಮಾಡಿರುವ ನೈಜ ಘಟನೆ ಆಧಾರಿತ 'ಗೌಳಿ' ಸಿನಿಮಾ, ರಿಲೀಸ್‌ಗೆ ಸಜ್ಜಾಗುತ್ತಿದೆ. ನಟ ಶ್ರೀನಗರ ಕಿಟ್ಟಿ ವಿಭಿನ್ನವಾಗಿ ಕಾಣಿಸಿಕೊಂಡಿರುವ ಈ ಚಿತ್ರದ ಟ್ರೇಲರ್ ಶೀಘ್ರದಲ್ಲೇ ಬಿಡುಗಡೆಯಾಗಲಿದೆ.

ಈ ಸಂದರ್ಭದಲ್ಲೇ ಚಿತ್ರತಂಡವು ಸುದ್ದಿಯೊಂದನ್ನು ಹಂಚಿಕೊಂಡಿದೆ. ಚಿತ್ರದ ತೆಲುಗು ಡಬ್ಬಿಂಗ್ ಹಕ್ಕು ಹಾಗೂ ಚಿತ್ರಮಂದಿರಗಳ ಹಕ್ಕು ದೊಡ್ಡ ಮೊತ್ತಕ್ಕೆ ಮಾರಾಟವಾಗಿದೆ. ಈ ವಿಚಾರವನ್ನು ಖುಷಿಯಿಂದ ಹಂಚಿಕೊಂಡಿರುವ ನಿರ್ಮಾಪಕ ರಘು ಸಿಂಗಂ ಸದ್ಯದಲ್ಲೇ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭವನ್ನು ಅದ್ದೂರಿಯಾಗಿ ಹಮ್ಮಿಕೊಳ್ಳುವುದಾಗಿ ತಿಳಿಸಿದ್ದಾರೆ. ಟ್ರೇಲರ್ ರಿಲೀಸ್ ಸಮಯದಲ್ಲೇ ಚಿತ್ರದ ಬಿಡುಗಡೆ ದಿನಾಂಕವನ್ನೂ ಘೋಷಿಸುತ್ತೇವೆ ಎಂದಿದ್ದಾರೆ ರಘು.



ಸೂರಾ ಎಸ್. ನಿರ್ದೇಶನದ ಈ ಚಿತ್ರದಲ್ಲಿ ಶ್ರೀನಗರ ಕಿಟ್ಟಿ ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಪೋಸ್ಟರ್‌ನಲ್ಲಿ ಈ ರೀತಿ ಕಾಣಿಸಿಕೊಂಡರೂ, ಕಥಾಹಂದರದಲ್ಲಿ ಕಿಟ್ಟಿ ಫ್ಯಾಮಿಲಿ ಮ್ಯಾನ್ ಪಾತ್ರದಲ್ಲಿದ್ದಾರೆ. ಚಿತ್ರದ ನಾಯಕಿ ಪಾವನಾ ಗೌಡ ಮೊದಲ ಬಾರಿಗೆ ಗ್ರಾಮೀಣ ಮಹಿಳೆಯಾಗಿ ಇಲ್ಲಿ ಕಾಣಿಸಿಕೊಂಡಿದ್ದಾರೆ. ರಂಗಾಯಣ ರಘು, ಯಶ್ ಶೆಟ್ಟಿ, ಶರತ್ ಲೋಹಿತಾಶ್ವ, ಕಾಕ್ರೋಚ್ ಸುಧಿ, ಗೋಪಾಲಕೃಷ್ಣ ದೇಶಪಾಂಡೆ ಹೀಗೆ ಹತ್ತಾರು ಕಲಾವಿದರು ವಿಭಿನ್ನವಾದ ಪಾತ್ರಗಳಲ್ಲಿ ಇಲ್ಲಿ ಕಾಣಿಸಿಕೊಂಡಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಯುಎಇ ಪ್ರಧಾನಿ ಹಾಗೂ ದುಬೈನ ದೊರೆ ಶೇಖ್ ಮೊಹಮ್ಮದ್ ಬಿನ್ ರಶೀದ್ ಅವರು 'ಅಲ್ ಮಿನ್‌ಹಾದ್' ನಗರದ ಹೆಸರನ್ನು 'ಹಿಂದ್ ಸಿಟಿ' ಎಂಬುದಾಗಿ ಮರುನಾಮಕರಣ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರ ಹಾಗೂ ಭಾರತವು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವುದೇ ಇದಕ್ಕೆ ಕಾರಣ ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ. ಮಾನವತೆಗೆ ಭಾರತ ದೇಶ ಹಾಗೂ ಹಿಂದೂಗಳು ನೀಡಿರುವ ಕೊಡುಗೆಯನ್ನು ಗೌರವಿಸಿ, ದುಬೈ ದೊರೆ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಬಿಜೆಪಿ ವಕ್ತಾರ ಆರ್.ಪಿ. ಸಿಂಗ್ ಅವರು ಟ್ವೀಟ್ ಮಾಡಿದ್ದಾರೆ. ಆದರೆ, ಯುಎಇ ಸರ್ಕಾರದ ಆದೇಶದಲ್ಲಿ ಭಾರತ ಅಥವಾ ಭಾರತೀಯರ ಉಲ್ಲೇಖ ಇಲ್ಲ.



ಪ್ರಧಾನಿ ಮೋದಿ, ಭಾರತ ಹಾಗೂ ಭಾರತೀಯರನ್ನು ಉದ್ದೇಶಿಸಿ ಮರುನಾಮಕರಣ ಮಾಡಿಲ್ಲ ಎಂದು 'ಪಿಟಿಐ' ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಯುಎಇ ಸರ್ಕಾರವು ಜನವರಿ 29ರಂದು ಹೊರಡಿಸಿರುವ ಮರುನಾಮಕರಣ ಆದೇಶ ಸುದ್ದಿಯು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಯಾವ ಮಾಧ್ಯಮವೂ ಭಾರತ, ಹಿಂದೂಗಳು, ಪ್ರಧಾನಿ ಮೋದಿ ಅವರ ಹೆಸರನ್ನು ವರದಿಯಲ್ಲಿ ಪ್ರಸ್ತಾಪಿಸಿಲ್ಲ. 'ಹಿಂದ್' ಪದಕ್ಕೆ ಅರೇಬಿಕ್‌ನಲ್ಲಿ ಬೇರೆ ಬೇರೆ ಅರ್ಥಗಳಿವೆ. ಶೇಖ್ ಅವರ ಹಿರಿಯ ಪತ್ನಿಯ ಹೆಸರಿನಲ್ಲೂ 'ಹಿಂದ್' ಪದವಿದೆ. ಮರುನಾಮಕರಣಕ್ಕೆ ನಿಖರ ಕಾರಣವನ್ನು ಯುಎಇ ತಿಳಿಸಿಲ್ಲ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಭಾರತದ ಜೊತೆ ಇದನ್ನು ತಳಕು ಹಾಕುವುದು ದಾರಿತಪ್ಪಿಸುವ ಚರ್ಚೆ ಎಂದು ಪಿಟಿಐ ಅಭಿಪ್ರಾಯಪಟ್ಟಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಆರೋಗ್ಯ ಭಾಗ್ಯ


ಆರೋಗ್ಯಭಾಗ್ಯವನು ಮನಕೆ ತನುಗೆಂತಂತೆ |
ಹಾರಯಿಸುವೊಡೆ ಹಲವು ಸರಳ ನೀತಿಗಳ ||
ಧಾರಯಿಸು ನೆನಪಿನಲಿ ನುಡಿಯಲ್ಲಿ ನಡತೆಯಲಿ |
ಪಾರಾಗು ಸುಳಿಯಿಂದ – ಮಂಕುತಿಮ್ಮ || 816 ||

ಪದ-ಅರ್ಥ: ತನುಗೆಂತಂತೆ = ತನುಗೆ(ದೇಹಕ್ಕೆ-) + ಎಂತೋ + ಅಂತೆ, ಹಾರಯಿಸುವೊಡೆ = ಬಯಸುವುದಾದರೆ, ಧಾರಯಿಸು = ನಡೆಸು, ಧರಿಸು.

ವಾಚ್ಯಾರ್ಥ: ದೇಹಕ್ಕೆ ಆರೋಗ್ಯ ಭಾಗ್ಯವನ್ನು ಪಡೆಯುವುದಾದರೆ ಹಲವು ಸರಳ ನೀತಿಗಳನ್ನು ಪಾಲಿಸುವಂತೆ ಮನಸ್ಸಿನ ಆರೋಗ್ಯದ ಭಾಗ್ಯಕ್ಕೂ ನುಡಿಯಲ್ಲಿ, ನಡತೆಯಲ್ಲಿ ಸರಳ ನೀತಿಗಳನ್ನು ಪಾಲಿಸಿ ಬದುಕಿನ ಸುಳಿಯಿಂದ ಪಾರಾಗು.

ವಿವರಣೆ: ಆರೋಗ್ಯವೆಂದರೆ, ಕಾಯಿಲೆ ರಹಿತವಾಗಿರುವುದು ಎಂಬ ನಂಬಿಕೆ ಬಹಳಷ್ಟು ಜನರಲ್ಲಿ ಇದೆ. ಆದರೆ ನಮ್ಮ ಸರ್ವತೋಮುಖ ಆರೋಗ್ಯದಲ್ಲಿ ಮಾನಸಿಕ ಆರೋಗ್ಯವೂ ಬಹಳ ಮುಖ್ಯವಾದದ್ದು. ದೇಹಕ್ಕೆ ನೀಡಿದ ವ್ಯಾಯಾಮ, ದೈಹಿಕ ಚಟುವಟಿಕೆಗಳಿಂದ ಮಾನಸಿಕ ಆರೋಗ್ಯಕ್ಕೂ ಪ್ರಯೋಜನವಾಗುತ್ತದೆಂಬುದು ಸತ್ಯ. ಆದರೆ ಕೇವಲ ಅದೇ ಮಾತ್ರ ಸಾಲದು. ಮನಸ್ಸಿನ ಆರೋಗ್ಯಕ್ಕೂ ಕೆಲವು ಸರಳ ನೀತಿಗಳನ್ನು ಅನುಸರಿಸಬೇಕಾಗುತ್ತದೆ. ಮನಸ್ಸು ಒಂದು ರೀತಿಯಲ್ಲಿ ಜಗಳಗಂಟ ಬಂಡಾಯಕೋರ. ಯಾವುದನ್ನು ಬೇಡವೆಂದು ತೀರ್ಮಾನಿಸುತ್ತೀರೋ, ಅದನ್ನೇ ಬೇಡುತ್ತದೆ. ಅದನ್ನೇ ಬೆಂಬತ್ತಿ ಹೋಗುತ್ತದೆ. ಸುರೆ ಕುಡಿಯುವುದು, ತಂಬಾಕು ಸೇವಿಸುವುದು ದೇಹದ ಆರೋಗ್ಯಕ್ಕೆ ಹಾನಿಕರ ಎಂದು ಯಾರಿಗೆ ಗೊತ್ತಿಲ್ಲ? ಆದರೆ ಬಹುಜನರು ಅದಕ್ಕೆ ದಾಸರಾಗಿರುವುದು ಮನಸ್ಸಿನ ಸೆಳೆತದಿಂದಾಗಿ. ಅದಕ್ಕೇ ಬದುಕಿನ ಸಫಲತೆಗೂ, ವಿಫಲತೆಗೂ ಮನಸ್ಸೇ ಕಾರಣ. ಮನಸ್ಸಿನ ಆರೋಗ್ಯಕ್ಕೆ ಅನೇಕ ನೀತಿ, ವಿಧಾನಗಳಿವೆ. ಅವುಗಳಲ್ಲಿ ಕೆಲವು, ಪ್ರಾಣಾಯಾಮ, ಧ್ಯಾನ, ಜಪ ಇತ್ಯಾದಿಗಳು. ಈ ಕ್ರಿಯಾಶೀಲವಾದ ಪ್ರಪಂಚದಲ್ಲಿ ನಿಷ್ಕ್ರಿಯವಾದ ಸ್ಥಿತಿ ಎನ್ನುವುದು ಇಲ್ಲವೇ ಇಲ್ಲ. ಆದರೂ ಮನಸ್ಸು ಶಾಂತ, ನೀರವ ಸ್ಥಿತಿಗಾಗಿ ತವಕಿಸುತ್ತದೆ. ಸ್ವಲ್ಪ ಹೊತ್ತಾದರೂ ಆ ನಿಸ್ಪಂದ ಸ್ಥಿತಿಯಲ್ಲಿ ಇರಬಯಸುತ್ತದೆ. ಜಾಗ್ರತಾವಸ್ಥೆಯಲ್ಲೇ, ಪ್ರಯತ್ನಪೂರ್ವಕವಾಗಿ ಆಲೋಚನಾ ವೃತ್ತಿಗಳನ್ನೆಲ್ಲ ಹಂತ ಹಂತವಾಗಿ ಕಡಿಮೆ ಮಾಡುತ್ತ, ಕೊನೆಯಲ್ಲಿ ಒಂದೇ ವೃತ್ತಿಯು ಮನಸ್ಸಿನಲ್ಲಿ ಉಳಿಯುವಂತೆ ಮಾಡುವುದೇ ಧ್ಯಾನ. ವೃತ್ತಿ ಎಂದರೆ ಅಲೆ. ಅಲೆ ಯಾವಾಗಲೂ ಸ್ಥಿರವಾಗಿರುವುದಿಲ್ಲ. ಎದ್ದು, ಎದ್ದು ಬೀಳುತ್ತದೆ. ಧ್ಯಾನದಲ್ಲೂ ವೃತ್ತಿಗಳು ಏಳುತ್ತಲೇ ಇರುತ್ತವೆ. ಆದರೆ ಎಲ್ಲ ವೃತ್ತಿಗಳ ವಿಷಯವೂ ಒಂದೇ ಆಗಿರುತ್ತದೆ. ಶ್ರೀರಾಮಕೃಷ್ಣರು ಧ್ಯಾನಾವಸ್ಥೆಯ ಬಗ್ಗೆ ಒಂದು ಸುಂದರವಾದ ಉದಾಹರಣೆಯನ್ನು ನೀಡುತ್ತಾರೆ. ಸೂಜಿಗೆ ದಾರವನ್ನು ಪೋಣಿಸುವಾಗ, ದಾರದ ತುದಿಗೆ ನೀರು ಹಚ್ಚಿಯೋ, ಬೆರಳುಗಳಿಂದ ತಿರುಪಿಯೋ, ಚೂಪಾಗಿ ಮಾಡಿ ಆನಂತರ ಸೂಜಿಯ ದಾರವನ್ನು ರಂಧ್ರದಲ್ಲಿ ಪೋಣಿಸುತ್ತೇವೆ. ದಾರದ ಎಳೆಗಳು ಹರಡಿಕೊಂಡಿದ್ದರೆ ದಾರವನ್ನು ರಂಧ್ರದಲ್ಲಿ ಪೋಣಿಸುವುದು ಸಾಧ್ಯವಿಲ್ಲ. ಹಾಗೆಯೇ ಮನಸ್ಸಿನ ಎಲ್ಲ ಶಕ್ತಿಗಳು ಬೇರೆ ಬೇರೆ ಆಲೋಚನೆಗಳಲ್ಲಿ ಹರಡಿಹೋಗಿದ್ದರೆ ಏಕಾಗ್ರತೆ ಸಾಧ್ಯವಿಲ್ಲ. ಕಗ್ಗ ಹೇಳುತ್ತದೆ, ದೇಹಾರೋಗ್ಯಕ್ಕೆ ವ್ಯಾಯಾಮಗಳನ್ನು ಮಾಡುವಂತೆ ಮನಸ್ಸಿನ ಆರೋಗ್ಯಕ್ಕೂ ನಿನ್ನ ಮಾತಿನಲ್ಲಿ, ನಡೆಯಲ್ಲಿ ಕೆಲವು ನೀತಿಗಳನ್ನು ಅನುಸರಿಸಬೇಕಾಗುತ್ತದೆ. ಹೀಗೆ ದೇಹ, ಮನಸ್ಸುಗಳನ್ನು ಹದವಾಗಿ ಇಟ್ಟುಕೊಂಡಾಗ ಬದುಕು ಸೃಷ್ಟಿಸುವ ಸುಳಿಗಳಿಂದ ಪಾರಾಗಬಹುದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಫೆಬ್ರುವರಿ 7, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣ ದ್ವಿತೀಯ ಗಂ. 28-29 ನಕ್ಷತ್ರ: ಮಘಾ ಗಂ. 17-45 ಯೋಗ: ಶೋಭನ ಗಂ. 16-02, ಕರಣ: ತೈತಿಲ ಗಂ. 15-26, ಮಕರ ಮಾಸದ 24 ನೇ ದಿನ.
ರಾಹುಕಾಲ : ಮಧ್ಯಾಹ್ನ 03-00 –04-30, ಸೂರ್ಯೋದಯ : 07-00 ಸೂರ್ಯಾಸ್ತ : 06-30, ಮುಸ್ಲಿಂ ದಿನಾಂಕ : 15 ರಜಬ್
ಅದೃಷ್ಟ ಸಂಖ್ಯೆ : 3, 11

ಮೇಷ: ತುಂಬಾ ಭಾವುಕರಾಗಿರುವಿರಿ. ತಂದೆ ತಾಯಿಯ ಆರೋಗ್ಯದಲ್ಲಿ ಅಧಿಕವಾದ ಗಮನವಿರಲಿ. ಮನೆಯಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಹೊಣೆಗಾರಿಕೆ ನಿಮ್ಮದಾಗಿರುತ್ತದೆ. ಅದನ್ನು ಸಮರ್ಪಕವಾಗಿ ನಿರ್ವಹಿಸುವಿರಿ.

ವೃಷಭ: ಭವಿಷ್ಯದ ಬಗ್ಗೆ ಅನಗತ್ಯ ಚಿಂತಿಸುವುದನ್ನು ಬಿಟ್ಟು ಈಗಿನ ಅಗತ್ಯಗಳನ್ನು ಪೂರೈಸಿಕೊಳ್ಳುವ ಕಡೆಗೆ ಗ ಮನಹರಿಸಿ. ಪೋಲಿಸ್ ವರಿಷ್ಠರಿಗೆ ವರ್ಗಾವಣೆಯ ಸಂಭವವಿದೆ. ತೀರ್ಥಯಾತ್ರೆಗೆ ಹೋಗುವ ಮನಸ್ಸಾಗುವುದು.

ಮಿಥುನ: ಕಾರ್ಯವೈಖರಿಗೆ ಶ್ಲಾಘನೆ ಸಲ್ಲಲಿದೆ. ಆದಾಯದಲ್ಲಿ ಅಭಿವೃದ್ಧಿ ತೋರಿಬಂದು ಧಾರ್ಮಿಕ ಅಥವಾ ಪುಣ್ಯಕಾರ್ಯಗಳನ್ನು ಮಾಡುವುದರ ಬಗ್ಗೆ ಮನಸ್ಸಾಗುವುದು. ವಿವಾಹದ ಪ್ರಯತ್ನಗಳು ಯಶಸ್ಸನ್ನು ಹೊಂದಲಿದೆ.

ಕರ್ಕಾಟಕ: ನಿರೀಕ್ಷೆಗಳು ಹಿತ ಮತ್ತು ಮಿತವಾಗಿದ್ದರೆ ಕೆಲಸ ಸುಸೂತ್ರವಾಗಿ ನೆರವೇರುವುದು. ಕೌಟುಂಬಿಕ ವಿಚಾರಗಳತ್ತ ಸಂಪೂರ್ಣ ಗಮನ ನೀಡಬೇಕಾಗುತ್ತದೆ. ಕಟ್ಟಡ ನಿರ್ಮಾಣ ಸಾಮಗ್ರಿ ಖರೀದಿಗಾಗಿ ಖರ್ಚು ಉಂಟಾಗುವುದು.

ಸಿಂಹ: ವಿದ್ಯಾರ್ಥಿಗಳಿಗೆ ಫಲಿತಾಂಶ ಸಂತಸ ತರಲಿದೆ. ಈ ದಿನ ಆಕಸ್ಮಿಕವಾಗಿ ಪ್ರತಿಭೆ ಬೆಳಕಿಗೆ ಬರಲಿದೆ. ಕ್ರೀಡಾಸಕ್ತರಿಗೆ ಉತ್ತಮವಾದ ಸಮಯ ಮತ್ತು ಅವಕಾಶ ಸಿಗಲಿದೆ. ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಗೊಳ್ಳುವಿರಿ.

ಕನ್ಯಾ: ಆಲೋಚನೆಯನ್ನು ಎಲ್ಲರೊಂದಿಗೆ ಹಂಚಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳುವಿರಿ. ಯೋಜನೆಯ ಮೇಲೆ ಹಿಡಿತ ಸಾಧಿಸಲು ಸ್ನೇಹಿತರ ಬೆಂಬಲ ಸಕಾಲದಲ್ಲಿ ಸಿಗಲಿದೆ. ಸಣ್ಣಪುಟ್ಟ ಸಾಲದ ಹಣ ಹಿಂದಿರುಗುವುದು.

ತುಲಾ: ವೈದ್ಯರಿಗೆ ತುರ್ತು ಕೆಲಸಗಳಿಂದ ದಿನದ ಅಧಿಕ ಸಮಯ ಬಿಡುವಿಲ್ಲದಂತಾಗುವುದು. ತಾಂತ್ರಿಕ ವಿದ್ಯಾರ್ಥಿಗಳಿಗೆ ಓದಿನಲ್ಲಿ ಪರಿಶ್ರಮದ ಅಗತ್ಯವಿದೆ. ಹೆಂಡತಿ ಮಕ್ಕಳ ಆರೋಗ್ಯ ಉತ್ತಮವಾಗಿರುವುದು. ನೀಲಿ ಬಣ್ಣ ಶುಭ ತರಲಿದೆ.

ವೃಶ್ಚಿಕ: ವೃದ್ಧಾಶ್ರಮ ವಾಸಿಗಳಿಗೆ ಹೆಚ್ಚಿನ ಸಹಾಯ ಮತ್ತು ಸಿಹಿತಿನಿಸುಗಳು ಸಿಗಲಿದೆ. ಮನೆಯಲ್ಲಿ ಧಾರ್ಮಿಕ ಸಮಾರಂಭಗಳ ಸಿದ್ಧತೆ ನಡೆಯಲಿದೆ. ಮಕ್ಕಳ ಹೊಸ ವ್ಯವಹಾರದಲ್ಲಿ ತಂದೆ-ತಾಯಿಯ ಆಶೀರ್ವಾದ ದೊರೆಯಲಿದೆ.

ಧನು: ಹೊಸ ವ್ಯಾಪಾರ ವ್ಯವಹಾರಗಳಿಂದಾಗಿ ಈ ದಿನ ವೃತ್ತಿಪರ ಸ್ಥಳ ಬದಲಾವಣೆಯಾಗುವ ಸಂಭವವಿದೆ. ನಿಮ್ಮ ಅಧಿಕ ಪ್ರಯತ್ನದಿಂದಾಗಿ ಹಣ ಮತ್ತು ಗ್ರಹಾನುಕೂಲದಿಂದ ಖ್ಯಾತಿಗಳೆರಡನ್ನೂ ಪಡೆದುಕೊಳ್ಳುವಿರಿ.

ಮಕರ: ಹತ್ತಿ ಬಟ್ಟೆಗಳ ತಯಾರಕರಿಗೆ ಹೆಚ್ಚಿನ ಬೇಡಿಕೆ ಸಿಗಲಿದೆ. ಕಳೆದು ಹೋಗಿದ್ದ ವಸ್ತುಗಳು ಪತ್ತೆಯಾಗಿ ಕೈ ಸೇರುವುದು. ಬಹಳ ದಿನದಿಂದ ಆರಂಭಿಸಬೇಕೆಂದಿದ್ದ ನೂತನ ಕಾರ್ಯ ಆರಂಭಕ್ಕೆ ಸಮಯಾವಕಾಶ ಸಿಗಲಿದೆ.

ಕುಂಭ: ಬಂಧುಗಳಲ್ಲಿ ಮಾಡಿದ ಸಾಲ ಮರುಪಾವತಿ ಮಾಡುವ ಚೈತನ್ಯವನ್ನು ಹೊಂದುವಿರಿ. ಹೊಸ ಮನೆ ನಿರ್ಮಾಣಕ್ಕಾಗಿ ಹೆಚ್ಚಿನ ತಯಾರಿ ನಡೆಸುವಂತಾಗಲಿದೆ. ಅಧಿಕಾರಿಗಳ ಸಂಪರ್ಕದಿಂದ ಕೆಲಸಗಳಿಗೆ ಪುಷ್ಟಿ ದೊರೆಯಲಿದೆ.


ಮೀನ: ರಾಜಕಾರಣಿಗಳಿಗೆ ನಾಯಕತ್ವದಲ್ಲಿ ಬದಲಾವಣೆಯಾಗುವ ಸಂಭವ ಅಥವಾ ಸಂಘ ಸಂಸ್ಥೆಗಳಲ್ಲಿ ಅಧಿಕಾರ ಪಡೆಯುವಿರಿ. ವಾಹನದ ವ್ಯವಹಾರಗಳಿಂದ ಲಾಭವಿದ್ದು, ವಿಶೇಷ ವಾಹನ, ವಸ್ತು ಖರೀದಿಸುವ ಯೋಚನೆ ಬರಲಿದೆ.

ಪದಬಂಧ 5223

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪುಷ್ಪದ ಸಿಹಿರಸದೊಡಗೂಡಿದ ತಿಂಗಳು (4)
3.ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವುದು (4)
5.ಸಿರಿತನದ ವಿರುದ್ಧ ಪದ (4)
7.ಮಣ ಭಾರವಿರುವ ನಲ್ಲ! (3)
8.ಅರಣ್ಯವನ್ನು ಕಾಪಾಡುವವ (5)
11.ಕದದ ಬಳಿಯಿರಿಸಿದ ನೀರು (3)
12.ದೇವಸ್ಥಾನದ ಸಭಾಮಂಟಪ (4)
14.ಜೊತೆಯಲ್ಲಿ ಪಾಠ ಕಲಿಯುವವನು (4)
15.ಈತ ಗುರುತುಳ್ಳವನು (4)

ಮೇಲಿಂದ ಕೆಳಕ್ಕೆ
1.ಮನಸ್ಸಿನ ಶಕ್ತಿಯಿದು (4)
2.ಗಜಪಡೆಯನ್ನು ನಡೆಸುವಾತ (3)
4.ನೀರಿನ ಅಧಿದೇವತೆ (3)
6.ನಯನಕ್ಕೆ ಕಂಡದ್ದು ಬಲು ಹೊಸತು! (3)
7.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
8.ವರ್ತಮಾನ ತಿಳಿಸಿದ ವ್ಯಾಪಾರಿ (3)
9.ಶುನಕ ಮೂಸಿದ ಬೆಳ್ಳುಳ್ಳಿ! (3)
10.ಅಜಗಜಾಂತರದಲ್ಲೇ ಮನ್ಮಥನಿದ್ದಾನೆ (4)
11.ಸಲ್ಲಾಪ ತೋರುವಾಗಿನ ಸಂತೋಷ (3)
13.ವೈರಿಯಲ್ಲಿಯೇ ಈಕೆ ಬಿಂಕ ತೋರುತ್ತಿಹಳಲ್ಲಾ? (3)



5222 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕವಳ 4.ಡಾಮರ 5.ಅನುಭೂತಿ 6.ತಾಪತ್ರಯ 7.ನಗು 9.ತಮ 13.ತಳಮಳ 14.ಪ್ರತೀಹಾರ 15.ಗಂಜಲ 16.ಗರುಡ

ಮೇಲಿಂದ ಕೆಳಕ್ಕೆ:
1.ಗಂಡಾಗುಂಡಿ 2.ಕರತಾಡನ 3.ವಿಭೂತಿ 5.ಅಯಸ್ಕಾಂತ 8.ಗುರುತರ 10.ಮಗಳಗಂಡ 11.ತರುಲತೆ 12.ಪ್ರತೀಕ

ಸುಡೊಕು 5609


		3	1			4		
6				5				8
	4		8				6	
4			5		9	2		1
	2						5	
3		5	2		8		4	6
5	7					8		9
		1	4	8	5			
	8			7			3	4

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5608 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ಷೇರುಪೇಟೆ ವಹಿವಾಟು 335



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,854
ಇಂದಿನ ಅಂತ್ಯ	17,765
▼	89
ದಿನದ ಕನಿಷ್ಠ	17,698

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹1145 (1150)
ಸೂರ್ಯಕಾಂತಿ (ರಿಫೈನ್ಡ್)	₹1155 (1160)
ಪಾಮೋಲಿನ್	₹935 (921)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹138
ಆರ್‌ಎಸ್‌ಎಸ್-5	₹133.50
ಗುಡ್ ಲಾಟ್	₹128.50

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)


ದಪ್ಪ	₹1200-1400
ಮಧ್ಯಮ	₹1000-1200
ಸಣ್ಣ	₹500-1000

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14750
ಎಸಿ	₹7140
ಆರ್‌ಪಿ	₹9600
ಆರ್‌ಸಿ	₹5000

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹485-680
ದ್ವಿತಳಿ (ಬಿ.ವಿ) ₹513-796





ಅವಧಿಗೆ ಮೊದಲೇ ಸಾಲ ತೀರಿಸಲಿರುವ ಅದಾನಿ ಸಮೂಹ

ನವದೆಹಲಿ (ಪಿಟಿಐ): ಅಂದಾಜು ₹ 9,210 ಕೋಟಿ (1,114 ಅಮೆರಿಕನ್ ಡಾಲರ್) ಮೊತ್ತದ ಸಾಲವನ್ನು ಪ್ರವರ್ತಕರು ಅವಧಿಗೆ ಮೊದಲೇ ತೀರಿಸಲಿದ್ದಾರೆ ಎಂದು ಅದಾನಿ ಸಮೂಹ ಹೇಳಿದೆ.

ಇದರಿಂದಾಗಿ ಸಾಲಕ್ಕೆ ಅಡಮಾನವಾಗಿ ಇರಿಸಿರುವ ಷೇರುಗಳನ್ನು ಬಿಡಿಸಿಕೊಳ್ಳಲು ಆಗುತ್ತದೆ. ಈ ಸಾಲದ ಅವಧಿಯು 2024ರ ಸೆಪ್ಟೆಂಬರ್‌ಗೆ ಕೊನೆಗೊಳ್ಳಲಿದೆ.

ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್, ಅದಾನಿ ಗ್ರೀನ್ ಎನರ್ಜಿ ಮತ್ತು ಅದಾನಿ ಟ್ರಾನ್ಸ್‌ಮಿಷನ್ ಕಂಪನಿಗಳಿಗೆ ಸೇರಿದ ಷೇರುಗಳನ್ನು ಈ ಸಾಲಕ್ಕೆ ಅಡಮಾನವಾಗಿ ಇರಿಸಲಾಗಿದೆ ಎಂದು ಸಮೂಹದ ಪ್ರಕಟಣೆ ತಿಳಿಸಿದೆ.

‘ಷೇರುಗಳನ್ನು ಅಡಮಾನ ಇರಿಸಿ ಪಡೆದಿರುವ ಸಾಲಗಳನ್ನು ಅವಧಿಗೆ ಮೊದಲೇ ತೀರಿಸುವುದಾಗಿ ಪ್ರವರ್ತಕರು ನೀಡಿರುವ ಭರವಸೆಯ ಮುಂದುವರಿಕೆ ಇದು’ ಎಂದು ಹೇಳಿಕೆ ತಿಳಿಸಿದೆ.

ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಅದಾನಿ ಸಮೂಹದ ವಿರುದ್ಧ ಕೆಲವು ಆರೋಪಗಳನ್ನು ಹೊರಿಸಿದ ನಂತರದಲ್ಲಿ, ಸಮೂಹದ ಕಂಪನಿಗಳ ಷೇರುಮೌಲ್ಯ ಕುಸಿದಿದೆ. ಆರೋಪಗಳನ್ನು ಸಮೂಹವು ಅಲ್ಲಗಳೆದಿದೆ.

ಸಾಲವನ್ನು ಅವಧಿಗೆ ಮೊದಲೇ ತೀರಿಸಿದ ನಂತರದಲ್ಲಿ, ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ ಕಂಪನಿಯ ಶೇ12ರಷ್ಟು ಷೇರುಗಳು ಮತ್ತೆ ಪ್ರವರ್ತಕರ ಕೈಗೆ ಬರಲಿವೆ.

ಅದಾನಿ ಗ್ರೀನ್ ಕಂಪನಿಯ ಶೇ3 ರಷ್ಟು ಷೇರುಗಳು ಹಾಗೂ ಅದಾನಿ ಟ್ರಾನ್ಸ್‌ಮಿಷನ್‌ನ ಶೇ 1.4ರಷ್ಟು ಷೇರುಗಳು ಪ್ರವರ್ತಕರಿಗೆ ಮರಳಲಿವೆ.

ಪತಂಜಲಿ ಫುಡ್ಸ್ ವರಮಾನ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತಂಜಲಿ ಫುಡ್ಸ್ ಲಿಮಿಟೆಡ್ ಡಿಸೆಂಬರ್ ತ್ರೈಮಾಸಿಕದ ವರಮಾನದಲ್ಲಿ ಶೇಕಡ 26.38ರಷ್ಟು ಹೆಚ್ಚಳ ಕಂಡಿದೆ. ಕಂಪನಿಯ ವರಮಾನ ₹ 7,963 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ವರಮಾನವು ₹ 6,301 ಕೋಟಿ ಆಗಿತ್ತು.

ತೆರಿಗೆ ನಂತರದ ಲಾಭವು ₹ 269 ಕೋಟಿ ಆಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯ ಲಾಭಕ್ಕೆ ಹೋಲಿಸಿದರೆ ಶೇ 14.96ರಷ್ಟು ಹೆಚ್ಚು.

ವಿತರಣಾ ಜಾಲವನ್ನು ಇನ್ನಷ್ಟು ಹೆಚ್ಚಿಸಲು ಹಾಗೂ ಎರಡನೆಯ ಹಂತದ ಮಾರಾಟಗಳ ಮೇಲೆ ನಿಗಾ ಇಡಲು ಡಿಜಿಟಲ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಕಂಪನಿಯು ಹೂಡಿಕೆ ಮಾಡುವುದನ್ನು ಮುಂದುವರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ವಾಹನ ರಿಟೇಲ್ ಮಾರಾಟ ಶೇ 14ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ವಾಹನಗಳ ರಿಟೇಲ್ ಮಾರಾಟ 2022ರ ಜನವರಿಗೆ ಹೋಲಿಸಿದರೆ 2023ರ ಜನವರಿಯಲ್ಲಿ ಶೇಕಡ 14ರಷ್ಟು ಹೆಚ್ಚಾಗಿದ್ದು 18.26 ಲಕ್ಷಕ್ಕೆ ತಲುಪಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ತಿಳಿಸಿದೆ.

2022ರ ಜನವರಿಯಲ್ಲಿ 16.08 ಲಕ್ಷ ವಾಹನಗಳು ಮಾರಾಟ ಆಗಿದ್ದವು. ಪ್ರಯಾಣಿಕ ವಾಹನ ಮಾರಾಟ ಶೇ 22ರಷ್ಟು ಹೆಚ್ಚಾಗಿ 3.40 ಲಕ್ಷಕ್ಕೆ ತಲುಪಿದೆ.

ದ್ವಿಚಕ್ರ ವಾಹನ ಮಾರಾಟ ಶೇ 10ರಷ್ಟು, ತ್ರಿಚಕ್ರ ವಾಹನ ಶೇ 59ರಷ್ಟು, ವಾಣಿಜ್ಯ ವಾಹನ ಶೇ 16ರಷ್ಟು ಹೆಚ್ಚಾಗಿದೆ.

2020ರ ಜನವರಿ ತಿಂಗಳಿಗೆ ಹೋಲಿಸಿದರೆ ಈ ವರ್ಷದ ಜನವರಿಯಲ್ಲಿ ಆಗಿರುವ ಮಾರಾಟವು ಶೇ 8ರಷ್ಟು ಕಡಿಮೆ ಆಗಿದೆ ಎಂದು ಒಕ್ಕೂಟದ ಅಧ್ಯಕ್ಷ ಮನಿಷ್ ರಾಜ್ ಸಿಂಘಾನಿಯಾ ತಿಳಿಸಿದ್ದಾರೆ.

ಚೀನಾದಲ್ಲಿ ಕೈಗಾರಿಕಾ ಚಟುವಟಿಕೆಗಳು ಮತ್ತೆ ವೇಗ ಪಡೆದುಕೊಳ್ಳುತ್ತಿವೆ. ಇದರಿಂದಾಗಿ ಜಾಗತಿಕ ಮಟ್ಟದಲ್ಲಿ ಸೆಮಿಕಂಡಕ್ಟರ್ ಮತ್ತು ವಾಹನ ಬಿಡಿಭಾಗಗಳ ಪೂರೈಕೆ ಚೇತರಿಕೆ ಕಂಡುಕೊಳ್ಳಲಿದೆ. ತಯಾರಿಕೆ ಹೆಚ್ಚಾಗಲಿದ್ದು, ಗ್ರಾಹಕರು ಕಾಯುವ ಅವಧಿ ಕಡಿಮೆ ಆಗುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

‘ನಿಸಾನ್–ರೆನೊ ಪಾಲುದಾರಿಕೆ’

ನವದೆಹಲಿ (ಪಿಟಿಐ): ಭಾರತದಲ್ಲಿ ಎಸ್‌ಯುವಿ ಸೇರಿದಂತೆ ಹೊಸ ವಾಹನಗಳನ್ನು ಬಿಡುಗಡೆ ಮಾಡಲು ರೆನೊ ಸಮೂಹ ಮತ್ತು ನಿಸಾನ್ ಕಂಪನಿಯು ಪಾಲುದಾರಿಕೆ ಮಾಡಿಕೊಳ್ಳಲು ಮುಂದಾಗಿವೆ.

ರೆನೊ – ನಿಸಾನ್ – ಮಿಟ್ಸುಬಿಶಿ ಒಕ್ಕೂಟವು ಸೋಮವಾರ ಘೋಷಣೆ ಮಾಡಿರುವ ಹೊಸ ಮಾರುಕಟ್ಟೆ ಯೋಜನೆಯ ಭಾಗವಾಗಿ ಭಾರತದಲ್ಲಿ ಈ ಕ್ರಮಕ್ಕೆ ಮುಂದಾಗಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹಳತು	48000-54500
ಹೊಸತು	22500-40000
ಕುಮಟ	
ಚಿಪ್ಪು	36881-44229
ಖೊಕ	24109-34269
ಫ್ಯಾಕ್ಟರಿ	32209-41501
ಹಳೆಚಾಲಿ	32860-33531
ಹೊಸಚಾಲಿ	33709-35169
ಸಾಗರ	
ಬಿಳಿಗೋಟು	23099-31599
ಚಾಲಿ	32989-39099
ಕೋಕ	14099-31989
ಕೆಂಪುಗೋಟು	16890-37699
ರಾಶಿ	35199-46889
ಸಿಪ್ಪೆಗೋಟು	4800-20200
ಶಿವಮೊಗ್ಗ	
ಬೆಟ್ಟೆ	43899-53069
ಗೊಬರಲು	17009-36109
ರಾಶಿ	35669-46689
ಸರಕು	45009-81496
ಸಿದ್ದಾಪುರ	
ಬಿಳಿಗೋಟು	27699-33199
ಚಾಲಿ	37399-39599
ಕೋಕ	26319-31699
ಕೆಂಪುಗೋಟು	28099-33109
ರಾಶಿ	42409-45699
ತಟ್ಟಿಬೆಟ್ಟೆ	37909-43009
ಶಿರಸಿ	
ಬೆಟ್ಟೆ	35699-43299
ಬಿಳಿಗೋಟು	20899-34699
ಚಾಲಿ	34219-41000
ಕೆಂಪುಗೋಟು	26499-35899
ರಾಶಿ	41869-46109
ಯಲ್ಲಾಪುರ	
ಬಿಳಿಗೋಟು	22899-33892
ಕೋಕ	18899-31812
ಹಳೆಚಾಲಿ	35600-40855
ಹೊಸಚಾಲಿ	32899-35799
ಕೆಂಪುಗೋಟು	26899-34899
ರಾಶಿ	41169-49679
ತಟ್ಟಿಬೆಟ್ಟೆ	40270-44109

ಹಿಂಡನ್‌ಬರ್ಗ್ ವರದಿ; ಎಫ್‌ಪಿಒ ರದ್ದು ಮಾಡಿದ ಪರಿಣಾಮ

ಅದಾನಿ: ₹9.5 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ಸೋಮವಾರದ ವಹಿವಾಟಿನ ಅಂತ್ಯದ ವೇಳೆಗೆ ₹ 9.5 ಲಕ್ಷ ಕೋಟಿಯಷ್ಟು ಇಳಿಕೆ ಕಂಡಿದೆ.

ಅಮೆರಿಕದ ಮಾರುಕಟ್ಟೆ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ರಿಸರ್ಚ್ ವರದಿ ಪ್ರಕಟವಾದ ಬಳಿಕ ಅದಾನಿ ಸಮೂಹದ ಕಂಪನಿಗಳ ಷೇರು ಮೌಲ್ಯ ಇಳಿಕೆ ಕಾಣುತ್ತಲೇ ಇದೆ.

ಸೋಮವಾರದ ವಹಿವಾಟಿನ ಅಂತ್ಯದ ಹೊತ್ತಿಗೆ ಅದಾನಿ ಸಮೂಹದ 10 ಕಂಪನಿಗಳಲ್ಲಿ ಆರು ಕಂಪನಿಗಳ ಷೇರು ಮೌಲ್ಯ ಇಳಿಕೆ ಕಂಡಿತು. ನಾಲ್ಕು ಕಂಪನಿಗಳು ಸಕಾರಾತ್ಮಕವಾಗಿ ವಹಿವಾಟು ಅಂತ್ಯಗೊಳಿಸಿದವು.

ಜನವರಿ 24ರಿಂದ ಫೆಬ್ರುವರಿ 6ರವರೆಗೆ ನಡೆದಿರುವ 9 ದಿನಗಳ ವಹಿವಾಟಿನಲ್ಲಿ ಅದಾನಿ ಸಮೂಹದ ಕಂಪನಿಗಳ ಷೇರುಗಳ ಒಟ್ಟು ಮಾರುಕಟ್ಟೆ ಮೌಲ್ಯದಲ್ಲಿ ಶೇಕಡ 49ರಷ್ಟು (₹ 9.5 ಲಕ್ಷ ಕೋಟಿ) ಇಳಿಕೆ ಆಗಿದೆ ಎಂದು ಸ್ಟಾಕ್ಸ್‌ಬಾಕ್ಸ್ ಕಂಪನಿಯ ಸಂಶೋಧನಾ ಮುಖ್ಯಸ್ಥ ಮನಿಷ್ ಚೌಧರಿ ಮಾಹಿತಿ ನೀಡಿದ್ದಾರೆ.

ಕಂಪನಿಗಳ ನಷ್ಟ (%)	
ಅದಾನಿ ಟ್ರಾನ್ಸ್‌ಮಿಷನ್	10
ಅದಾನಿ ಟೋಟಲ್ ಗ್ಯಾಸ್	5
ಅದಾನಿ ಪವರ್	5
ಅದಾನಿ ಗ್ರೀನ್‌ಎನರ್ಜಿ	5
ಅದಾನಿ ವಿಲ್ಮರ್	5
ಅದಾನಿ ಎಂಟರ್‌ಪ್ರೈಸಸ್	0.74
ಕಂಪನಿಗಳ ಗಳಿಕೆ (%)	
ಅದಾನಿ ಪೋರ್ಟ್ಸ್	9.46
ಅಂಬುಜಾ ಸಿಮೆಂಟ್ಸ್	1.54
ಎಸಿಸಿ	2.24
ಎನ್‌ಡಿಟಿವಿ	1.37

(ಸೋಮವಾರದ ವಹಿವಾಟಿನ ವಿವರ)

ಹಿಂಡನ್‌ಬರ್ಗ್ ರಿಸರ್ಚ್‌ನ ವರದಿಯು ಅದಾನಿ ಸಮೂಹದ ಕಂಪನಿಗಳ ಷೇರುಗಳನ್ನು ಅತಿಯಾದ ಮಾರಾಟದ ಒತ್ತಡಕ್ಕೆ ಒಳಗಾಗುವಂತೆ ಮಾಡಿತು. ಅದಾನಿ ಎಂಟರ್‌ಪ್ರೈಸ್ ತನ್ನ ಎಫ್‌ಪಿಒ ರದ್ದು ಮಾಡಿದ ನಿರ್ಧಾರವು ಮತ್ತಷ್ಟು ಏರಿಳಿತಕ್ಕೆ ಕಾರಣವಾಯಿತು ಎಂದು ಅವರು ಹೇಳಿದ್ದಾರೆ.



ಅದಾನಿ ಸಮೂಹವು ಒಂದಿಷ್ಟು ಸಾಲವನ್ನು ಅವಧಿಗೆ ಮೊದಲೇ ತೀರಿಸಲಿದೆ ಎಂಬ ಮಾಹಿತಿಯು ಕೆಲವು ಕಂಪನಿಗಳ ಷೇರು ಮೌಲ್ಯದಲ್ಲಿ ಸ್ಥಿರತೆ ಮೂಡಿಸಿದಂತೆ ಕಾಣುತ್ತಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ರಿಟೇಲ್ ರಿಸರ್ಚ್‌ನ ಮುಖ್ಯಸ್ಥ ದೀಪಕ್ ಜಸನಿ ತಿಳಿಸಿದ್ದಾರೆ.

ನಕಾರಾತ್ಮಕ ವಹಿವಾಟು: ದೇಶದ ಷೇರುಪೇಟೆಗಳಲ್ಲಿ ಸೋಮವಾರ ನಕಾರಾತ್ಮಕ ವಹಿವಾಟು ನಡೆಯಿತು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 335 ಅಂಶ ಇಳಿಕೆ ಕಂಡರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 89 ಅಂಶ ಇಳಿಕೆ ಕಂಡಿತು.

ಅದಾನಿ ಟ್ರಾನ್ಸ್‌ಮಿಷನ್ ಲಾಭ ಹೆಚ್ಚಳ

ನವದೆಹಲಿ: ಅದಾನಿ ಟ್ರಾನ್ಸ್‌ಮಿಷನ್ ಲಿಮಿಟೆಡ್ (ಎಟಿಎಲ್) ಕಂಪನಿಯು ಡಿಸೆಂಬರ್ ತ್ರೈಮಾಸಿಕದಲ್ಲಿ ₹478 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹277 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 73ರಷ್ಟು ಏರಿಕೆ ಆಗಿದೆ.

ವರಮಾನ ₹2,623 ಕೋಟಿಯಿಂದ ₹3,037 ಕೋಟಿಗೆ ಏರಿಕೆ ಆಗಿದೆ. ಕಂಪನಿಯು ದೇಶದ 13 ರಾಜ್ಯಗಳಲ್ಲಿ ವಹಿವಾಟು ನಡೆಸುತ್ತಿದೆ.

ಸಂಕ್ಷಿಪ್ತ ಸುದ್ದಿ

ಜೆಮಿನಿ ಪ್ಯೂರ್‌ಇಟ್ ಅಡುಗೆ ಎಣ್ಣೆ ಬಿಡುಗಡೆ

ಹುಬ್ಬಳ್ಳಿ: ಅಡುಗೆ ಎಣ್ಣೆ ತಯಾರಿಕಾ ಕಂಪನಿ ಕಾರ್ಗಿಲ್ ಫುಡ್ ಇನ್‌ಗ್ರಿಡಿಯಂಟ್ಸ್ ಆ್ಯಂಡ್ ಬಯೊಇಂಡಸ್ಟ್ರೀಯಲ್ಸ್ ತನ್ನ ‘ಜೆಮಿನಿ ಪ್ಯೂರ್‌ಇಟ್-ರಿಫೈನ್ಡ್ ಸನ್‌ಫ್ಲವರ್ ಆಯಿಲ್’ ಅಡುಗೆ ಎಣ್ಣೆಯನ್ನು ಸೋಮವಾರ ಹುಬ್ಬಳ್ಳಿಯಲ್ಲಿ ಬಿಡುಗಡೆ ಮಾಡಿದೆ.

ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಕಂಪನಿಯ ದಕ್ಷಿಣ ಏಷ್ಯಾದ ಗ್ರಾಹಕರ ವ್ಯವಹಾರಗಳ ವಿಭಾಗದ ಮುಖ್ಯಸ್ಥ ಅವನೀಶ್ ತ್ರಿಪಾಠಿ ಹಾಗೂ ದಕ್ಷಿಣ ಏಷ್ಯಾದ ಮಾರ್ಕೆಟಿಂಗ್ ಅಂಡ್ ಇನ್‌ಸೈಟ್ ಲೀಡರ್ ಸುಬಿನ್ ಸಿವನ್ ಉತ್ಪನ್ನವನ್ನು ಬಿಡುಗಡೆಗೊಳಿಸಿದರು.

ದಕ್ಷಿಣ ಭಾರತದಲ್ಲಿ ಈ ಉತ್ಪನ್ನವು ಇದೇ ತಿಂಗಳಿನಿಂದ ಲಭ್ಯವಾಗಲಿದೆ. ದೇಶದಲ್ಲಿ ಶೇ 70ರಷ್ಟು ಸೂರ್ಯಕಾಂತಿ ಎಣ್ಣೆ ದಕ್ಷಿಣ ಭಾರತದಲ್ಲಿ ಬಳಕೆಯಾಗುತ್ತಿದೆ. ಇದರಲ್ಲಿ ಶೇ 25ರಷ್ಟು ಕರ್ನಾಟಕದಲ್ಲಿ ಬಳಕೆಯಾಗುತ್ತಿದೆ ಎಂದು ಅವನೀಶ್ ತ್ರಿಪಾಠಿ ಹೇಳಿದರು.

6 ಸಾವಿರ ನೌಕರರ ವಜಾಕ್ಕೆ ಡೆಲ್ ನಿರ್ಧಾರ

ವಾಷಿಂಗ್ಟನ್ (ಎಎಫ್‌ಪಿ): ಅಮೆರಿಕದ ಕಂಪ್ಯೂಟರ್ ತಯಾರಿಕಾ ಕಂಪನಿ ಡೆಲ್, ಜಾಗತಿಕವಾಗಿ ಅಂದಾಜು 6,650 ನೌಕರರನ್ನು ಕೆಲಸದಿಂದ ತೆಗೆಯಲಿದೆ.

ಮೈಕ್ರೊಸಾಫ್ಟ್, ಮೆಟಾ, ಆಲ್ಫಾಬೆಟ್, ಅಮೆಜಾನ್, ಟ್ವಿಟರ್ ಕಂಪನಿಗಳು ಕೂಡ ನೌಕರರನ್ನು ಭಾರಿ ಸಂಖ್ಯೆಯಲ್ಲಿ ಕೆಲಸದಿಂದ ತೆಗೆಯುತ್ತಿವೆ.

ಡೆಲ್ ಕಂಪನಿಯು ಕಳೆದ ವರ್ಷದ ಆರಂಭದಲ್ಲಿ 1.33 ಲಕ್ಷ ನೌಕರರನ್ನು ಹೊಂದಿತ್ತು. ಪ್ರಸಕ್ತ ಹಣಕಾಸು ವರ್ಷದ ಮೂರನೆಯ ತ್ರೈಮಾಸಿಕದಲ್ಲಿ ಡೆಲ್ ಕಂಪನಿಯ ವರಮಾನವು ಶೇ 6ರಷ್ಟು ಕಡಿಮೆ ಆಗಿದೆ. ಡೆಸ್ಕ್‌ಟಾಪ್, ಲ್ಯಾಪ್‌ಟಾಪ್ ಹಾಗೂ ವರ್ಕ್‌ಸ್ಟೇಷನ್ ಮಾರಾಟವು ಶೇ 10ರಷ್ಟು ತಗ್ಗಿದೆ.

ತಂತ್ರಜ್ಞಾನ ಜಗತ್ತಿನಲ್ಲಿ ವಿಶ್ವದಾದ್ಯಂತ 88 ಸಾವಿರಕ್ಕೂ ಹೆಚ್ಚು ಮಂದಿ ಜನವರಿಯ ನಂತರದಲ್ಲಿ ಕೆಲಸ ಕಳೆದುಕೊಂಡಿದ್ದಾರೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಟಾಟಾ ಸ್ಟೀಲ್ ನಷ್ಟ ₹ 2,501 ಕೋಟಿ

ನವದೆಹಲಿ (ಪಿಟಿಐ): ಟಾಟಾ ಸ್ಟೀಲ್ ಕಂಪನಿಯು ಡಿಸೆಂಬರ್ ತ್ರೈಮಾಸಿಕದಲ್ಲಿ ₹ 2,501 ಕೋಟಿ ನಿವ್ವಳ ನಷ್ಟ ಕಂಡಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 9,598 ಕೋಟಿ ನಿವ್ವಳ ಲಾಭ ಆಗಿತ್ತು ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ವೆಚ್ಚದಲ್ಲಿ ಏರಿಕೆ ಆಗಿರುವುದೇ ನಷ್ಟಕ್ಕೆ ಕಾರಣ ಎಂದು ಕಂಪನಿ ಹೇಳಿದೆ. ವೆಚ್ಚವು ₹ 48,666 ಕೋಟಿಯಿಂದ ₹ 57,172 ಕೋಟಿಗೆ ಏರಿಕೆ ಆಗಿದೆ. ಒಟ್ಟು ವರಮಾನ ₹ 60,842 ಕೋಟಿಯಿಂದ ₹ 57,354 ಕೋಟಿಗೆ ಇಳಿಕೆ ಕಂಡಿದೆ. ಸದ್ಯದ ಸಾಲದ ಮೊತ್ತವು ₹ 71,706 ಕೋಟಿಯಷ್ಟು ಇದೆ ಎಂದು ಕಂಪನಿಯು ಪ್ರತ್ಯೇಕ ಹೇಳಿಕೆಯಲ್ಲಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ 6–2–2023

ಜಾವಾ 70/80(ಹೊಸ)	12250-12300
ಜಾವಾ 80/90(ಹೊಸ)	11250-11300
ದಪ್ಪ ಮಧ್ಯಪ್ರದೇಶ(ಹೊಸ)	10650-10750
ದಪ್ಪ ಗುಜರಾತ್(ಹೊಸ)	11700-11800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1050 (1060)
ಪಾಮ್ ವಾರದ ಡೆಲಿವರಿ	933 (919)
ಸೂರ್ಯಕಾಂತಿ ಎಣ್ಣೆ ಕಚ್ಚಾ	1060 (1060)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 57,150 (56,850)
ಬೆಳ್ಳಿ ಕೆ.ಜಿ 67,550 (67,350)
ಆವರಣದಲ್ಲಿ ಶನಿವಾರದ ಧಾರಣೆ

ಅಪ್ಸರಾ ಅಯ್ಯರ್ ಹಾರ್ವರ್ಡ್ ವಿ.ವಿ ಪತ್ರಿಕೆ ಅಧ್ಯಕ್ಷೆ

ನ್ಯೂಯಾರ್ಕ್(ಪಿಟಿಐ): ಹಾರ್ವರ್ಡ್ ಕಾನೂನು ಶಾಲೆ ಹೊರತರುವ ಪ್ರತಿಷ್ಠಿತ ಪತ್ರಿಕೆ ‘ ಹಾರ್ವರ್ಡ್ ಲಾ ರಿವ್ಯೂ’ನ 137ನೇ ಅಧ್ಯಕ್ಷೆಯಾಗಿ 2ನೇ ವರ್ಷದಲ್ಲಿ ಓದುತ್ತಿರುವ ಭಾರತ ಮೂಲದ ಅಮೆರಿಕ ವಿದ್ಯಾರ್ಥಿನಿ ಅಪ್ಸರಾ ಅಯ್ಯರ್ ಆಯ್ಕೆಯಾಗಿದ್ದಾರೆ. ಈ ಮೂಲಕ 136 ವರ್ಷದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಈ ಸ್ಥಾನಕ್ಕೆ ಆಯ್ಕೆಯಾದ ಮೊದಲ ಮಹಿಳೆ ಎನಿಸಿಕೊಂಡಿದ್ದಾರೆ.

ಈ ಕುರಿತು ವಿ.ವಿಯ ವಿದ್ಯಾರ್ಥಿ ಪತ್ರಿಕೆ ಹಾರ್ವರ್ಡ್ ಕ್ರಿಮಿಸನ್ ಸೋಮವಾರ ವರದಿ ಮಾಡಿದೆ. ಇದು ಹಳೆಯ ವಿದ್ಯಾರ್ಥಿ-ಚಾಲಿತ ಕಾನೂನು ವಿದ್ಯಾರ್ಥಿವೇತನ ಪ್ರಕಟಣೆಗಳಲ್ಲಿ ಒಂದಾಗಿದೆ ಎಂದು ಪತ್ರಿಕೆಯ ವರದಿ ತಿಳಿಸಿದೆ. ಅಪ್ಸರಾ ಅವರು 2016ರಲ್ಲಿ ಅರ್ಥಶಾಸ್ತ್ರ, ಗಣಿತ ಮತ್ತು ಸ್ಪಾನಿಷ್ ವಿಷಯದಲ್ಲಿ ಪದವಿ ಪಡೆದಿದ್ದಾರೆ.



ರಿಕಿ ಕೇಜ್‌ಗೆ ಮೂರನೇ ಬಾರಿಗೆ ‘ಗ್ರ್ಯಾಮಿ’ ಪ್ರಶಸ್ತಿ

ಲಾಸ್ ಏಂಜಲೀಸ್ (ಪಿಟಿಐ): ಸಂಗೀತ ಸಂಯೋಜಕ ಬೆಂಗಳೂರು ಮೂಲದ ರಿಕಿ ಕೇಜ್ ಅವರು 3ನೇ ಬಾರಿಗೆ ಗ್ರ್ಯಾಮಿ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ. ಅವರ 'ಡಿವೈನ್ ಟೈಡ್ಸ್' ಆಲ್ಬಮ್‌ಗಾಗಿ ಪ್ರತಿಷ್ಠಿತ ಪ್ರಶಸ್ತಿ ಸಂದಿದೆ.

ಈ ಪ್ರಶಸ್ತಿಯನ್ನು ಅವರು ಭಾರತಕ್ಕೆ ಸಮರ್ಪಿಸಿದ್ದಾರೆ. ಬ್ರಿಟನ್‌ನ ಪ್ರಸಿದ್ಧ ರಾಕ್ ಬ್ಯಾಂಡ್ ‘ದಿ ಪೊಲೀಸ್’ನ ಡ್ರಮ್ಮರ್ ಸ್ಟೀವರ್ಟ್ ಕೋಪ್‌ಲೆಂಡ್ ಅವರೊಂದಿಗೆ ರಿಕಿ ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ. ಕೋಪ್‌ಲೆಂಡ್ ಅವರು ‘ಡಿವೈನ್ ಟೈಡ್ಸ್’ ಆಲ್ಬಂನಲ್ಲಿ ರಿಕಿ ಜೊತೆ ಕೆಲಸ ಮಾಡಿದ್ದಾರೆ.

65ನೇ ವಾರ್ಷಿಕ ಗ್ರ್ಯಾಮಿ ಪ್ರಶಸ್ತಿ ಸಮಾರಂಭದಲ್ಲಿ, ‘ಬೆಸ್ಟ್ ಇಮ್ಮರ್ಸಿವ್ ಆಡಿಯೊ ಆಲ್ಬಂ’ ವಿಭಾಗದಲ್ಲಿ ರಿಕಿ ಹಾಗೂ ಕೋಪ್‌ಲೆಂಡ್ ಅವರಿಗೆ ಪ್ರಶಸ್ತಿ ಲಭಿಸಿದೆ. ಇದೇ ಆಲ್ಬಂಗಾಗಿ ‘ನವ ಯುಗದ ಉತ್ತಮ ಆಲ್ಬಂ’ ವಿಭಾಗದಲ್ಲಿ ಕಳೆದ ವರ್ಷ ಇಬ್ಬರೂ ಪ್ರಶಸ್ತಿ ಗೆದ್ದುಕೊಂಡಿದ್ದರು. ‘ಮೂರನೇ ಗ್ರ್ಯಾಮಿ ಪ್ರಶಸ್ತಿ ಗೆದ್ದುಕೊಂಡೆ. ಕೃತಜ್ಞನಾಗಿದ್ದೇನೆ. ಈ ಪ್ರಶಸ್ತಿಯನ್ನು ಭಾರತಕ್ಕೆ ಅರ್ಪಿಸುತ್ತಿದ್ದೇನೆ’ ಎಂದು ರಿಕಿ ಕೇಜ್ ಟ್ವೀಟ್ ಮಾಡಿದ್ದಾರೆ.



ಗ್ರ್ಯಾಮಿ ಪ್ರಶಸ್ತಿ ಪಡೆದ ಬಳಿಕ ರಿಕಿ ಕೇಜ್ (ಎಡದಿಂದ)ಹರ್ಬರ್ಟ್ ವಾಲ್ಟ್ ಮತ್ತು ಸ್ಟೀವರ್ಟ್ ಕೋಪ್‌ಲೆಂಡ್‌ರೊಂದಿಗೆ ಕ್ಯಾಮೆರಾಗೆ ಪೋಸು ನೀಡಿದರು –ಪಿಟಿಐ ಚಿತ್ರ

ಸಂತ್ರಸ್ತರ ಆಕ್ರಂದನ, ಕಟ್ಟಡಗಳ ಅವಶೇಷಗಳಡಿ ಸಿಲುಕಿರುವವರ ರಕ್ಷಣೆಗೆ ಅವಿರತ ಶ್ರಮ

ಭೂಕಂಪ: ಅಕ್ಷರಶಃ ಸ್ಮಶಾನವಾದ ನಗರಗಳು

ದಿಯಾರ್‌ಬಕಿರ್ (ಎಎಫ್‌ಪಿ): ಪ್ರಬಲ ಭೂಕಂಪಕ್ಕೆ ಟರ್ಕಿ ಮತ್ತು ಸಿರಿಯಾ ತತ್ತರಿಸಿವೆ. ಗಾಢ ನಿದ್ರೆಯಲ್ಲಿದ್ದ ಸಾವಿರಾರು ಜನರು ಕಟ್ಟಡಗಳ ಅವಶೇಷಗಳಡಿ ಸಿಲುಕಿ ಬಾರದ ಲೋಕಕ್ಕೆ ತೆರಳಿದ್ದಾರೆ. ನಸುಕಿನಲ್ಲಿ ಸಂಭವಿಸಿದ ಭೂಕಂಪದಿಂದ ಟರ್ಕಿಯ ಪ್ರಮುಖ ನಗರಗಳು ಅಕ್ಷರಶಃ ಸ್ಮಶಾನವಾಗಿ ಮಾರ್ಪಟ್ಟಿವೆ.

ರಕ್ಷಣಾ ಕಾರ್ಯಾಚರಣೆ ನಡೆಸುತ್ತಿರುವವರು ಭಾರಿ ಸಾಧನಗಳನ್ನು ಬಳಸಿ ಮತ್ತು ಕೆಲವೊಮ್ಮೆ ಬರಿಗೈನಲ್ಲಿಯೇ ಕಟ್ಟಡಗಳ ಅವಶೇಷಗಳಡಿ ಸಿಲುಕಿರುವವರನ್ನು ರಕ್ಷಿಸಲು ಅವಿರತ ಶ್ರಮ ವಹಿಸುತ್ತಿದ್ದು, ಎಲ್ಲೆಂದರಲ್ಲಿ ಸಂತ್ರಸ್ತರ ಆಕ್ರಂದನಗಳು ಕಿವಿಗಪ್ಪಳಿಸುತ್ತಿವೆ.

‘ಭೂಕಂಪ ವಲಯದಲ್ಲಿ ವಾಸಿಸುತ್ತಿರುವುದರಿಂದ, ಈಗಲೂ ನಾನು ನಡುಗುತ್ತಿದ್ದೇನೆ. ಈ ರೀತಿಯ ಭಯಾನಕ ಅನುಭವ ಆಗುತ್ತಿರುವುದು ಇದೇ ಮೊದಲು’ ಎಂದು ಟರ್ಕಿಯ ಕಹ್ರಾಮನ್‌ಮಾರಸ್‌ನ ವರದಿಗಾರ್ತಿ ಮೆಲೀಸಾ ಸಲ್ಮಾನ್ ವಿವರಿಸಿದ್ದಾರೆ.

‘ನನ್ನ ತಂಗಿ, ಆಕೆಯ ಗಂಡ, 3 ಮಕ್ಕಳು ಮತ್ತು ಅತ್ತೆ, ಮಾವ ಭಗ್ನಾವಶೇಷಗಳಡಿ ಸಿಲುಕಿದ್ದಾರೆ’ ಎಂದು ಇಲ್ಲಿನ ನಿವಾಸಿ ಮುಹಿತ್ತೀನ್ ಒರಾಕ್‌ಸಿ ಎಂಬುವವರು ಆತಂಕದಿಂದ ಹೇಳಿದರು.

‘ಭೂಮಿ ಕಂಪಿಸುವಾಗ ನನ್ನ ಕುಟುಂಬ ನಿದ್ರಿಸುತ್ತಿತ್ತು. ಪತ್ನಿ ಮತ್ತು ಮಕ್ಕಳನ್ನು ಎಚ್ಚರಿಸಿ ಬಾಗಿಲು ತೆರೆದು ಹೊರಬಂದೆವು. ಬಳಿಕ ಇಡೀ ಕಟ್ಟಡ ಕುಸಿಯಿತು’ ಎಂದು ಒಸಾಮ ಅಬ್ದೆಲ್ ಹಮಿದ್ ಅವರು ಘಟನೆಯ ತೀವ್ರತೆ ವಿವರಿಸಿದರು.

ಟರ್ಕಿಯಲ್ಲಿನ ತೀವ್ರ ಚಳಿಯ ಕಾರಣ ರಕ್ಷಣಾ ಕಾರ್ಯಾಚರಣೆ ಅಡ್ಡಿಯಾಗಿದೆ. ಭೂಕಂಪದಿಂದ 3 ಪ್ರಮುಖ ವಿಮಾನ ನಿಲ್ದಾಣಗಳು ಹಾನಿಗೊಳಗಾಗಿವೆ. ಹೀಗಾಗಿ ಅಗತ್ಯ ನೆರವು ಸಾಗಣೆಗೆ ತೊಡಕಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.



ಟರ್ಕಿ ಬಳಿಯ ಬೆಸ್ನಿಯಾ ಗ್ರಾಮದಲ್ಲಿ ಭೂಕಂಪದಿಂದ ನೆಲಸಮವಾದ ಕಟ್ಟಡಗಳಡಿ ಬದುಕುಳಿದವರಿಗಾಗಿ ಶೋಧ ನಡೆಸಲಾಯಿತು–ಎಎಫ್‌ಪಿ ಚಿತ್ರ

‘ವಾಯವ್ಯ ಸಿರಿಯಾದ ವಿವಿಧ ನಗರ ಮತ್ತು ಗ್ರಾಮಗಳಲ್ಲಿರುವ ಹಲವು ಕಟ್ಟಡಗಳು ಕುಸಿದಿದ್ದು, ಈಗಲೂ ಹಲವು ಕುಟುಂಬಗಳು ಭಗ್ನಾವಶೇಷಗಳಡಿ ಸಿಲುಕಿವೆ’ ಎಂದು ಇಸ್ಮೈಲಿಯಾ ಅಲಾಬ್ದಲ್ಲಾ ಹೇಳಿದರು.

ಮಲ್ತಾಯ ಪ್ರಾಂತ್ಯದ 13ನೇ ಶತಮಾನದ ಪ್ರಸಿದ್ಧ ಮಸೀದಿಯು ಭಾಗಶಃ ಕುಸಿದಿದೆ. 14 ಅಂತಸ್ತಿನ 28 ಅಪಾರ್ಟ್‌ಮೆಂಟ್‌ಗಳಿದ್ದ ಕಟ್ಟಡವೂ ಧರೆಗುರುಳಿದೆ.

ಸಿರಿಯಾದ ಅಲೆಪ್ಪೊ, ಲಟಕಿಯಾ, ಹಮಾ ಮತ್ತು ಟರ್ಟಸ್ ಪ್ರಾಂತ್ಯಗಳಲ್ಲಿ ಅಪಾರ ಹಾನಿಯಾಗಿದೆ. ಮುಂಜಾಗ್ರತಾ ಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಎರಡು ವಾರ ಶಾಲೆಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಟರ್ಕಿ, ಸಿರಿಯಾಗೆ 45 ದೇಶಗಳಿಂದ ನೆರವು ಘೋಷಣೆ: ‘ಪ್ರಬಲ ಭೂಕಂಪದಲ್ಲಿ ಸಿಲುಕಿರುವವರ ಶೋಧ ಮತ್ತು ರಕ್ಷಣೆಗೆ ಅಮೆರಿಕ, ಜರ್ಮನಿ ಸೇರಿದಂತೆ 45 ದೇಶಗಳು ನೆರವು ನೀಡುವುದಾಗಿ ಘೋಷಿಸಿವೆ’ ಎಂದು ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೊಗನ್ ತಿಳಿಸಿದ್ದಾರೆ.

‘ಭೂಕಂಪ ಪೀಡಿತ ಸಿರಿಯಾಗೆ ನೆರವು ನೀಡಲು ಇಸ್ರೇಲ್ ನಿರ್ಧರಿಸಿದೆ’ ಎಂದು ಇಸ್ರೇಲ್ ಪ್ರಧಾನಿ ನೆತನ್ಯಾಹು ಬೆಂಜಮಿನ್ ತಿಳಿಸಿದ್ದಾರೆ.

ಪ್ರಧಾನಿಯಿಂದ ನೆರವಿನ ಭರವಸೆ

ಬೆಂಗಳೂರು: ಟರ್ಕಿ ಮತ್ತು ಸುತ್ತಮುತ್ತಲಿನ ರಾಷ್ಟ್ರಗಳಲ್ಲಿ ಭೀಕರ ಭೂಕಂಪದಿಂದ ಸಂತ್ರಸ್ತರಾದ ಜನರ ನೆರವಿಗೆ ಭಾರತ ನಿಲ್ಲಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಇಲ್ಲಿನ ಮಾದಾವರದ ಬಳಿಯ ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಸೋಮವಾರ ಆರಂಭವಾದ ಭಾರತ ಇಂಧನ ಸಪ್ತಾಹ ಉದ್ಘಾಟನಾ ಸಮಾರಂಭದಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಮೃತರಿಗೆ ಸಂತಾಪ ಸೂಚಿಸಿದರು.

‘ಟರ್ಕಿಯಲ್ಲಿ ಭೀಕರ ಭೂಕಂಪದಿಂದ ಹಲವರು ಮೃತಪಟ್ಟಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಆಸ್ತಿಪಾಸ್ತಿಗಳಿಗೆ ಹಾನಿಯಾಗಿದೆ. ಸಂತ್ರಸ್ತರ ಪರವಾಗಿ ಭಾರತದ 140 ಕೋಟಿ ಜನರು ಇದ್ದಾರೆ. ಅವರಿಗೆ ಅಗತ್ಯವಿರುವ ಎಲ್ಲ ನೆರವು ಒದಗಿಸಲು ಸಿದ್ಧ’ ಎಂದರು

ಎನ್‌ಡಿಆರ್‌ಎಫ್ ರವಾನೆಗೆ ನಿರ್ಧಾರ

ಟರ್ಕಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ತಲಾ 100 ಜನರನ್ನು ಒಳಗೊಂಡ ಎರಡು ತಂಡ, ವೈದ್ಯಕೀಯ ತಂಡ ಮತ್ತು ಪರಿಹಾರ ಸಾಮಗ್ರಿಗಳನ್ನು ತಕ್ಷಣವೇ ಕಳುಹಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಪ್ರಧಾನಿ ಮೋದಿ ಅವರ ಮುಖ್ಯ ಕಾರ್ಯದರ್ಶಿ ಪಿ.ಕೆ.ಮಿಶ್ರಾ ಅವರು ಸೌತ್ ಬ್ಲಾಕ್‌ನಲ್ಲಿ ನಡೆಸಿದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಸಂಪುಟ ಕಾರ್ಯದರ್ಶಿ, ಗೃಹ, ರಕ್ಷಣೆ ಮತ್ತು ವಿದೇಶಾಂಗ, ಆರೋಗ್ಯ, ಕುಟುಂಬ ಕಲ್ಯಾಣ ಸಚಿವಾಲಯಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗಿಯಾಗಿದ್ದರು ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಮೃತರ ಕುಟುಂಬಸ್ಥರಿಗೆ ಸಂತಾಪ ಸೂಚಿಸಿ, ಉಭಯ ದೇಶಗಳಿಗೆ ನೆರವು ನೀಡುವುದಾಗಿ ತಿಳಿಸಿದ್ದಾರೆ.

‘ಕುಂಚಬ್ರಹ್ಮ’ ಬಿ.ಕೆ.ಎಸ್. ವರ್ಮಾ

• ಎಸ್. ಸೂರ್ಯಪ್ರಕಾಶ ಪಂಡಿತ್

ನುಡಿ ನಮನ



‘ಪ್ರಜಾವಾಣಿ’ಗೆ ಬಿ. ಕೆ. ಎಸ್. ವರ್ಮಾ ರಚಿಸಿದ ಚಿತ್ರ

ನಮ್ಮ ಕಾಲದ ರವಿವರ್ಮಾ ಎಂಬುದಾಗಿಯೇ ಖ್ಯಾತರಾದವರು ಚಿತ್ರಕಲಾವಿದ ಬಿ. ಕೆ. ಎಸ್. ವರ್ಮಾ. ಅವರ ದಿಟವಾದ ಹೆಸರು ಶ್ರೀನಿವಾಸ; ಪೂರ್ಣ ಹೆಸರು ಬುಕ್ಕಸಾಗರದ ಕೃಷ್ಣಮಾಚಾರ್ಯ ಶ್ರೀನಿವಾಸ. ಆದರೆ ಎಳವೆಯಿಂದಲೇ ಅವರಿಗೆ ರಾಜ ರವಿವರ್ಮನ ಚಿತ್ರಗಳೆಂದರೆ ಆಕರ್ಷಣೆ; ಹೀಗಾಗಿ ತಮ್ಮ ಹೆಸರಿಗೆ ‘ವರ್ಮಾ’ ಎಂದು ಸೇರಿಸಿಕೊಂಡರು; ಅದಕ್ಕೆ ತಕ್ಕಂತೆ ಜನಪ್ರೀತಿಯನ್ನೂ ಕೀರ್ತಿಯನ್ನೂ ಸಂಪಾದಿಸಿಕೊಂಡರು.

ಬಿ. ಕೆ. ಎಸ್. ವರ್ಮಾ (1949–2023) ಚಿತ್ರಕಲೆಯನ್ನು ಯಾವುದೇ ಕಲಾಶಾಲೆಯಲ್ಲಿ ಕಲಿತವರಲ್ಲ; ಅದು ಅವರಿಗೆ ಸಹಜವಾಗಿಯೇ ದಕ್ಕಿದ್ದ ಕೊಡುಗೆ. ಅವರ ತಾಯಿ ಜಯಲಕ್ಷ್ಮಿ ಕಲಾವಿದೆ; ಬಾಟಿಕ್ ಕಲೆಯಲ್ಲಿ ಪರಿಣತರು. ವರ್ಮಾ ಅವರ ಚಿಕ್ಕಪ್ಪ ಹನುಮಂತಾಚಾರ್ ಖ್ಯಾತ ಶಿಲ್ಪಿ. ಹೀಗೆ ಮನೆಯ ವಾತಾವರಣದಲ್ಲಿ ಕಲೆಯ ಬೆಳಕು ಇತ್ತು. ಜೊತೆಗೆ ಅವರ ಆಸಕ್ತಿ–ಆರಾಧನೆಗಳೂ ಸೇರಿಕೊಂಡವು. ಶಾಲಾಶಿಕ್ಷಣದಲ್ಲಿ ಅವರಿಗೇನೂ ರುಚಿ ಇರಲಿಲ್ಲ; ಲೋಕಶಿಕ್ಷಣದ ಹಾದಿಯನ್ನು ಹಿಡಿದರು. ಬಾಲ್ಯದಲ್ಲಿಯೇ ಮನೆಯನ್ನು ಬಿಟ್ಟರು; ಕಲೆಯ ಮರ್ಮಗಳನ್ನು ಅರಿಯಲು ಅಲೆದಾಡಿದರು. ಕೊನೆಯವರಿಗೂ ಅವರು ಈ ಸ್ವಾತಂತ್ರ್ಯವನ್ನು ಜೀವನದಲ್ಲೂ ಕಲಾಭಿವ್ಯಕ್ತಿಯಲ್ಲೂ ಉಳಿಸಿಕೊಂಡರು. ಅವರ ಚಿತ್ರಗಳಲ್ಲಿ ಅವರದ್ದೇ ವಿಶೇಷ ಛಾಪು ಮೂಡಿರುವುದು ಎದ್ದುಕಾಣುತ್ತದೆ. ಅ. ನ. ಸುಬ್ಬರಾಯರ ಕಲಾಮಂದಿರದಲ್ಲಿ ಸ್ವಲ್ಪ ಸಮಯ ವ್ಯಾಸಂಗ ಮಾಡಿದರು; ಆದರೆ ಅವರ ಕುಂಚ ಮಾತ್ರ ಸ್ವತಂತ್ರವಾಗಿಯೇ ಉಳಿಯಿತು!

ವರ್ಮಾ ಅವರು ಬ್ರಷ್‌ಗಳಿಂದ ಮಾತ್ರವೇ ಚಿತ್ರಗಳನ್ನು ಬರೆಯುತ್ತಿರಲಿಲ್ಲ; ದಾರದಿಂದಲೂ ರಚಿಸುತ್ತಿದ್ದ ಅವರ ಕಲಾಕೌಶಲ ಸಹೃದಯರನ್ನು ಆಕರ್ಷಿಸುತ್ತಿತ್ತು. ತಮ್ಮ ಉಗುರುಗಳಿಂದಲೂ ಅವರು ಕಾಗದದ ಮೇಲೆ ಉಬ್ಬುಚಿತ್ರಗಳನ್ನು ಮೂಡಿಸುತ್ತಿದ್ದರು. ಹೀಗೆ ಅವರು ಎಳವೆಯಲ್ಲೊಮ್ಮೆ ಜಯಚಾಮರಾಜೇಂದ್ರ ಒಡೆಯರ್ ಅವರ ಚಿತ್ರವನ್ನು ಉಗುರಿನಲ್ಲಿ ಮೂಡಿಸಿ ಅವರಿಂದ ಬಹುಮಾನವನ್ನೂ ಸಂಪಾದಿಸಿದ್ದರಂತೆ. ಶತಾವಧಾನಿ ಆರ್. ಗಣೇಶ್ ಅವರೊಂದಿಗೆ ವರ್ಮಾ ಅವರು ನಡೆಸಿಕೊಡುತ್ತಿದ್ದ ‘ಕಾವ್ಯ ಚಿತ್ರ’ ಎಂಬ ವಿಶಿಷ್ಟ ಕಾರ್ಯಕ್ರಮ ಅಪಾರ ಜನಾದರಣೆಗೆ ಪಾತ್ರವಾಗಿದೆ. ಈ ಕಾರ್ಯಕ್ರಮ ಒಮ್ಮೆ ಸತತವಾಗಿ ಇಪ್ಪತ್ತನಾಲ್ಕು ಗಂಟೆಗಳ ಕಾಲ ನಡೆದದ್ದು ಅಪರೂಪವೇ ಸರಿ.

ವರ್ಮಾ ಅವರ ಚಿತ್ರಗಳಿಗೆ ಸಾವಿರಾರು ಸಹೃದಯರು ಮನಸೋತಿದ್ದಾರೆ. ಭಾರತಮಾತೆ, ಶ್ರೀಕೃಷ್ಣ–ರಾಧಾ, ಗಣೇಶ, ದೇವಿ, ಈಶ್ವರ, ಸರಸ್ವತಿ, ರಾಘವೇಂದ್ರಸ್ವಾಮಿ – ಹೀಗೆ ಅವರ ಹತ್ತು ಹಲವು ಚಿತ್ರಗಳು ಹಲವರ ದೇವರಮನೆಗಳನ್ನೂ ಸೇರಿವೆ. ಕನ್ನಡ ಸಾಹಿತ್ಯ ಪರಿಷತ್ ಬಳಸುತ್ತಿರುವ ಭುವನೇಶ್ವರಿಯ ಚಿತ್ರ ಕೂಡ ಅವರ ಸೃಷ್ಟಿಯೇ. ಕಲಾವಿದ ರೋರಿಚ್, ಸಾಹಿತಿಗಳಾದ ಕುವೆಂಪು, ಶಿವರಾಮ ಕಾರಂತ, ಚಿತ್ರನಟರಾದ ರಾಜಕುಮಾರ್, ರಜನಿಕಾಂತ್ – ಹೀಗೆ ಹಲವರು ಗಣ್ಯರು ಅವರ ಕಲೆಯ ಅಭಿಮಾನಿಗಳು. ತೆಲುಗಿನ ಖ್ಯಾತ ಹಾಸ್ಯನಟ ಬ್ರಹ್ಮಾನಂದಂ ಅವರಿಗೆ ಇತ್ತೀಚೆಗಷ್ಟೆ ಭಾರಿಗಾತ್ರದ ವೆಂಕಟೇಶ್ವರನ ಚಿತ್ರವನ್ನು ರಚಿಸಿಕೊಟ್ಟಿದ್ದು ದೊಡ್ಡ ಸುದ್ದಿಯೂ ಆಗಿತ್ತು. ಪರಿಸರವನ್ನು ಕುರಿತ ಅವರ ಚಿತ್ರಗಳನ್ನು ಕೂಡ ಇಲ್ಲಿ ಸ್ಮರಿಸಿಕೊಳ್ಳಬಹುದು. ಬಂಗಾರದ ಜಿಂಕೆ, ದೀಪ ಮುಂತಾದ ಹಲವು ಚಲನಚಿತ್ರಗಳಿಗೂ ತಮ್ಮ ಕಲೆಯ ಕಾಣ್ಕೆಯನ್ನು ನೀಡಿದ್ದರು. ಉತ್ಥಾನ, ಪ್ರಜಾಮತ, ಮಂಗಳ ಮುಂತಾದ ಪತ್ರಿಕೆಗಳಿಗೂ ಅವರ ಕಲಾಪ್ರತಿಭೆ ಸಂದಿದೆ. ‘ಪ್ರಜಾವಾಣಿ’ಯಲ್ಲಿ ಅಂಕಣವೊಂದಕ್ಕೆ ಸುಮಾರು ಐವತ್ತು ಚಿತ್ರಗಳನ್ನು ರಚಿಸಿದ್ದರು.

ಕಲಾವಿದ ಬಿ.ಕೆ.ಎಸ್. ವರ್ಮಾ ಇನ್ನಿಲ್ಲ

ಒಂದನೇ ಪುಟದಿಂದ...

ವರ್ಮಾ ಅವರ ಸಾಧನೆಗೆ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ರಾಜೀವ್ ಗಾಂಧಿ ಪ್ರಶಸ್ತಿ ಲಭಿಸಿದ್ದವು. 2011ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ವರ್ಮ ಅವರಿಗೆ ಗೌರವ ಡಾಕ್ಟರೇಟ್ ನೀಡಿತ್ತು.

ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಸೋಮವಾರ ಸಂಜೆಯವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ನಂತರ ಚಾಮರಾಜಪೇಟೆ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಿತು.

‘ಆರ್ಟಿಸ್ಟ್ ಆದರೆ ಮಾತ್ರ ಸಾಲದು; ಅವನು ಹಾರ್ಟಿಸ್ಟ್ ಕೂಡ ಆಗಬೇಕು’ ಎಂಬುದು ವರ್ಮಾ ಅವರ ಸೂತ್ರವೇ. ಇದಕ್ಕೆ ಅವರ ಜೀವನವೇ ಭಾಷ್ಯವಾಗಿತ್ತು. ಕೀರ್ತಿ–ಹೊಗಳಿಕೆಗಳ ನಡುವೆಯೂ ಅವರು ಸರಳವಾಗಿಯೇ ಇದ್ದರು; ಎಲ್ಲರೊಂದಿಗೂ ಸುಲಭವಾಗಿ ಬೆರೆಯುತ್ತಿದ್ದರು; ಯಾವುದೇ ಹೊರೆಗಳಿಲ್ಲದೆ, ತಮ್ಮ ಸುತ್ತಲಿನ ಪರಿಸರವನ್ನು ಸಜ್ಜನಿಕೆ–ಪ್ರೀತಿಗಳ ಸೌಂದರ್ಯದಿಂದ ಅಲಂಕರಿಸುತ್ತಿದ್ದ ಭಾವಜೀವಿ.

ಪ್ರತಿಭೆ ಗಣಿಯ ವಜ್ರದಂತೆ;
ಸಾಣೆ ಹಿಡಿಯುವುದೇ ರಸತಪಸ್ಯೆ.
ಸ್ವಾರ್ಥಿಗಳ ಕ್ಷಣಿಕ ಪ್ರಶಂಸೆಗೆ
ಮಾರುಹೋಗಬೇಡಿ;
ನಿಮ್ಮ ಕಲೆ ಪೂಜೆಗೆತ್ತಿದ ಆರತಿಯಾಗಿ ನಿರಂತರ ಬೆಳಗಲಿ.

– ಇವು ಕುವೆಂಪು ಅವರು 1964ರಲ್ಲಿ ವರ್ಮಾ ಅವರಿಗೆ ಬರೆದಿದ್ದ ಪತ್ರದ ಸಾಲುಗಳು. ಹೌದು, ವರ್ಮಾ ಅವರ ಕಲೆಯ ಬೆಳಕು ಹಲವರ ಮನೆ–ಮನಗಳಲ್ಲಿ ಪೂಜೆಗೆತ್ತಿದ ಆರತಿಯಾಗಿ ನಿತ್ಯವೂ ಬೆಳಗುತ್ತಿದೆ.

ಹೈಕೋರ್ಟ್: ನ್ಯಾಯಮೂರ್ತಿಗಳ ಸಂಖ್ಯೆ 53ಕ್ಕೆ ಏರಿಕೆ

ಇಬ್ಬರು ನ್ಯಾಯಮೂರ್ತಿಗಳ ನೇಮಕ

ಪ್ರಜಾವಾಣಿ ವಾರ್ತೆ



ವಿಜಯಕುಮಾರ್ ಎ.ಪಾಟೀಲ್



ರಾಜೇಶ್ ರೈ ಕಲ್ಲಂಗಳ

ಬೆಂಗಳೂರು: ಸರ್ಕಾರದ ಪರ ವಕೀಲರಾಗಿದ್ದ ವಿಜಯಕುಮಾರ್ ಎ.ಪಾಟೀಲ್ ಹಾಗೂ ಹೈಕೋರ್ಟ್ ವಕೀಲ ರಾಜೇಶ್ ರೈ ಕಲ್ಲಂಗಳ ಅವರನ್ನು ರಾಜ್ಯ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲಾಗಿದೆ.

ಈ ಕುರಿತಂತೆ ಕೇಂದ್ರ ಕಾನೂನು ಸಚಿವಾಲಯ ಸೋಮವಾರ ಅಧಿಸೂಚನೆ ಹೊರಡಿಸಿದೆ. ಇಬ್ಬರೂ 2 ವರ್ಷಗಳ ಕಾಲ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಕೆಲಸ ನಿರ್ವಹಿಸಲಿದ್ದು ನಂತರ ಅವರ ಸೇವೆ ಕಾಯಂಗೊಳ್ಳಲಿದೆ.

ಇತ್ತೀಚೆಗಷ್ಟೇ ರಾಮಚಂದ್ರ ಡಿ.ಹುದ್ದಾರ ಹಾಗೂ ವೆಂಕಟೇಶ್ ಟಿ.ನಾಯಕ್ ಅವರನ್ನು ಜಿಲ್ಲಾ ಪ್ರಧಾನ ನ್ಯಾಯಾಧೀಶರ ವಿಭಾಗದಿಂದ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಪದೋನ್ನತಿ ನೀಡಲಾಗಿತ್ತು. ಕೆಲವೇ ದಿನಗಳ ಅಂತರದಲ್ಲಿ ಹೈಕೋರ್ಟ್ ವಕೀಲರ ವಿಭಾಗದಿಂದ ಇಬ್ಬರು ನ್ಯಾಯಮೂರ್ತಿಗಳನ್ನು ನೇಮಕ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

ವಿಜಯಕುಮಾರ್ ಎ.ಪಾಟೀಲ್ ಹಾಗೂ ರಾಜೇಶ್ ರೈ ಕಲ್ಲಂಗಳ ಅವರ ನೇಮಕದಿಂದ ಈಗ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳ ಒಟ್ಟು ಸಂಖ್ಯೆ 53ಕ್ಕೆ ಏರಿದಂತಾಗಿದೆ. ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿಗಳ ಮಂಜೂರಾತಿ ಸಂಖ್ಯೆ 62.

2023ರ ಮೇ 21ಕ್ಕೆ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ನಿವೃತ್ತಿ ಹೊಂದಲಿದ್ದರೆ ಮೇ 31ಕ್ಕೆ ನ್ಯಾಯಮೂರ್ತಿ ಬಿ.ವೀರಪ್ಪ ನಿವೃತ್ತಿ ಹೊಂದಲಿದ್ದಾರೆ. ‘ಹೈಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 45ರಿಂದ ಏರಿಕೆ ಆಗಿದ್ದೇ ಇಲ್ಲ. ಇದೇ ಮೊದಲ ಬಾರಿಗೆ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳ ಸಂಖ್ಯೆ 50 ದಾಟಿದೆ’ ಎನ್ನುತ್ತಾರೆ ಹಿರಿಯ ವಕೀಲ ಬಿ.ವಿ.ಆಚಾರ್ಯ.

13 ಹೆಚ್ಚುವರಿ ನ್ಯಾಯಮೂರ್ತಿಗಳ ನೇಮಕ

ನವದೆಹಲಿ (ಪಿಟಿಐ): ನ್ಯಾಯಾಂಗದ ಇಬ್ಬರು ಅಧಿಕಾರಿಗಳು ಮತ್ತು 11 ಮಂದಿ ವಕೀಲರನ್ನು ಕರ್ನಾಟಕ ಹೈಕೋರ್ಟ್ ಸೇರಿದಂತೆ ಮೂರು ಹೈಕೋರ್ಟ್‌ಗಳಿಗೆ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲಾಗಿದೆ.

ಅಲಹಾಬಾದ್ ಹೈಕೋರ್ಟ್‌ಗೆ ಆರು, ಮದ್ರಾಸ್ ಹೈಕೋರ್ಟ್‌ಗೆ ಐವರು ಮತ್ತು ಕರ್ನಾಟಕ ಹೈಕೋರ್ಟ್‌ಗೆ ಇಬ್ಬರನ್ನು ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ನೇಮಿಸಲಾಗಿದೆ.

ನೇಮಕದ ಹಿಂದೆಯೇ ವಿವಾದ: ಮದ್ರಾಸ್ ಹೈಕೋರ್ಟ್‌ಗೆ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿರುವ ವಕೀಲರಾದ ಲೇಕ್ಷ್ಮಣ ಚಂದ್ರ ವಿಕ್ಟೋರಿಯಾ ಗೌರಿ ಅವರು ಬಿಜೆಪಿ ಜೊತೆಗೆ ಗುರುತಿಸಿಕೊಂಡಿದ್ದರು ಎಂಬುದು ವಿವಾದಕ್ಕೆ ಆಸ್ಪದವಾಗಿದೆ. ಗೌರಿ ಹೆಸರು ಶಿಫಾರಸು ಮಾಡಿದ್ದನ್ನು ಹಿಂಪಡೆಯಬೇಕು ಎಂದು ಕೆಲ ವಕೀಲರು ಇತ್ತೀಚೆಗೆ ಕೊಲಿಜಿಯಂಗೆ ಕೋರಿದ್ದರು. ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕ ಮಾಡುವುದಕ್ಕೆ ವಕೀಲರ ಮತ್ತೊಂದು ವರ್ಗ ಬೆಂಬಲಿಸಿತ್ತು.

ಗೌರಿ ನೇಮಕ ಪ್ರಶ್ನಿಸಿ ತಕರಾರು– ‘ಸುಪ್ರೀಂ’ನಲ್ಲಿ ಇಂದೇ ವಿಚಾರಣೆ

ನವದೆಹಲಿ (ಪಿಟಿಐ): ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿಯಾಗಿ ವಕೀಲೆ ಲೇಕ್ಷ್ಮಣ ಚಂದ್ರ ವಿಕ್ಟೋರಿಯಾ ಗೌರಿ ಅವರ ನೇಮಕ ಪ್ರಶ್ನಿಸಿದ್ದ ಅರ್ಜಿಯ ವಿಚಾರಣೆಯನ್ನು ಫೆ.10ರ ಬದಲಿಗೆ 7ರಂದೇ ಸುಪ್ರೀಂ ಕೋರ್ಟ್ ನಡೆಸಲಿದೆ.

ಅರ್ಜಿಯ ತುರ್ತು ವಿಚಾರಣೆ ನಡೆಸಬೇಕು ಎಂಬ ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ, ಜೆ.ಬಿ.ಪಾರ್ದಿವಾಲ ಅವರಿದ್ದ ಪೀಠವು ಮಾನ್ಯ ಮಾಡಿತು.

ಇಂದು ಪ್ರಮಾಣವಚನ: ಈ ಮಧ್ಯೆ, ನ್ಯಾಯಮೂರ್ತಿಯಾಗಿ ಗೌರಿ ಅವರು ಮಂಗಳವಾರ ಚೆನ್ನೈನಲ್ಲಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಜಂಟಿ ಸಂಸದೀಯ ಸಮಿತಿ ತನಿಖೆಗೆ ಪ್ರತಿಪಕ್ಷಗಳ ಪಟ್ಟು • ‘ಅದಾನಿ ಸರ್ಕಾರ್–ಶೇಮ್ ಶೇಮ್’ ಘೋಷಣೆ

ಅದಾನಿ ಪ್ರಕರಣದ ಪ್ರತಿಧ್ವನಿ, ನಡೆಯದ ಕಲಾಪ

ನವದೆಹಲಿ (ಪಿಟಿಐ): ಅದಾನಿ ಪ್ರಕರಣ ಸಂಸತ್ತಿನಲ್ಲಿ ಸೋಮವಾರವು ಪ್ರತಿಧ್ವನಿಸಿದ್ದು, ಅದಾನಿ ಸಮೂಹ ವಿರುದ್ಧದ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ತನಿಖೆಗೆ ಒಪ್ಪಿಸಬೇಕು ಎಂದು ವಿರೋಧಪಕ್ಷಗಳು ಪಟ್ಟುಹಿಡಿದವು.

ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ಚರ್ಚೆ ನಿರೀಕ್ಷೆಯಂತೆ ಆರಂಭವಾಗಲಿಲ್ಲ. ಖಾಸಗಿ ಸಂಸ್ಥೆಗಳಿಗೆ ಸಂಬಂಧಿಸಿದ ವ್ಯವಹಾರದ ಚರ್ಚೆಗೆ ಅವಕಾಶವಿಲ್ಲ. ಜನ ಎಂದು ಬಿಜೆಪಿ ಸದಸ್ಯರು ಪ್ರತಿಪಾದಿಸಿದರು. ಗೊಂದಲ ಸ್ಥಿತಿಯಿಂದಾಗಿ ಉಭಯ ಸದನಗಳನ್ನು ಎರಡು ಬಾರಿ ಮುಂದೂಡಬೇಕಾಯಿತು.

ಲೋಕಸಭೆಯ ಕಲಾಪ ಬೆಳಿಗ್ಗೆ ಆರಂಭವಾದಾಗ ವಿರೋಧಪಕ್ಷದ, ಬಹುತೇಕ ಕಾಂಗ್ರೆಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರಿಗೆ ಬಂದು ‘ಅದಾನಿ ಸರ್ಕಾರ್ –ಶೇಮ್ ಶೇಮ್’ ಎಂಬ ಘೋಷಣೆಯನ್ನು ಕೂಗಿದರು.

ಅದಾನಿ ಸಮೂಹವು ಷೇರುಗಳ ಮೌಲ್ಯವನ್ನು ಏರುಪೇರು ಮಾಡುವ ಮೂಲಕ ವಂಚನೆ ಎಸಗಿದೆ ಅಮೆರಿಕ ಮೂಲದ ಸಂಸ್ಥೆ ಆರೋಪ ಕುರಿತು ತನಿಖೆಗೆ ನಡೆಸಬೇಕು ಎಂಬ ಬೇಡಿಕೆಯನ್ನು ವಿರೋಧ ಪಕ್ಷಗಳು ಪುನರುಚ್ಚರಿಸಿದವು.

ರಾಜ್ಯಸಭೆಯಲ್ಲಿಯೂ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ವಿರೋಧಪಕ್ಷಗಳ ಸದಸ್ಯರು ಒಗ್ಗಟ್ಟಾಗಿ ಒಕ್ಕೊರಲಿನಿಂದ ಅದಾನಿ ಪ್ರಕರಣದ ಚರ್ಚೆಗೆ ಪಟ್ಟುಹಿಡಿದರು.

ಕಲಾಪವನ್ನು ಮಧ್ಯಾಹ್ನ 2 ಗಂಟೆಗೆ ಮುಂದೂಡಿ, ಮತ್ತೆ ಸೇರಿದಾಗಲೂ ಗೊಂದಲ ಸ್ಥಿತಿಯೇ ಇತ್ತು. ಚರ್ಚೆಗೆ ಅವಕಾಶ ಕೊಡಲು ಅಧ್ಯಕ್ಷ ಜಗದೀಪ್ ಧನ್‌ಕರ್ ನಿರಾಕರಿಸಿದರು. ಬೆಳಿಗ್ಗೆ ವಿವಿಧ ವಿರೋಧಪಕ್ಷಗಳ 10 ಮಂದಿ ನಾಯಕರು ನೀಡಿದ್ದ 10 ಪ್ರತ್ಯೇಕ ನೋಟಿಸ್‌ಗಳನ್ನು ಸ್ವೀಕರಿಸಲು ಅವರು ನಿರಾಕರಿಸಿದ್ದರು.



ಬಿ.ವಿ.ಶ್ರೀನಿವಾಸ್ ನೇತೃತ್ವದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕೇಂದ್ರ ಬಜೆಟ್: ಬಡವರ ಮೇಲಿನ ‘ಮೌನ ದಾಳಿ’– ಸೋನಿಯಾ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ 2023–24ನೇ ಸಾಲಿನ ಬಜೆಟ್ ಅನ್ನು ಬಡವರ ಮೇಲಿನ ‘ಮೌನ ದಾಳಿ’ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಟೀಕಿಸಿದ್ದಾರೆ.

ಅವರು ಪತ್ರಿಕೆಯೊಂದಕ್ಕೆ ಬರೆದಿರುವ ಲೇಖನದಲ್ಲಿ, ‘ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸಚಿವರು ‘ವಿಶ್ವ ಗುರು’ ಮತ್ತು ‘ಅಮೃತ ಕಾಲ’ ಎಂದು ಜೋರಾಗಿ ಪಠಿಸುತ್ತಿದ್ದಾರೆ. ಆದರೆ ಅವರ ನೆಚ್ಚಿನ ಮತ್ತು ಮೆಚ್ಚಿನ ಉದ್ಯಮಿಯ ಮೇಲೆ ಹಣಕಾಸಿನ ಹಗರಣಗಳು ಸ್ಫೋಟಗೊಳ್ಳುತ್ತಿವೆ’ ಎಂದು ಅವರು ಅದಾನಿ ಸಮೂಹದ ವಿರುದ್ಧದ ಆರೋಪಗಳ ಕುರಿತು ಉಲ್ಲೇಖಿಸಿದ್ದಾರೆ.

‘ತನ್ನ ಕೆಲ ಶ್ರೀಮಂತ ಗೆಳೆಯರಿಗೆ ಪ್ರಯೋಜನ ಮಾಡಿಕೊಡಲು ಪ್ರಧಾನಿ ಅನುಸರಿಸಿದ ನೀತಿಯು ಬಡ ಮತ್ತು ಮಧ್ಯಮ ವರ್ಗದವರಿಗೆ ದುಬಾರಿಯಾಗಿ ಪರಿಣಮಿಸಿ, ನಿರಂತರ ಅನಾಹುತಗಳನ್ನು ಉಂಟು ಮಾಡಿದೆ. ನೋಟು ಅಮಾನ್ಯೀಕರಣ, ಕೆಟ್ಟದಾಗಿ ವಿನ್ಯಾಸಗೊಳಿಸಿದ ಜಿಎಸ್‌ಟಿ, ಮೂರು ಕೃಷಿ ಕಾನೂನುಗಳನ್ನು ತರಲು ನಡೆಸಿದ ವಿಫಲ ಪ್ರಯತ್ನ ಹಾಗೂ ಬಳಿಕ ಕೃಷಿಯನ್ನು ನಿರ್ಲಕ್ಷಿಸಿದ್ದರಿಂದ ಸಾಕಷ್ಟು ತೊಂದರೆಗಳನ್ನು ದೇಶದ ಜನರು ಎದುರಿಸಬೇಕಾಯಿತು’ ಎಂದು ಆರೋಪಿಸಿದ್ದಾರೆ.

‘ಬಡವರು ಮತ್ತು ಮಧ್ಯಮ ವರ್ಗದ ಭಾರತೀಯರು ತಾವು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಎಲ್‌ಐಸಿ ಮತ್ತು ಎಸ್‌ಬಿಐ ನಂತಹ ಸಾರ್ವಜನಿಕ ಸಂಸ್ಥೆಗಳನ್ನು ನಂಬಿ ಉಳಿತಾಯ ಮಾಡಿದ್ದಾರೆ. ಆದರೆ ಕೇಂದ್ರ ಸರ್ಕಾರ ಈ ಹಣವನ್ನು ತನ್ನ ಆಯ್ದ ಸ್ನೇಹಿತರ ಒಡೆತನದ ಕಳಪೆ ನಿರ್ವಹಣೆಯ ಕಂಪನಿಗಳಲ್ಲಿ ಹೂಡಿಕೆ ಮಾಡುವ ಮೂಲಕ ಬಡ, ಮಧ್ಯಮ ವರ್ಗದವರನ್ನು ಸಂಕಷ್ಟಕ್ಕೆ ಸಿಲುಕಿಸಿದೆ’ ಎಂದು ಅವರು ಅದಾನಿ ಸಮೂಹದ ವಿರುದ್ಧದ ಆರೋಪಗಳನ್ನು ಉಲ್ಲೇಖಿಸಿದ್ದಾರೆ.

ಮೋದಿ ಮೌನ ಮುರಿಯಿರಿ: ‘ಇನ್ನಾದರೂ ಮೌನ ಮುರಿಯಿರಿ ಪ್ರಧಾನಿಗಳೇ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್ ಹೇಳಿದ್ದಾರೆ. ಈ ಸಂಬಂಧ ಭಾನುವಾರದಿಂದ ನಿತ್ಯ ಪ್ರಶ್ನೆಗಳನ್ನು ಕೇಳಲಾಗುವುದು ಎಂದು ಹೇಳಿದ್ದೆವು. ಸೋಮವಾರದ ಪ್ರಶ್ನೆ ಹೀಗಿದೆ. ‘ಹಮ್ ಅದಾನಿ ಕೇ ಹೈ ಕೌನ್. ದಯವಿಟ್ಟು ಮಾತನಾಡಿ’ ಎಂದಿದ್ದಾರೆ.

‘ಅದಾನಿ ಹಗರಣ ಮುಚ್ಚಿ ಹಾಕಲು ಯತ್ನ’

ನವದೆಹಲಿ: ಅದಾನಿ ಸಮೂಹವು ಅಕ್ರಮವಾಗಿ ಷೇರುಗಳ ಮೌಲ್ಯ ಏರಿಕೆ/ಇಳಿಕೆ ಮಾಡಿರುವ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಯಬೇಕು ಎಂದು ಆಗ್ರಹಿಸಿ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ನೇತೃತ್ವದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಅದಾನಿ ಹಗರಣವನ್ನು ಮುಚ್ಚಿ ಹಾಕಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ ಪ್ರತಿಭಟನಾಕಾರರು ಜಂತರ್ ಮಂತರ್‌ನಿಂದ ಎಸ್‌ಬಿಐ ವರೆಗೆ ಸಾಗಿದರು. ಎಲ್‌ಐಸಿ, ಎಸ್‌ಬಿಐ ಉಳಿಸಿ ಎಂದು ಘೋಷಣೆ ಕೂಗಿದರು. ಈ ವೇಳೆ ಕಾರ್ಯಕರ್ತರನ್ನು ಪೊಲೀಸರು ತಡೆದರು. ಕಾರ್ಯಕರ್ತರು ಬ್ಯಾರಿಕೇಡ್‌ಗಳನ್ನು ಹತ್ತಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಪೊಲೀಸರು ಅವರನ್ನು ಬಂಧಿಸಿ ಕರೆದೊಯ್ದರು.

‘ಅದಾನಿ ಸಮೂಹದ ಆಸ್ತಿ ₹ 8,000 ಕೋಟಿಯಿಂದ ₹9.90 ಲಕ್ಷ ಕೋಟಿ ಆಗಲು ಕಾರಣ ಏನು ಎಂಬುದು ಬಹಿರಂಗವಾಗಬೇಕಿದೆ. ಅದಾನಿಯಂತಹ ಉದ್ಯಮ ಸಮೂಹ ರಕ್ಷಿಸಲು ಪ್ರಧಾನಿ ಅವರು ಮುಂದಾಗಿರುವುದು ದೇಶದ ಇತಿಹಾಸದಲ್ಲೇ ಮೊದಲು’ ಎಂದು ಕಿಡಿಕಾರಿದರು.

ದೇಶದಾದ್ಯಂತ ಕಾಂಗ್ರೆಸ್ ಪ್ರತಿಭಟನೆ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಷೇರುಗಳ ಮೌಲ್ಯ ಏರಿಳಿತದ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ದೇಶದ ವಿವಿಧ ನಗರಗಳಲ್ಲಿ ಎಸ್‌ಬಿಐ ಮತ್ತು ಎಲ್‌ಐಸಿ ಕಚೇರಿಗಳ ಮುಂಬಾಗ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದ್ದಾರೆ.

ಮಹಾರಾಷ್ಟ್ರ, ಮಧ್ಯ ಪ್ರದೇಶ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಸೇರಿದಂತೆ ದೇಶದ ವಿವಿಧೆಡೆ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟಿಸಿದ್ದಾರೆ. ಈ ವೇಳೆ ಅವರು ಕೇಂದ್ರ ಸರ್ಕಾರದ ಧೋರಣೆ ವಿರೋಧಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅದಾನಿ ಸಮೂಹಗಳ ಉದ್ಯಮಿ ಗೌತಮ್ ಅದಾನಿ ದೇಶದಿಂದ ಪರಾರಿಯಾಗುವುದನ್ನು ತಡೆಯಲು ಕೇಂದ್ರ ಸರ್ಕಾರ ತುರ್ತಾಗಿ ಅವರ ಪಾಸ್‌ಪೋರ್ಟ್ ಅನ್ನು ವಶಪಡಿಸಿಕೊಳ್ಳಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದ್ದಾರೆ.

ಈ ಹಿಂದೆ ಉದ್ಯಮಿಗಳಾದ ವಿಜಯ್ ಮಲ್ಯ ಮತ್ತು ನೀರವ್ ಮೋದಿ ಅವರ ಪಾಸ್‌ಪೋರ್ಟ್ ಅನ್ನು ಕೇಂದ್ರದ ಬಿಜೆಪಿ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳದ ಕಾರಣ, ಅವರು ದೇಶದಿಂದ ಪರಾರಿಯಾದರು ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ವಿದ್ಯುತ್: ಅದಾನಿ ಸಮೂಹದ ಬಿಡ್ ರದ್ದು

ಲಖನೌ: ಉತ್ತರ ಪ್ರದೇಶ ಸರ್ಕಾರದ ಮಾಲೀಕತ್ವದ ಮಧ್ಯಾಂಚಲ ವಿದ್ಯುತ್ ವಿತರಣ ನಿಗಮವು, ಸ್ಮಾರ್ಟ್ ಪ್ರಿಪೇಯ್ಡ್ ಮೀಟರ್ ಅಳವಡಿಸಲು ಅದಾನಿ ಸಮೂಹದ ಕಂಪನಿಯೊಂದು ಸಲ್ಲಿಸಿದ್ದ ₹ 5,400 ಕೋಟಿ ಮೌಲ್ಯದ ಬಿಡ್ ರದ್ದು ಮಾಡಿದೆ.

ಅದಾನಿ ಸಮೂಹದ ಕಂಪನಿಯ ಬಿಡ್ ಅತ್ಯಂತ ಕಡಿಮೆ ಬೆಲೆಯದ್ದಾಗಿದ್ದರೂ, ಆ ಕಂಪನಿಯು ಸ್ಮಾರ್ಟ್ ಮೀಟರ್ ಖರೀದಿಗೆ ನಮೂದಿಸಿದ್ದ ಬೆಲೆಯು ನಿರೀಕ್ಷೆ ಮಾಡಿದ್ದ ಬೆಲೆಗಿಂತ ಜಾಸ್ತಿ ಆಗಿತ್ತು ಎಂದು ಮೂಲಗಳು ಹೇಳಿವೆ.

ಮಧ್ಯಾಂಚಲ ಪ್ರದೇಶದಲ್ಲಿ ಒಟ್ಟು 70 ಲಕ್ಷ ಸ್ಮಾರ್ಟ್ ಮೀಟರ್ ಪೂರೈಸುವ ಬಿಡ್‌ನ ಅಂತಿಮ ಹಂತಕ್ಕೆ ಅದಾನಿ ಸಮೂಹದ ಕಂಪನಿ ತಲುಪಿತ್ತು. ಪ್ರತಿ ಮೀಟರ್‌ಗೆ ₹ 10 ಸಾವಿರ ಬೇಕಾಗುತ್ತದೆ ಎಂದು ಕಂಪನಿ ಹೇಳಿತ್ತು. ಆದರೆ ಕೇಂದ್ರ ಸರ್ಕಾರದ ನಿಯಮಗಳ ಅನ್ವಯ ಅದರ ಬೆಲೆಯು ₹ 6 ಸಾವಿರ ಮೀರುವಂತೆ ಇರಲಿಲ್ಲ ಎಂದು ಮೂಲಗಳು ವಿವರಿಸಿವೆ. ತಾಂತ್ರಿಕ ಕಾರಣಗಳಿಂದಾಗಿ ಬಿಡ್ ರದ್ದು ಮಾಡಲಾಗಿದ್ದು, ಹೊಸದಾಗಿ ಬಿಡ್ ಆಹ್ವಾನಿಸಲಾಗಿದೆ ಎಂದು ಗೊತ್ತಾಗಿದೆ.


ಬಾಂಬೆ ಹೈಕೋರ್ಟ್ ಅಭಿಪ್ರಾಯ

‘ವಿಚ್ಛೇದನದ ನಂತರವೂ ಮಹಿಳೆಯು ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ಜೀವನಾಂಶ ಪಡೆಯಲು ಅರ್ಹರಾಗಿರುತ್ತಾರೆ’

‘ವಿಚ್ಛೇದನ ಬಳಿಕವೂ ಪರಿಹಾರಕ್ಕೆ ಮಹಿಳೆ ಅರ್ಹ’

ಮುಂಬೈ (ಪಿಟಿಐ): ವಿಚ್ಛೇದನದ ನಂತರವೂ ಮಹಿಳೆಯು ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ಜೀವನಾಂಶ ಪಡೆಯಲು ಅರ್ಹರಾಗಿರುತ್ತಾರೆ ಎಂದು ಬಾಂಬೆ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ವಿಚ್ಛೇದಿತ ಪತ್ನಿಗೆ ಮಾಸಿಕ ₹ 6000 ಜೀವನಾಂಶ ನೀಡಬೇಕು ಎಂದು ಪೊಲೀಸ್ ಕಾನ್‌ಸ್ಟೆಬಲ್‌ವೊಬ್ಬರಿಗೆ ಸೆಷನ್ಸ್ ಕೋರ್ಟ್ ನೀಡಿದ್ದ ಆದೇಶವನ್ನು ಹೈಕೋರ್ಟ್‌ನ ಏಕಸದಸ್ಯ ಪೀಠ ಎತ್ತಿಹಿಡಿಯಿತು.



ಈ ಅರ್ಜಿಯು ವಿಚ್ಛೇದಿತ ಪತ್ನಿಯು ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ಪರಿಹಾರಕ್ಕೆ ಅರ್ಹಳೆ ಎಂಬ ಪ್ರಶ್ನೆಯನ್ನು ಹುಟ್ಟುಹಾಕಿದೆ ಎಂದು ಪೀಠ ಆದೇಶದಲ್ಲಿ ಉಲ್ಲೇಖಿಸಿದೆ.

‘ಕೌಟುಂಬಿಕ ಬಾಂಧವ್ಯ’ ಪದವನ್ನು ರಕ್ತಸಂಬಂಧ, ಮದುವೆ ಅಥವಾ ಮದುವೆ ಸ್ವರೂಪದ ಇನ್ನಾವುದೇ ಸಂಬಂಧದ ಮೂಲಕ ಇಬ್ಬರು ಒಟ್ಟಿಗೆ ಇರುವಾಗ ಅಥವಾ ಇದ್ದಾಗಿನ (ಬಹುತೇಕ ಭೂತಕಾಲ) ಸಂಬಂಧ ಎಂದು ಕಾಯ್ದೆಯು ವ್ಯಾಖ್ಯಾನಿಸುತ್ತದೆ ಎಂದು ಹೈಕೋರ್ಟ್ ತನ್ನ ಆದೇಶದಲ್ಲಿ ಉಲ್ಲೇಖಿಸಿದೆ.

ಅರ್ಜಿದಾರನಾದ ಪತಿ ತನ್ನ ಪತ್ನಿಗೆ ಜೀವನಾಂಶ ಕೊಡಲು ಬಾಧ್ಯಸ್ಥನಾಗಿರುತ್ತಾರೆ. ಇದರಲ್ಲಿ ವಿಫಲನಾದಲ್ಲಿ ಪ್ರತಿವಾದಿ ಅಥವಾ ಪತ್ನಿಗೆ ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ಅರ್ಜಿ ಸಲ್ಲಿಸದೇ ಅನ್ಯ ಮಾರ್ಗ ಇರುವುದಿಲ್ಲ ಎಂದೂ ಕೋರ್ಟ್ ಹೇಳಿದೆ.

‘ಈ ಪ್ರಕರಣದಲ್ಲಿ ಅರ್ಜಿದಾರರು ಅದೃಷ್ಟಶಾಲಿ. ಅವರು ಮಾಸಿಕ ₹ 25,000 ವೇತನ ಪಡೆಯುತ್ತಿದ್ದರೂ ಕೇವಲ ₹ 6000 ಜೀವನಾಂಶ ನೀಡುವಂತೆ ಆದೇಶಿಸಲಾಗಿದೆ’ ಎಂದು ನ್ಯಾಯಮೂರ್ತಿ ಅವಚತ್ ಅವರು ಅಭಿಪ್ರಾಯಪಟ್ಟರು.

ಅರ್ಜಿಯ ಪ್ರಕಾರ, ಅರ್ಜಿದಾರ ಮತ್ತು ಮಹಿಳೆ ಮೇ 2013ರಲ್ಲಿ ಮದುವೆಯಾಗಿದ್ದರು. ಕೌಟುಂಬಿಕ ವಿವಾದದ ಕಾರಣ ಜುಲೈ 2013ರಲ್ಲಿ ಪ್ರತ್ಯೇಕಗೊಂಡಿದ್ದರು. ನಂತರ ವಿಚ್ಛೇದನ ಪಡೆದಿದ್ದರು. ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ನಿರ್ವಹಣಾ ಭತ್ಯೆ ಕೋರಿ ಮಹಿಳೆ ಅರ್ಜಿ ಸಲ್ಲಿಸಿದ್ದರು. ಕೌಟುಂಬಿಕ ನ್ಯಾಯಾಲಯ ಈ ಅರ್ಜಿ ತಳ್ಳಿಹಾಕಿತ್ತು. ಬಳಿಕ ಸೆಷನ್ಸ್ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಸದ್ಯ, ವೈವಾಹಿಕ ಬಾಂಧವ್ಯ ಊರ್ಜಿತವಾಗಿಲ್ಲದ ಕಾರಣ, ಮಾಜಿ ಪತ್ನಿ ಕೌಟುಂಬಿಕ ಕಾಯ್ದೆಯಡಿ ಪರಿಹಾರ ಪಡೆಯಲು ಅರ್ಹಳಲ್ಲ. ಅಲ್ಲದೆ, ವಿಚ್ಛೇದನ ಸಂದರ್ಭದಲ್ಲಿ ಎಲ್ಲ ಬಾಕಿಯನ್ನು ಇತ್ಯರ್ಥಪಡಿಸಲಾಗಿದೆ ಎಂದು ಅರ್ಜಿದಾರರು ವಾದ ಮಂಡಿಸಿದ್ದರು. ಆದರೆ, ಈ ವಾದವನ್ನು ಮಹಿಳೆ ವಿರೋಧಿಸಿದ್ದರು.

ಪ್ರಣಾಳಿಕೆ ಬಿಡುಗಡೆ: ಮತದಾರರಿಗೆ ಹಲವು ಭರವಸೆ

ಹಳೆ ಪಿಂಚಣಿ ಜಾರಿ: ಕಾಂಗ್ರೆಸ್

ಪ್ರಜಾ ಮತ ಜನತಂತ್ರದ ಹಬ್ಬ | ತ್ರಿಪುರಾ ವಿಧಾನಸಭಾ ಚುನಾವಣೆ - 2023

ಅಗರ್ತಲಾ (ಪಿಟಿಐ): ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಯೋಜನೆ, 50 ಸಾವಿರದಷ್ಟು ಉದ್ಯೋಗ ಸೃಷ್ಟಿ, ಕೃಷಿ ಕಾರ್ಮಿಕರಿಗೆ ಹೆಚ್ಚಿನ ಕೂಲಿ ಹಣ ಹಾಗೂ 150 ಯೂನಿಟ್ ಉಚಿತ ವಿದ್ಯುತ್– ಇವು ತ್ರಿಪುರಾದಲ್ಲಿ ಅಧಿಕಾರ ಹಿಡಿಯಲು ಮತದಾರರಿಗೆ ಕಾಂಗ್ರೆಸ್ ನೀಡಿರುವ ಭರವಸೆಗಳು.

ಕಾಂಗ್ರೆಸ್‌ನ ಹಿರಿಯ ಮುಖಂಡ ಹಾಗೂ ತ್ರಿಪುರಾದ ಕಾಂಗ್ರೆಸ್‌ನ ಏಕೈಕ ಶಾಸಕ ಸುದೀಪ್ ರಾಯ್ ಬರ್ಮನ್ ಅವರು ಪ್ರಣಾಳಿಕೆ ಬಿಡುಗಡೆ ವೇಳೆ ಮಾತನಾಡಿ, ‘ಉದ್ಯೋಗ ಸೃಷ್ಟಿ, ನೌಕರರ ಅಭ್ಯುದಯ, ಬಡವರು ಹಾಗೂ ಮಧ್ಯಮವರ್ಗದ ಜನರನ್ನು ಕೇಂದ್ರೀಕರಿಸಿ ಪ್ರಣಾಳಿಕೆಯನ್ನು ಸಿದ್ಧಪಡಿಸಲಾಗಿದೆ’ ಎಂದರು. ‘ಬಡವರು, ಮಧ್ಯಮ ವರ್ಗದವರ ಅಭಿವೃದ್ಧಿಗಾಗಿ 20 ಅಂಶದ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಮುಂದಿನ 5 ವರ್ಷಗಳಲ್ಲಿ ಸರ್ಕಾರಿ ವಲಯವೂ ಸೇರಿದಂತೆ ಒಟ್ಟು 50 ಸಾವಿರ ಉದ್ಯೋಗ ಸೃಷ್ಟಿಸಲಾಗುವುದು’ ಎಂದಿದ್ದಾರೆ.

‘ತ್ರಿಪುರಾದಲ್ಲಿ ಅಧಿಕಾರಕ್ಕೆ ಬಂದರೆ, ನೌಕರರಿಗೆ ಹಳೆ ಪಿಂಚಣಿ ಯೋಜನೆಯನ್ನು ಪುನಃ ಪ್ರಾರಂಭಿಸಲಾಗುವುದು. ಜೊತೆಗೆ ಸರ್ಕಾರಿ ನೌಕರರಿಗೆ ವರ್ಷಕ್ಕೆ ಎರಡು ಬಾರಿ ತುಟ್ಟಿ ಭತ್ಯೆ ಹೆಚ್ಚಿಸಲಾಗುವುದು’ ಎಂದರು.

ಕಾಂಗ್ರೆಸ್, ಸಿಪಿಎಂ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದ್ದು, 60ರಲ್ಲಿ ಕಾಂಗ್ರೆಸ್ 13 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ.



ತ್ರಿಪುರ ವಿಧಾನಸಭೆ ಚುನಾವಣೆಗಾಗಿ ಶಾಂತಿರ್‌ಬಜಾರ್‌ನಲ್ಲಿ ಬಿಜೆಪಿ ನಡೆಸಿದ ಸಾರ್ವಜನಿಕ ರ‍್ಯಾಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಶಾ ಅವರಿಗೆ ಹಾರ ಹಾಕಲಾಯಿತು –ಪಿಟಿಐ ಚಿತ್ರ

‘ಕಾಂಗ್ರೆಸ್ ‘ಅಂಧಕಾರ’ ನೀಡಿತು’

ಶಾಂತಿರ್‌ಬಜಾರ್ (ತ್ರಿಪುರಾ): ‘ಕಾಂಗ್ರೆಸ್ ಹಾಗೂ ಸಿಪಿಎಂ ಪಕ್ಷಗಳು ತ್ರಿಪುರಾವನ್ನು ಸುಮಾರು 50 ವರ್ಷಗಳ ಕಾಲ ಆಳಿವೆ. ಹಾಗಿದ್ದರೂ, ರಾಜ್ಯದ ಅಭಿವೃದ್ಧಿ ಆಗಿಲ್ಲ. ಕಾಂಗ್ರೆಸ್ ನಿಮಗೆ ‘ಅಂಧಕಾರ’ ನೀಡಿದೆ. ಆದರೆ, ಬಿಜೆಪಿಯು ನಿಮಗೆ ‘ಅಧಿಕಾರ’ (ಹಕ್ಕು) ನೀಡಿದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಹೇಳಿದ್ದಾರೆ.

ಇಲ್ಲಿ ನಡೆದ ಸಾರ್ವಜನಿಕ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ರಾಜವಂಶಸ್ಥ ಪ್ರದ್ಯೋತ್ ಮಾಣಿಕ್ಯ ದೇಬಬರ್ಮಾ ಅವರ ನೇತೃತ್ವದ ಟಿಪ್ರಮೋಥಾ ಪಕ್ಷವು ಕಾಂಗ್ರೆಸ್ ಹಾಗೂ ಸಿಪಿಎಂನೊಂದಿಗೆ ‘ರಹಸ್ಯ ಹೊಂದಾಣಿಕೆ’ ಮಾಡಿಕೊಂಡಿದೆ. ಜೊತೆಗೆ, ಕ್ಷೇತ್ರ ಹೊಂದಾಣಿಕೆ ಮಾಡಿಕೊಂಡಿರುವ ಕಾಂಗ್ರೆಸ್ ಹಾಗೂ ಸಿಪಿಎಂ ಎಂದಿಗೂ ಆದಿವಾಸಿಗಳನ್ನು ಗೌರವಿಸಿಲ್ಲ’ ಎಂದೂ ಆರೋಪಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮುಟ್ಟಿನ ರಜೆ: ಕಾನೂನು ತರುವ ಪ್ರಸ್ತಾವ ಇಲ್ಲ

ನವದೆಹಲಿ (ಪಿಟಿಐ): ಶೈಕ್ಷಣಿಕ ಸಂಸ್ಥೆಗಳಲ್ಲಿ ‘ಮುಟ್ಟಿನ ರಜೆ’ ಯನ್ನು ಖಚಿತಪಡಿಸುವ ಸಂಬಂಧ ಕಾನೂನು ತರುವ ಯಾವುದೇ ಪ್ರಸ್ತಾವ ಶಿಕ್ಷಣ ಸಚಿವಾಲಯದ ಮುಂದಿಲ್ಲ ಎಂದು ಕೇಂದ್ರ ಶಿಕ್ಷಣ ಸಚಿವಾಲಯದ ರಾಜ್ಯ ಖಾತೆ ಸಚಿವ ಸುಭಾಶ್ ಸರ್ಕಾರ್ ತಿಳಿಸಿದ್ದಾರೆ.

ವಾಟ್ಸ್‌ಆ್ಯಪ್ ಮೂಲಕ ಆಹಾರ ಖರೀದಿ: ಐಆರ್‌ಸಿಟಿಇ

ನವದೆಹಲಿ: ರೈಲು ಪ್ರಯಾಣಿಕರು ಇನ್ನುಮುಂದೆ ವಾಟ್ಸ್‌ಆ್ಯಪ್ ಚಾಟ್ ಮೂಲಕವೇ ಆಹಾರ ಖರೀದಿಸುವಂಥ ವ್ಯವಸ್ಥೆಯನ್ನು ಭಾರತೀಯ ರೈಲ್ವೆ ಆಹಾರ ಸರಬರಾಜು ಮತ್ತು ಪ್ರವಾಸೋದ್ಯಮ ನಿಗಮ (ಐಆರ್‌ಸಿಟಿಇ) ಸೋಮವಾರ ಪರಿಚಯಿಸಿದೆ.

ಈ ಸಲುವಾಗಿ +91-8750001323 ವಾಟ್ಸ್‌ಆ್ಯಪ್ ಸಂಖ್ಯೆಯನ್ನು ರೈಲ್ವೆ ಇಲಾಖೆ ನೀಡಿದೆ.

ಟರ್ಕಿ, ಸಿರಿಯಾದಲ್ಲಿ ಭೂಕಂಪ

ಒಂದನೇ ಪುಟದಿಂದ...

ಟರ್ಕಿಯ ಹತ್ತು ಪ್ರಾಂತ್ಯಗಳಲ್ಲಿ ಭಾರಿ ಹಾನಿ ಸಂಭವಿಸಿದೆ.

‘ಮೂರು ಸಾವಿರಕ್ಕೂ ಹೆಚ್ಚು ಕಟ್ಟಡಗಳು ಕುಸಿದಿವೆ. ಭಗ್ನಾವಶೇಷಗಳನ್ನು ತೆರವುಗೊಳಿಸಲಾಗುತ್ತಿದೆ. ಮೃತರ ಮತ್ತು ಗಾಯಾಳುಗಳ ಸಂಖ್ಯೆ ಎಷ್ಟು ಏರಬಹುದೆಂಬ ಅಂದಾಜು ಇಲ್ಲ. ಪ್ರಾಣಹಾನಿ ಪ್ರಮಾಣ ಸಾಧ್ಯವಾದಷ್ಟು ತಗ್ಗಿಸುವ ಮತ್ತು ಆದಷ್ಟು ಶೀಘ್ರ ಈ ದುರಂತದಿಂದ ಚೇತರಿಸಿಕೊಳ್ಳುವ ಆಶಯ ಹೊಂದಿದ್ದೇವೆ’ ಎಂದು ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೊಗನ್ ಹೇಳಿದ್ದಾರೆ.

ಮೆಡಿಟರೇನಿಯನ್ ಕರಾವಳಿ ನಗರ ಇಸ್ಕಾಂಡಾರೌನ್‌ನಲ್ಲಿ ಆಸ್ಪತ್ರೆ ಕುಸಿದಿದೆ. ಸಾವುನೋವುಗಳ ಬಗ್ಗೆ ತಕ್ಷಣದ ಮಾಹಿತಿ ಸಿಕ್ಕಿಲ್ಲ ಎಂದು ಉಪಾಧ್ಯಕ್ಷ ಫುವಾತ್ ಒಕ್ತಾಯ್ ಹೇಳಿದರು.

‘ನನ್ನ ಮನೆ ಸಮೀಪದ ಮೂರು ಕಟ್ಟಡಗಳು ಕುಸಿದವು. ಅವಶೇಷಗಳಡಿ ಸಿಲುಕಿದ್ದ ವ್ಯಕ್ತಿ ‘ನನ್ನಲ್ಲಿ ಇನ್ನು ಶಕ್ತಿ ಉಳಿದಿಲ್ಲ’ವೆಂದು ನೆರವಿಗೆ ಯಾಚಿಸುತ್ತಿದ್ದ. ಆತನ ಕಡೆಗೆ ರಕ್ಷಣಾ ಕಾರ್ಯಕರ್ತರು ದೌಡಾಯಿಸಿದರು’ ಎಂದು ಪ್ರತ್ಯಕ್ಷದರ್ಶಿ ಅದಾನಾ ನಗರದ ನಿವಾಸಿ, ಪತ್ರಿಕೋದ್ಯಮ ವಿದ್ಯಾರ್ಥಿ ಮುಹಮ್ಮತ್ ಪಾತಿಹ್ ಯಾವುಸ್ ತಿಳಿಸಿದರು.

ಟರ್ಕಿಯಲ್ಲಿ ಆಸ್ಪತ್ರೆಯ ಕಟ್ಟಡ ಕುಸಿದಿದೆ. ನವಜಾತ ಶಿಶುಗಳು ಸೇರಿ ರೋಗಿಗಳನ್ನು ಸಿರಿಯಾದ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಬಂಡಾಯಗಾರರ ಹಿಡಿತದಲ್ಲಿರುವ ಸಿರಿಯಾದ ಪರ್ವತಗಳ ತಪ್ಪಲಿನ ಅಜ್ಮರಿನ್ ಪಟ್ಟಣದಲ್ಲಿ ಹೆಚ್ಚು ಮಕ್ಕಳು ಮೃತಪಟ್ಟಿದ್ದಾರೆ. ಹೊದಿಕೆಗಳಲ್ಲಿ ಮಕ್ಕಳ ಶವಗಳನ್ನು ಸುತ್ತಿಕೊಂಡು ಆಸ್ಪತ್ರೆಗೆ ಸಾಗಿಸುತ್ತಿರುವುದು ಕಂಡುಬಂತು.

ಗಾಝಿಯಾನ್‌ಟೆಪ್ ನಗರ ಮಧ್ಯಭಾಗದ ಬೆಟ್ಟದ ಮೇಲಿರುವ ಐತಿಹಾಸಿಕ ಕೋಟೆಗೂ ತೀವ್ರ ಹಾನಿಯಾಗಿದೆ. ಕೋಟೆಗಳ ಗೋಡೆಗಳು ಮತ್ತು ಗಡಿಯಾರ ಗೋಪುರಗಳು ನೆಲಸಮಗೊಂಡಿವೆ.

ಪ್ರಬಲ ಕಂಪನಗಳು: 7.8 ತೀವ್ರತೆಯ ಮೊದಲ ಕಂಪನ ಮತ್ತು 7.5 ತೀವ್ರತೆಯ ಎರಡನೇ ಕಂಪನದ ಕೇಂದ್ರ 100 ಕಿಲೋಮೀಟರ್ ದೂರ ಮತ್ತು 11 ಗಂಟೆಗಳ ಅಂತರದಲ್ಲಿತ್ತು ಎಂದು ಅಮೆರಿಕದ ಜಿಯಾಲಜಿಕಲ್ ಸರ್ವೆ ಅಂದಾಜಿಸಿದೆ.

ಭೂಕಂಪದ ಕರಾಳ ಇತಿಹಾಸ: ಅತ್ಯಂತ ಪ್ರಬಲ ಭೂಕಂಪಕ್ಕೆ ಟರ್ಕಿ ತುತ್ತಾಗಿರುವುದು ಇದು ಮೊದಲೇನಲ್ಲ. 1999ರಲ್ಲಿ ಟರ್ಕಿಯ ಡುಜಾಕ್‌ನಲ್ಲಿ ಸಂಭವಿಸಿದ 7.4 ತೀವ್ರತೆಯ ಪ್ರಬಲ ಭೂಕಂಪಕ್ಕೆ 17 ಸಾವಿರ ಜನರು ಮತ್ತು ಇಸ್ತಾಂಬುಲ್‌ನಲ್ಲಿ ಒಂದು ಸಾವಿರ ಜನರು ಮೃತಪಟ್ಟಿದ್ದರು. 1939ರಲ್ಲಿ ಟರ್ಕಿಯ ಎರ್ಜಿನ್‌ಕೆನ್ ಪ್ರಾಂತ್ಯದಲ್ಲಿ ಸಂಭವಿಸಿದ 7.8 ತೀವ್ರತೆಯ ಭೂಕಂಪ 33 ಸಾವಿರ ಜನರನ್ನು ಬಲಿಪಡೆದಿತ್ತು.

ಪ್ರಾಥಮಿಕ ಮಾಹಿತಿ ಪ್ರಕಾರ
ಟರ್ಕಿಯಲ್ಲಿ 1,500ಕ್ಕೂ ಹೆಚ್ಚು ಜನ ಸಾವು
ಗಾಯಗೊಂಡವರು 8500ಕ್ಕೂ ಹೆಚ್ಚು
ಸಿರಿಯಾದಲ್ಲಿ 800ಕ್ಕೂ ಹೆಚ್ಚು ಜನ ಸಾವು
ಗಾಯಗೊಂಡವರು 1280ಕ್ಕೂ ಹೆಚ್ಚು

ಐಎನ್‌ಎಸ್ ವಿಕ್ರಾಂತ ಮೇಲೆ ಇಳಿದ ಲಘು ಯುದ್ಧವಿಮಾನ

ನವದೆಹಲಿ (ಪಿಟಿಐ): ಭಾರತವು ದೇಶೀಯವಾಗಿ ಅಭಿವೃದ್ಧಿಪಡಿಸಿದ ಲಘು ಯುದ್ಧ ವಿಮಾನವು (ಎಲ್‌ಸಿಎ-ನೌಕಾಪಡೆ) ಸೋಮವಾರ ವಿಮಾನವಾಹಕ ಯುದ್ಧನೌಕೆ ಐಎನ್‌ಎಸ್ ವಿಕ್ರಾಂತ್ ಮೇಲೆ ಬಂದಿಳಿಯಿತು. ಇದೊಂದು ಐತಿಹಾಸಿಕ ಮೈಲಿಗಲ್ಲು ಎಂದು ಭಾರತೀಯ ನೌಕಾಪಡೆಯು ಬಣ್ಣಿಸಿದೆ.

‘ನೌಕಾ ಪೈಲಟ್‌ಗಳು ಐಎನ್‌ಎಸ್ ವಿಕ್ರಾಂತ್ ಹಡಗಿನ ಮೇಲೆ ಎಲ್‌ಸಿಎನಲ್ಲಿ ಬಂದು ಇಳಿಯುತ್ತಿದ್ದಂತೆ ಭಾರತೀಯ ನೌಕಾಪಡೆಯು ಆತ್ಮನಿರ್ಭರ ಭಾರತದ ಕಡೆಗೆ ಐತಿಹಾಸಿಕ ಹೆಜ್ಜೆ ಇರಿಸಿದಂತಾಗಿದೆ’ ಎಂದು ನೌಕಾಪಡೆ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

‘ಸ್ವದೇಶಿ ಯುದ್ಧ ವಿಮಾನಗಳೊಂದಿಗೆ ಸ್ವದೇಶಿ ವಿಮಾನವಾಹಕ ನೌಕೆಯನ್ನು ವಿನ್ಯಾಸಗೊಳಿಸಲು, ಅಭಿವೃದ್ಧಿಪಡಿಸಲು, ನಿರ್ಮಿಸಲು ಮತ್ತು ನಿರ್ವಹಿಸುವಲ್ಲಿ ಭಾರತವು ತನ್ನ ಸಾಮರ್ಥ್ಯವನ್ನು ಲ್ಯಾಂಡಿಂಗ್ ಮೂಲಕ ಪ್ರದರ್ಶಿಸಿದೆ’ ಎಂದೂ ಅದು ಹೇಳಿದೆ.

ಬಾರ್ಡರ್–ಗಾವಸ್ಕರ್ ಕ್ರಿಕೆಟ್ ಟೆಸ್ಟ್ ಸರಣಿ: ಸ್ಪಿನ್ ಬೌಲಿಂಗ್ ಮೇಲೆ ಚಿತ್ತ; ರವಿಶಾಸ್ತ್ರಿ ಸಲಹೆ

ಕುಲದೀಪ್ ಮೂರನೇ ಸ್ಪಿನ್ನರ್ ಆಗಲಿ

ಬೆಂಗಳೂರು: ಆತಿಥೇಯ ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳ ನಡುವಣ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿ ಇದೇ ವಾರ ಆರಂಭವಾಗಲಿದೆ. ಸ್ಪಿನ್ನರ್‌ಗಳ ಮೇಲೆ ಎಲ್ಲರ ಗಮನ ಕೇಂದ್ರಿತವಾಗಿತ್ತದೆ.

ಆಸ್ಟ್ರೇಲಿಯಾ ತಂಡವು ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರನ್ನು ಎದುರಿಸಲು ಸಿದ್ಧತೆ ಆರಂಭಿಸಿದೆ. ಅದಕ್ಕಾಗಿ ವಿಶೇಷ ವಿವರಣೆಗಳ ರವಿಶಾಸ್ತ್ರಿ ಒಂದು ಸಲಹೆ ನೀಡಿದ್ದಾರೆ.

'ಭಾರತ ತಂಡವು ಮೂವರು ಸ್ಪಿನ್ನರ್‌ಗಳೊಂದಿಗೆ ಕಣಕ್ಕಿಳಿಯಬೇಕು. ಚೈನಾಮನ್ ಬೌಲರ್ ಕುಲದೀಪ್ ಯಾದವ್ ತೃತೀಯ ಸ್ಪಿನ್ನರ್ ಆಗಬೇಕು. ಜಡೇಜ ಮತ್ತು ಅಕ್ಷರ್ ಪಟೇಲ್ ಅವರ ಬೌಲಿಂಗ್ ಬಹುತೇಕ ಒಂದೇ ತೆರನಾಗಿದೆ. ಆದರೆ ಕುಲದೀಪ್ ವಿಭಿನ್ನ ಶೈಲಿ ಮತ್ತು ಸ್ಪಿನ್ ಪ್ರಯೋಗ ಮಾಡುತ್ತಾರೆ. ಅವರು ತಂಡಕ್ಕೆ ಉತ್ತಮ ಕಾಣಿಕೆ ನೀಡಬಲ್ಲರು' ಎಂದು ಶಾಸ್ತ್ರಿ ಹೇಳಿದರು.


ರವಿಶಾಸ್ತ್ರಿ

ಸರಣಿಯ ಅಧಿಕೃತ ಪ್ರಸಾರಕರಾದ ಸ್ಟಾರ್ ಸ್ಪೋರ್ಟ್ಸ್ ವಾಹಿನಿಯು ಸೋಮವಾರ ಆಯೋಜಿಸಿದ್ದ ಜಂಟಿ ಪತ್ರಿಕಾಗೋಷ್ಠಿಯಲ್ಲಿ (ವರ್ಚುವಲ್) ಅವರು ಮಾತನಾಡಿದರು. ಇದೇ ಸಂದರ್ಭದಲ್ಲಿ ಮತ್ತೊಬ್ಬ ವಿಶ್ಲೇಷಕ ವಿವರಣೆಗಾರ, ಆಸ್ಟ್ರೇಲಿಯಾದ ದಿಗ್ಗಜ ಇಯಾನ್ ಚಾಪೆಲ್ ಕೂಡ ಇದ್ದರು.

'ಅಶ್ವಿನ್ ಕೇಂದ್ರಿತವಾದ ಅತಿಯಾದ ಯೋಜನೆ ರೂಪಿಸಬಾರದು. ಅವರಿಗೆ ತಮ್ಮದೇ ಯೋಜನೆಗಳಿರುತ್ತವೆ. ಅಪ್ಪಾರವಾದ ಅವರಿಗೆ ಆಡುವ ಅವಕಾಶ ಕೊಡಬೇಕು. ಆದರಿಂದಾಗಿ ಅವರು ಇಡೀ ಸರಣಿಯ ಫಲಿತಾಂಶವನ್ನೇ ಬದಲಿಸಬಲ್ಲರು. ಅಶ್ವಿನ್ ಒಬ್ಬ ಪರಿಪೂರ್ಣ ಪ್ಯಾಕೇಜ್. ಅವರು ಪ್ರಮುಖ ಹಂತದಲ್ಲಿ ವಿಕೆಟ್ ಉರುಳಿಸಬಲ್ಲರು ಮತ್ತು ಕೆಳಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ರನ್‌ಗಳನ್ನೂ ಗಳಿಸಬಲ್ಲರು. ಅವರು ವಿಶ್ವದರ್ಜೆಯ ಆಲ್‌ರೌಂಡರ್' ಎಂದು ರವಿಶಾಸ್ತ್ರಿ ಅಭಿಪ್ರಾಯಪಟ್ಟರು.

'ಪಂದ್ಯದಲ್ಲಿ ಟಾಸ್ ಸೋತು ಮೊದಲು ಬೌಲಿಂಗ್ ಮಾಡಬೇಕಾದರೆ ಕುಲದೀಪ್ ಯಾದವ್ ಉಪಯುಕ್ತವಾಗುತ್ತಾರೆ. ಎರಡನೇ ಇನಿಂಗ್ಸ್ ಹೊತ್ತಿಗೆ ಆಸ್ಟ್ರೇಲಿಯಾ ವೇಗಿಗಳು ಹಾಕಿದ ಎಸೆತಗಳ ಪ್ಯಾಚ್ ಪಿಚ್ ಮೇಲೆ ಕುಲದೀಪ್ ಮತ್ತಷ್ಟು ಮಿಂಚಬಹುದು. ಭಾರತ ತಂಡವು ತವರಿನಲ್ಲಿ ಆಡುವ ಅವಕಾಶವನ್ನು ಬಳಸಿಕೊಳ್ಳಬೇಕು. ಮೊದಲ ದಿನದಿಂದಲೇ ಚೆಂಡು ಸ್ಪಿನ್ ಆಗುವಂತಹ ಪಿಚ್ ಸಿದ್ಧಗೊಳಿಸಬೇಕು' ಎಂದು ಭಾರತ ತಂಡದ ಮಾಜಿ ಕೋಚ್ ರವಿಶಾಸ್ತ್ರಿ ಹೇಳಿದರು.

ಬ್ಯಾಟಿಂಗ್ ಕುರಿತು ಮಾತನಾಡಿದ ಅವರು, '12 ಜನರ ಬಳಗದಲ್ಲಿ ಶುಭಮನ್ ಗಿಲ್ ಇರಬೇಕು. ಆದರೆ ಸೂರ್ಯಕುಮಾರ್ ಯಾದವ್ ಅವರನ್ನು ಐದನೇ ಕ್ರಮಾಂಕದಲ್ಲಿ ಆಡಿಸುವ ಕಠಿಣ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಭಾರತದಲ್ಲಿ ಬ್ಯಾಟಿಂಗ್ ಮಾಡುವಾಗ ಬ್ಯಾಟರ್‌ಗಳು ಒಂಟಿ ಮತ್ತು ಎರಡು ರನ್‌ಗಳನ್ನು ಪಡೆಯುತ್ತ ರೊಟೇಟ್ ಮಾಡ್ತಿರಬೇಕು. ಮೇಡನ್ ಓವರ್ ಆಗಲು ಬಿಡಬಾರದು. ಚುರುಕಾಗಿ 30–40 ರನ್ ಗಳಿಸಿಕೊಂಡರೆ ಮುಂದಿನ ಹಾದಿ ಸುಲಭ' ಎಂದರು.

'ಭಾರತದಲ್ಲಿ ಯಶಸ್ಸು ಆ್ಯಷಸ್ ಗೆಲುವಿಗಿಂತ ಶ್ರೇಷ್ಠ'

ನಾಗಪುರ (ಪಿಟಿಐ): ಭಾರತದಲ್ಲಿ ಸರಣಿ ಜಯಿಸುವುದು ಆ್ಯಷಸ್ ಟ್ರೋಫಿ ಗೆಲುವಿಗಿಂತಲೂ ದೊಡ್ಡದು ಎಂದು ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಮತ್ತು ಆಟಗಾರರು ಹೇಳಿದ್ದಾರೆ.

ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ತಂಡದ ಆಟಗಾರರು ಕ್ರಿಕೆಟ್.ಕಾಮ್ ಎಯು. ಅವರ ವೆಬ್‌ಸೈಟ್‌ನಲ್ಲಿ ಪ್ರಕಟವಾಗಲಿರುವ ವಿಡಿಯೊದಲ್ಲಿ ಮಾತನಾಡಿದ್ದಾರೆ. ಡೇವಿಡ್ ವಾರ್ನರ್ ಮತ್ತು ಸ್ಟೀವ್ ಸ್ಮಿತ್ ಸಹ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಭಾರತದಲ್ಲಿ ಟೆಸ್ಟ್ ಪಂದ್ಯ ಗೆಲ್ಲುವುದೇ ಕಷ್ಟ. ಅದರಲ್ಲೂ ಇಡೀ ಸರಣಿ ಜಯಿಸುವುದು ಇನ್ನೂ ದೊಡ್ಡ ಸವಾಲು. ನಾವು ಗದ್ದರೆ ಆಡೊಂದು ಬಹಳ ದೊಡ್ಡ ಸಾಧನೆಯೇ ಆಗಲಿದೆ. ಆ್ಯಷಸ್ ಸರಣಿ ಜಯಿಸುವುದಕ್ಕಿಂತಲೂ ಬೃಹತ್ ಸಾಧನೆಯಾಗುವುದು' ಎಂದು ಸ್ಮಿತ್ ಹೇಳಿದ್ದಾರೆ.

'ನಾನು ಹೋದ ಆ್ಯಷಸ್ ಸರಣಿಯಲ್ಲಿ ಆಡಿದ್ದು ಒಳ್ಳೆಯ ಅನುಭವ. ಆದರೆ, ಭಾರತದಲ್ಲಿ ಟೆಸ್ಟ್ ಆಡುವುದು ಮತ್ತು ಗೆಲ್ಲುವುದು ಕಠಿಣ ಸವಾಲು.


ಸ್ಟೀವನ್ ಸ್ಮಿತ್ ಮತ್ತು ಡೇವಿಡ್ ವಾರ್ನರ್

ವಿಶ್ವದ ಶ್ರೇಷ್ಠ ಸ್ಪಿನ್ನರ್‌ಗಳನ್ನು ಎದುರಿಸುವುದು ಕಷ್ಟಕರ' ಎಂದು ವಾರ್ನರ್ ಹೇಳಿದ್ದಾರೆ.

'ಭಾರತದಲ್ಲಿ ಗೆಲುವು ಸಾಧಿಸುವುದು ವಿಶೇಷ ಸಾಧನೆಯಾಗಲಿದ್ದು ಅದು ಆಸ್ಟ್ರೇಲಿಯಾದ ಕೀರ್ತಿ ಕಿರೀಟಕ್ಕೆ ಅಲಂಕಾರ ಆಗುತ್ತದೆ. ಭಾರತದಲ್ಲಿರುವ ವಿಭಿನ್ನ ವಾತಾವರಣಕ್ಕೆ ಹೊಂದಿಕೊಂಡು ಆಡುವುದು ಬಹಳ ಕಷ್ಟ. ಆ ವಾತಾವರಣ ಮತ್ತು ಸವಾಲುಗಳ ಭಾರತೀಯ ಆಟಗಾರರನ್ನು ಶಕ್ತಿಯುತ ಮಾಡಿವೆ' ಎಂದು ವೇಗಿ ಮಿಚೆಲ್ ಸ್ಟಾರ್ಕ್ ಹೇಳಿದ್ದಾರೆ.

ರಿಷಭ್ ಪಂತ್ ಅನುಪಸ್ಥಿತಿ ಕಾಡಲಿದೆ: ಚಾಪೆಲ್

ಹೋದ ತಿಂಗಳು ರಸ್ತೆ ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ವಿಕೆಟ್‌ಕೀಪರ್ ರಿಷಭ್ ಪಂತ್ ಈ ಸರಣಿಯಲ್ಲಿ ಆಡುವುದಿಲ್ಲ. ಇದರಿಂದಾಗಿ ಭಾರತ ತಂಡಕ್ಕೆ ಅವರ ಅನುಪಸ್ಥಿತಿ ಕಾಡಲಿದೆ ಎಂದು ಇಯಾನ್ ಚಾಪೆಲ್ ಅಭಿಪ್ರಾಯಪಟ್ಟರು. 'ಈ ಹಿಂದೆ ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ಗಳಲ್ಲಿ ಅವರ ಆಟ ಅಮೋಘವಾಗಿತ್ತು. ಏಕಾಏಕಿ ಅವರು ಈ ಸರಣಿಯಲ್ಲಿ ಇದ್ದಿದ್ದರೆ ಆಸ್ಟ್ರೇಲಿಯಾ ಆಟಗಾರರಿಗೆ ನಿದ್ದೆಯೇ ಬರುತ್ತಿರಲಿಲ್ಲ. ಏಕೆಂದರೆ, ರಿಷಭ್ ಒಮ್ಮೆ ಕ್ರೀಸ್‌ನಲ್ಲಿ ಹೊಂದಿಕೊಂಡರೆ ನಿಯಂತ್ರಿಸುವುದು ಕಷ್ಟ. ಪಂದ್ಯದ ದಿಕ್ಕನ್ನೇ ಬದಲಿಸಿಬಿಡುತ್ತಾರೆ. ಬಹಳ ದಿಟ್ಟ ಹೋರಾಟಗಾರ ಅವರು. ಅವರಿಲ್ಲದಿದ್ದರೂ ಭಾರತ ತಂಡವೇ ಫೇವರಿಟ್ ಆಗಿದೆ' ಎಂದರು.

ರಣಜಿ ಕ್ರಿಕೆಟ್ ಸೆಮಿಫೈನಲ್: ಮಯಂಕ್ ಬಳಗಕ್ಕೆ ನಿಹಾಲ್

ಬೆಂಗಳೂರು: ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಆಡಲಿರುವ ಕರ್ನಾಟಕ ತಂಡದಿಂದ ವಿಕೆಟ್‌ಕೀಪರ್ ಬಿ.ಆರ್. ಶರತ್ ಅವರನ್ನು ಕೈಬಿಟ್ಟು ನಿಹಾಲ್ ಉಲ್ಲಾಳ ಅವರನ್ನು ಆಯ್ಕೆ ಮಾಡಲಾಗಿದೆ. ಕಳೆದ ಪಂದ್ಯದಲ್ಲಿ ಶರತ್ ಅವರು ಗಾಯಗೊಂಡಿದ್ದರು.


ಮಯಂಕ್

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಸೋಮವಾರ ತಂಡವನ್ನು ಪ್ರಕಟಿಸಿದೆ.

ಶರತ್ ಹೊರಬಿದ್ದಿದ್ದರೆ ಉಳಿದ ಆಟಗಾರರು ತಂಡದಲ್ಲಿ ಮುಂದುವರಿದಿದ್ದಾರೆ. ಮಯಂಕ್ ಅಗರವಾಲ್ ನಾಯಕತ್ವದ ಬಳಗವು ಇದೇ 8ರಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಸೌರಾಷ್ಟ್ರ ತಂಡವನ್ನು ಎದುರಿಸಲಿದೆ.

ಹೋದ ವಾರ ನಡೆದಿದ್ದ ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ ತಂಡವು ಉತ್ತರಾಖಂಡ ಎದುರು ಜಯಿಸಿತ್ತು.

ತಂಡ: ಮಯಂಕ್ ಅಗರವಾಲ್ (ನಾಯಕ), ಆರ್. ಸಮರ್ಥ್ (ಉಪನಾಯಕ), ನಿಕಿನ್ ಜೋಸ್, ದೇವದತ್ತ ಪಡಿಕ್ಕಲ್, ಮನೀಶ್ ಪಾಂಡೆ, ಕೆ.ವಿ. ಸಿದ್ಧಾರ್ಥ್, ಶರತ್ ಶ್ರೀನಿವಾಸ್, ನಿಹಾಲ್ ಉಲ್ಲಾಳ (ಇಬ್ಬರೂ ವಿಕೆಟ್‌ಕೀಪರ್), ಕೃಷ್ಣಪ್ಪ ಗೌತಮ್, ಶ್ರೇಯಸ್ ಗೋಪಾಲ್, ವಿ. ಕೌಶಿಕ್, ವಿದ್ವತ್ ಕಾವೇರಪ್ಪ, ವಿ. ವೈಶಾಖ, ಎಂ. ವೆಂಕಟೇಶ್, ಶುಭಾಂಗ್ ಹೆಗಡೆ. ಪಿ.ವಿ. ಶಶಿಕಾಂತ್ (ಕೋಚ್), ದೀಪಕ್ ಚೌಗುಲೆ (ಫೀಲ್ಡಿಂಗ್ ಕೋಚ್), ಎ. ರಮೇಶ್ ರಾವ್ (ಮ್ಯಾನೇಜರ್), ಜಾಬಶ್ಯಾಮ (ಫಿಸಿಯೊ), ಕೆ.ಸಿ. ಅವಿನಾಶ್ (ಸ್ಟ್ರೆಂಥ್ ಕಂಡಿಷನಿಂಗ್ ಕೋಚ್), ಸಿ.ಎಂ. ಸೋಮಸುಂದರ್ (ಮಸಾಜ್ ತಜ್ಞ), ರಾಜಕೀರ್ತಿ ಕಹಾಡಿಯಾ (ವಿಡಿಯೊ ಅನಲಿಸ್ಟ್).


ಪದಕದೊಂದಿಗೆ ತಾನ್ಯಾ ಹೇಮಂತ್

ತಾನ್ಯಾ ಚಾಂಪಿಯನ್

ತೆಹರಾನ್ (ಪಿಟಿಐ): ಬೆಂಗಳೂರಿನ ತಾನ್ಯಾ ಹೇಮಂತ್ ಅವರು ಇರಾನ್‌ನಲ್ಲಿ ನಡೆದ '31ನೇ ಫಜ್ರ್ ಇಂಟರ್‌ನ್ಯಾಷನಲ್ ಚಾಲೆಂಜ್' ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಭಾನುವಾರ ರಾತ್ರಿ ನಡೆದ ಫೈನಲ್‌ನಲ್ಲಿ ತಾನ್ಯಾ 21–7, 21–11 ರಲ್ಲಿ ಅಗ್ರಶ್ರೇಯಾಂಕದ ಆಟಗಾರ್ತಿ ಭಾರತದವರೇ ಆದ ತಸ್ನೀಮ್ ಮೀರ್ ವಿರುದ್ಧ ಗೆದ್ದರು. ತಾನ್ಯಾ ಎರಡೂ ಗೇಮ್‌ಗಳಲ್ಲಿ ಪೂರ್ಣ ಪ್ರಭುತ್ವ ಮೆರೆದರು. ಕರ್ನಾಟಕದ ಆಟಗಾರ್ತಿ ಬಿಡಬ್ಲ್ಯುಎಫ್ ಟೂರ್ನಿಯಲ್ಲಿ ತಸ್ನೀಮ್ ವಿರುದ್ಧ ದೊರೆತ ಮೊದಲ ಗೆಲುವು ಇದು. ಈ ಹಿಂದಿನ ಎರಡು ಪಂದ್ಯಗಳಲ್ಲಿ ಗುಜರಾತಿನ ಆಟಗಾರ್ತಿ ಗೆದ್ದಿದ್ದರು.

ಏಷ್ಯನ್ ಒಳಾಂಗಣ ಅಥ್ಲೆಟಿಕ್ಸ್: ಅಭಿನಯಾ ಶೆಟ್ಟಿಗೆ ಸ್ಥಾನ

ನವದೆಹಲಿ (ಪಿಟಿಐ): ಕರ್ನಾಟಕದ ಹೈಜಂಪ್ ಸ್ಪರ್ಧಿ ಅಭಿನಯಾ ಶೆಟ್ಟಿ ಅಲ್ಲದೆ ಶಾಟ್‌ಪಟ್ ಸ್ಪರ್ಧಿ ತಜಿಂದರ್‌ಪಾಲ್ ಸಿಂಗ್ ತೂರ್, ಸ್ಪ್ರಿಂಟರ್ ಅಮ್ಲನ್ ಬೊರ್ಗೊಹೈನ್ ಸೇರಿದಂತೆ 25 ಪ್ರಮುಖ ಅಥ್ಲೀಟ್‌ಗಳು ಏಷ್ಯನ್ ಒಳಾಂಗಣ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಕಜಕಸ್ತಾನದ ಅಸ್ತಾನದಲ್ಲಿ ಫೆ.10 ರಿಂದ 12ರ ವರೆಗೆ ನಡೆಯುವ ಕೂಟದಲ್ಲಿ ಪಾಲ್ಗೊಳ್ಳುವ ಭಾರತ ತಂಡವನ್ನು ಸೋಮವಾರ ಪ್ರಕಟಿಸಲಾಯಿತು. ಲಾಂಗ್‌ಜಂಪ್ ಸ್ಪರ್ಧಿಗಳಾದ ಜೆಸ್ವಿನ್ ಆಲ್ಡ್ರಿನ್ ಮತ್ತು ಮುಹಮ್ಮದ್ ಅನೀಸ್ ಯಾಹ್ಯಾ ತಂಡದಲ್ಲಿದ್ದಾರೆ.

ಭಾರತ ತಂಡ: ಪುರುಷರು: ಏಲಕ್ಕಿಯಾ ದಾಸನ್ (60 ಮೀ. ಓಟ), ಅಮ್ಲನ್ ಬೊರ್ಗೊಹೈನ್ (60 ಮೀ. ಓಟ), ತೇಜಸ್ ಶಿರ್ಸೆ (60 ಮೀ. ಹರ್ಡಲ್), ಸರ್ವೇಶ್ ಅನಿಲ್ ಕುಶಾರೆ, ಟಿ.ಆರೋಮಲ್ (ಹೈಜಂಪ್), ಶಿವ ಸುಬ್ರಮಣ್ಯನ್, ಪ್ರಶಾಂತ್ ಸಿಂಗ್ ಕನ್ನಾಯಿಯಾ (ಪೋಲ್‌ವಾಲ್ಟ್), ಜೆಸ್ವಿನ್ ಆಲ್ಡ್ರಿನ್, ಮುಹಮ್ಮದ್ ಅನೀಸ್ ಯಾಹ್ಯಾ (ಲಾಂಗ್ ಜಂಪ್), ಪ್ರವೀಣ್ ಚಿತ್ರವೇಲ್, ಎ.ಬಿ.ಅರುಣ್ (ಟ್ರಿಪಲ್ ಜಂಪ್), ತೇಜಿಂದರ್‌ಪಾಲ್ ಸಿಂಗ್, ಕರಣ್‌ವೀರ್ (ಶಾಟ್‌ಪಟ್)

ಮಹಿಳೆಯರು: ಜ್ಯೋತಿ ಯರ್ರಾಜಿ (60 ಮೀ. ಓಟ, 60 ಮೀ. ಹರ್ಡಲ್), ಅರ್ಚನಾ ಸುಶೀಂದ್ರನ್ (60 ಮೀ. ಓಟ), ಸಪ್ನಾ ಕುಮಾರಿ (60 ಮೀ. ಹರ್ಡಲ್), ಅಭಿನಯಾ ಶೆಟ್ಟಿ (ಹೈಜಂಪ್), ರೋಸಿ ಮೀನಾ ಪಾಲ್‌ರಾಜ್, ಪವಿತ್ರಾ ವೆಂಕಟೇಶ್ (ಪೋಲ್‌ವಾಲ್ಟ್), ಶೈಲಿ ಸಿಂಗ್ (ಲಾಂಗ್‌ಜಂಪ್), ಎನ್.ವಿ.ಶೀನಾ, ಪೂರ್ವಾ ಹಿತೇಶ್ ಸಾವಂತ್ (ಟ್ರಿಪಲ್ ಜಂಪ್), ಅಭಾ ಕಥುವಾ (ಶಾಟ್‌ಪಟ್), ಸ್ವಪ್ನಾ ಬರ್ಮನ್, ಸೌಮ್ಯಾ ಮುರುಗನ್ (ಪೆಂಟಥ್ಲಾನ್).




ಅಹಮದಾಬಾದ್ ಡಿಫೆಂಡರ್ಸ್ ತಂಡದ ಡೇನಿಯಲ್ ಅವರ ಸ್ಮ್ಯಾಷ್‌ಅನ್ನು ಎದುರಾಳಿ ಹೈದರಾಬಾದ್ ತಂಡದ ಜಾನ್ ಜೋಸೆಫ್ ತಡೆಯಲು ಪ್ರಯತ್ನಿಸಿದರು ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಬ್ಲ್ಯಾಕ್‌ಹಾಕ್ಸ್‌ಗೆ ಮಣಿದ ಡಿಫೆಂಡರ್ಸ್

ಬೆಂಗಳೂರು: ಹೈದರಾಬಾದ್ ಬ್ಲ್ಯಾಕ್‌ಹಾಕ್ಸ್ ತಂಡದವರು ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಶುಭಾರಂಭ ಮಾಡಿದರು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಹೈದರಾಬಾದ್ ತಂಡ 3–2 ರಲ್ಲಿ ಅಹಮದಾಬಾದ್ ಡಿಫೆಂಡರ್ಸ್ ತಂಡವನ್ನು ಮಣಿಸಿತು.

ಜಿದ್ದಾಜಿದ್ದಿನ ಸೆಣಸಾಟ ನಡೆದ ಮೊದಲ ಗೇಮ್‌ನಲ್ಲಿ ಹೈದರಾಬಾದ್ 13–15 ರಲ್ಲಿ ಸೋಲನುಭವಿಸಿತು.

ಆ ಬಳಿಕ ಚುರುಕಿನ ಸರ್ವ್ ಮತ್ತು ವೇಗದ ಸ್ಮ್ಯಾಷ್‌ಗಳ ಮೂಲಕ ಮರುಹೋರಾಟ ನಡೆಸಿ ಮುಂದಿನ ಮೂರು ಗೇಮ್‌ಗಳನ್ನು 15–9, 15–14, 15–11 ರಲ್ಲಿ ಗೆದ್ದುಕೊಂಡಿತು. ಐದನೇ ಗೇಮ್ 15–10 ರಲ್ಲಿ ಜಯಿಸಿದ ಡಿಫೆಂಡರ್ಸ್ ತಂಡ ಸೋಲಿನ ಅಂತರ ತಗ್ಗಿಸಿತು.

ಇಂದಿನ ಪಂದ್ಯ: ಕೊಚ್ಚಿ ಬ್ಲೂ ಸ್ಪೈಕರ್ಸ್–ಚೆನ್ನೈ ಬ್ಲಿಟ್ಜ್ (ಆರಂಭ: ಸಂಜೆ 7)

ಟಿ20: ಎಲ್ಲ ಪಂದ್ಯಗಳೂ ಮುಂಬೈನಲ್ಲಿ ಆಯೋಜನೆ

ಡಬ್ಲ್ಯುಪಿಎಲ್ ಮಾರ್ಚ್ 4ರಿಂದ

ನವದೆಹಲಿ (ಪಿಟಿಐ): ಪ್ರಪ್ರಥಮ ಮಹಿಳೆಯರ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟೂರ್ನಿಯು ಮಾರ್ಚ್ 4 ರಿಂದ 26ರವರೆಗೆ ಆಯೋಜನೆಗೊಳ್ಳಲಿದೆ.

ಮುಂಬೈನ ಬ್ರೆಬೋರ್ನ್ ಕ್ರೀಡಾಂಗಣ ಹಾಗೂ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಟೂರ್ನಿಯ ನಡೆಯಲಿದೆ. ಮೊದಲ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ಹಾಗೂ ಮುಂಬೈ ಇಂಡಿಯನ್ಸ್ ತಂಡಗಳು ಮುಖಾಮುಖಿಯಾಗುವ ಸಾಧ್ಯತೆ ಇದೆ.

'ಇದೇ ಮೊದಲ ಸಲ ಮಹಿಳಾ ಐಪಿಎಲ್ ಪೂರ್ಣಪ್ರಮಾಣದಲ್ಲಿ ಆಯೋಜನೆಗೊಳ್ಳಲಿದೆ. ಮುಂಬೈನಲ್ಲಿ ಮಾರ್ಚ್ 4ರಿಂದ 26ರವರೆಗೆ ನಡೆಯುವುದು' ಎಂದು ಐಪಿಎಲ್ ಮುಖ್ಯಸ್ಥ ಅರುಣ್ ಧುಮಾಲ್ ಸೋಮವಾರ ತಿಳಿಸಿದ್ದಾರೆ.


ಅರುಣ್ ಧುಮಾಲ್

ಮುಂಬೈನಲ್ಲಿ ಇದೇ 13ರಂದು ಆಟಗಾರ್ತಿಯರ ಹರಾಜು ಪ್ರಕ್ರಿಯೆ ಜರುಗಲಿದೆ. 1500 ಆಟಗಾರ್ತಿಯರು ನೋಂದಣಿ ಮಾಡಿಕೊಂಡಿದ್ದಾರೆ. ಇದೇ ವಾರ ಅಂತಿಮ ಪಟ್ಟಿ ಬಿಡುಗಡೆಯಾಗುವ ನಿರೀಕ್ಷೆ ಇದೆ.

12ರಂದು ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಭಾರತವು ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

ಈಚೆಗೆ ನಡೆದಿದ್ದ ತಂಡಗಳ ಬಿಡ್‌ನಲ್ಲಿ ಬಿಸಿಸಿಐ ₹4669 ಕೋಟಿ ಗಳಿಸಿತ್ತು. ಐದು ತಂಡಗಳು ಮಾರಾಟವಾಗಿದ್ದವು. ಮುಂಬೈ ಇಂಡಿಯನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು, ಡೆಲ್ಲಿ ಕ್ಯಾಪಿಟಲ್ಸ್, ಕ್ಯಾಪ್ರಿ ಗ್ಲೋಬಲ್ ಹೋಲ್ಡಿಂಗ್ಸ್ (ಲಖನೌ) ಹಾಗೂ ಅದಾನಿ ಸ್ಪೋರ್ಟ್ಸ್‌ಲೈನ್ ತಂಡಗಳನ್ನು ಖರೀದಿಸಿವೆ.



ಬಿಬಿಸಿ ಪ್ರಶಸ್ತಿಗೆ ಸಾಕ್ಷಿ ಮಲಿಕ್, ವಿನೇಶಾ ನಾಮನಿರ್ದೇಶನ

ನವದೆಹಲಿ (ಪಿಟಿಐ): ಒಲಿಂಪಿಯನ್ ಕುಸ್ತಿಪಟುಗಳಾದ ವಿನೇಶಾ ಫೋಗಟ್ ಹಾಗೂ ಸಾಕ್ಷಿ ಮಲಿಕ್ ಅವರನ್ನು ಬಿಬಿಸಿ ಭಾರತದ ಮಹಿಳಾ ಕ್ರೀಡಾಪಟು ವಾರ್ಷಿಕ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ.



ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿ ನಡೆದಿದ್ದ ಕುಸ್ತಿಪಟುಗಳ ಧರಣಿಯಲ್ಲಿ ವಿನೇಶಾ ಮತ್ತು ಸಾಕ್ಷಿ ಕೂಡ ಭಾಗವಹಿಸಿದ್ದರು. ಸೋಮವಾರ ಪ್ರಕಟಿಸಲಾಗಿರುವ ಪಟ್ಟಿಯಲ್ಲಿ ಭಾರತದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು, ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಮತ್ತು ಬಾಕ್ಸಿಂಗ್ ತಾರೆ ನಿಖತ್ ಜರೀನ್ ಅವರಿದ್ದಾರೆ.

ತಜ್ಞ ನಿರ್ಣಾಯಕರ ತಂಡವು ಈ ಪಟ್ಟಿಯನ್ನು ಪ್ರಕಟಿಸಿದೆ. ಇದರಲ್ಲಿ ಕ್ರೀಡಾ ಪತ್ರಕರ್ತರು ಹಾಗೂ ಲೇಖಕರು ಇದ್ದರು. ಆಟಗಾರರ ಸಾಧನೆಗಳ ಆಧಾರದಲ್ಲಿ ಅವರು ಮತ ಹಾಕಿದ್ದಾರೆ. ಸೋಮವಾರದಿಂದ ಸಾರ್ವಜನಿಕ ಮತ ನೀಡಿಕೆಯೂ ಆರಂಭವಾಗಲಿದೆ. ಫೆಬ್ರುವರಿ 20ರ ಮಧ್ಯರಾತ್ರಿಯವರೆಗೂ ವೋಟಿಂಗ್ ಅವಕಾಶವಿದೆ. ಮಾರ್ಚ್ 5ರಂದು ವಿಜೇತರನ್ನು ಘೋಷಿಸಲಾಗುವುದು.

ಈ ವರ್ಷ ಬಿಬಿಸಿ ಭಾರತೀಯ ಸ್ಟಾರ್ ಕ್ರೀಡಾಮಹಿಳೆ ಪ್ರಶಸ್ತಿಯನ್ನು ನೀಡಲು ಆರಂಭಿಸಲಾಗುತ್ತಿದೆ ಎಂದು ಬಿಬಿಸಿ ನ್ಯೂಸ್ ಭಾರತದ ಮುಖ್ಯಸ್ಥೆ ರೂಪಾ ಝಾ ತಿಳಿಸಿದ್ದಾರೆ.

ಟೆಸ್ಟ್: ಬ್ರಾಥ್‌ವೇಟ್, ಚಂದ್ರಪಾಲ್ ದಾಖಲೆ ಜತೆಯಾಟ

ಬುಲವಾಯೊ, ಜಿಂಬಾಬ್ವೆ (ಎಎಫ್‌ಪಿ): ಕ್ರೇಗ್ ಬ್ರಾಥ್‌ವೇಟ್ ಮತ್ತು ತೇಜ್‌ನಾರಾಯಣ ಚಂದ್ರಪಾಲ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ವೆಸ್ಟ್ ಇಂಡೀಸ್ ಪರ ಮೊದಲ ವಿಕೆಟ್‌ಗೆ ದಾಖಲೆ ಜತೆಯಾಟ ನೀಡಿದರು.

ಜಿಂಬಾಬ್ವೆ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಇವರು ಆರಂಭಿಕ ವಿಕೆಟ್‌ಗೆ 336 ರನ್ ಸೇರಿಸಿದರು. ಬ್ರಾಥ್‌ವೇಟ್ 182 ರನ್ ಗಳಿಸಿದರೆ (312 ಎ., 4X18) ತೇಜ್‌ನಾರಾಯಣ್ 207 (467 ಎ.) ರನ್ ಗಳಿಸಿ ಅಜೇಯರಾಗಿ ಉಳಿದರು. ಗೋರ್ಡನ್ ಗ್ರೀನಿಜ್ ಮತ್ತು ಡೆಸ್ಮಂಡ್ ಹೇನ್ಸ್ ಅವರು 33 ವರ್ಷಗಳ ಹಿಂದೆ ಇಂಗ್ಲೆಂಡ್ ವಿರುದ್ಧ ಕಲೆಹಾಕಿದ್ದ 298 ರನ್‌ಗಳ ಜತೆಯಾಟವನ್ನು ಇವರು ಮುರಿದರು.

ಮೂರನೇ ದಿನ ಸೋಮವಾರ ವಿಂಡೀಸ್, 6 ವಿಕೆಟ್‌ಗಳಿಗೆ 447 ರನ್ ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಮೂರನೇ ದಿನದಾಟದ ಅಂತ್ಯಕ್ಕೆ ಜಿಂಬಾಬ್ವೆ ತಂಡ 3 ವಿಕೆಟ್‌ಗಳಿಗೆ 114 ರನ್ ಗಳಿಸಿದೆ.

ಟಿ20 ಕ್ರಿಕೆಟ್: ಭಾರತ ಮಹಿಳೆಯರಿಗೆ ನಿರಾಸೆ

ಕೇಪ್‌ಟೌನ್ (ಪಿಟಿಐ): ಭಾರತ ಮಹಿಳಾ ತಂಡದವರು, ಐಸಿಸಿ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಅಭ್ಯಾಸ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು 44 ರನ್‌ಗಳಿಂದ ಸೋತರು. ಸೋಮವಾರ ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ 8 ವಿಕೆಟ್‌ಗಳಿಗೆ 129 ರನ್ ಗಳಿಸಿದರೆ, ಭಾರತ 15 ಓವರ್‌ಗಳಲ್ಲಿ 85 ರನ್‌ಗಳಿಗೆ ಆಲೌಟಾಯಿತು.

ಕ್ರಿಕೆಟ್: ಮಿಂಚಿದ ವೃಂದಾ, ಸಹನಾ; ಫೈನಲ್‌ಗೆ ಕರ್ನಾಟಕ

ಬೆಂಗಳೂರು: ವೃಂದಾ ದಿನೇಶ್ ಮತ್ತು ದಿವ್ಯಾ ಜ್ಞಾನಾನಂದ ಗಳಿಸಿದ ಅರ್ಧಶತಕ ಹಾಗೂ ಸಹನಾ ಎಸ್. ಪವಾರ್ ಅವರ ಪ್ರಭಾವಿ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡ ಬಿಸಿಸಿಐ ಮಹಿಳಾ ಏಕದಿನ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ರಾಂಚಿಯಲ್ಲಿ ನಡೆಯುತ್ತಿರುವ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ವೇದಾ ಕೃಷ್ಣಮೂರ್ತಿ ನೇತೃತ್ವದ ತಂಡ 57 ರನ್‌ಗಳಿಂದ ರಾಜಸ್ತಾನ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಕರ್ನಾಟಕ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 256 ರನ್ ಗಳಿಸಿತು. ವೃಂದಾ (81 ರನ್, 104 ಎ, 4X9, 6X1) ಮತ್ತು ದಿವ್ಯಾ (71 ರನ್, 72 ಎ., 4X7, 6X2) ತಂಡಕ್ಕೆ ಆಸರೆಯಾದರು. ಶಿಶಿರಾ ಎ.ಗೌಡ 32 ಹಾಗೂ ವೇದಾ 37 ರನ್ ಕಲೆಹಾಕಿದರು.

ರಾಜಸ್ತಾನ ತಂಡ 45 ಓವರ್‌ಗಳಲ್ಲಿ 199 ರನ್‌ಗಳಿಗೆ ಆಲೌಟಾಯಿತು. ಎ.ಡಿ. ಗಾರ್ಗ್ (71) ಮಾತ್ರ ಅಲ್ಪ ಹೋರಾಟ ನಡೆಸಿದರು. ಸಹನಾ 41 ರನ್‌ಗಳಿಗೆ ನಾಲ್ಕು ವಿಕೆಟ್ ಪಡೆದರು.

ಮಂಗಳವಾರ ನಡೆಯಲಿರುವ ಫೈನಲ್‌ನಲ್ಲಿ ಕರ್ನಾಟಕ ತಂಡ, ರೈಲ್ವೇಸ್ ವಿರುದ್ಧ ಪೈಪೋಟಿ ನಡೆಸಲಿದೆ.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 256 (ವೃಂದಾ ದಿನೇಶ್ 81, ದಿವ್ಯಾ ಜ್ಞಾನಾನಂದ 71, ಬಿ.ಆರ್. ಮೀಣಾ 48ಕ್ಕೆ 3) ರಾಜಸ್ತಾನ: 45 ಓವರ್‌ಗಳಲ್ಲಿ 199 (ಎ.ಡಿ.ಗಾರ್ಗ್ 71, ಪಿ. ಜಯಂತ ಅಬ್ಬರ್ 49, ಸಹನಾ ಎಸ್.ಪವಾರ್ 41ಕ್ಕೆ 4, ಶ್ರೇಯಾಂಕಾ ಆರ್.ಪಾಟೀಲ್ 37ಕ್ಕೆ 2) ಫಲಿತಾಂಶ: ಕರ್ನಾಟಕಕ್ಕೆ 57 ರನ್ ಗೆಲುವು

ಸಂಕ್ಷಿಪ್ತ ಸುದ್ದಿ

ಫುಟ್‌ಬಾಲ್: ನಾಕೌಟ್‌ಗೆ ಕರ್ನಾಟಕ

ಬೆಂಗಳೂರು: ಕರ್ನಾಟಕ ತಂಡದವರು ಮಧ್ಯಪ್ರದೇಶದಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಯೂತ್ ಗೇಮ್ಸ್ ಫುಟ್‌ಬಾಲ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಸೋತರು. ಆದರೂ ರಾಜ್ಯ ತಂಡ ನಾಕೌಟ್‌ನಲ್ಲಿ ಸ್ಥಾನ ಪಡೆದುಕೊಂಡಿತು.

ಸೋಮವಾರ ನಡೆದ ಪಂದ್ಯದಲ್ಲಿ ಮೇಘಾಲಯ 2–1 ಗೋಲುಗಳಿಂದ ಕರ್ನಾಟಕ ತಂಡವನ್ನು ಮಣಿಸಿತು. ಎಸ್.ಪಿ.ಅಭಿಷೇಕ್ ಅವರು 4ನೇ ನಿಮಿಷದಲ್ಲಿ ಕರ್ನಾಟಕ ತಂಡಕ್ಕೆ ಮುನ್ನಡೆ ತಂದಿತ್ತರು.

ಮರುಹೋರಾಟ ನಡೆಸಿದ ಮೇಘಾಲಯ ತಂಡ ಕ್ಯಾರಿಸನ್ ಖರ್ಸಿಯಾ (40ನೇ ನಿ.) ಮತ್ತು ಬ್ರಾಯನ್ ಗ್ರೆಕಸ್‌ಗ್ರೇನ್ (68 ನೇ ನಿ.) ಗಳಿಸಿದ ಗೋಲುಗಳ ನೆರವಿನಿಂದ ಗೆಲುವು ಒಲಿಸಿಕೊಂಡಿತು.

ನಾಕೌಟ್ ಹಂತದಲ್ಲಿ ರಾಜ್ಯ ತಂಡದವರು ಪಂಜಾಬ್ ತಂಡದ ಸವಾಲು ಎದುರಿಸಲಿದ್ದಾರೆ.

ಫುಟ್‌ಬಾಲ್: ಮಹಿಳಾ ತಂಡಕ್ಕೆ ಭರ್ಜರಿ ಜಯ

ಜಕಾ, ಜೋರ್ಡನ್ (ಪಿಟಿಐ): ಶಿಲ್ಪಿ ಠಾಜಿ ಅವರ ಕಾಲ್ಚಳಕದ ನೆರವಿನಿಂದ ಭಾರತ ತಂಡ ಜೂನಿಯರ್ (17 ವರ್ಷದೊಳಗಿನ) ಮಹಿಳೆಯರ ತಂಡದವರು ಸ್ನೇಹಪರ ಫುಟ್‌ಬಾಲ್ ಪಂದ್ಯದಲ್ಲಿ ಜೋರ್ಡನ್ ತಂಡವನ್ನು 7–0 ಗೋಲುಗಳಿಂದ ಮಣಿಸಿದರು.

ಶಿಲ್ಪಿ ಅವರು ಭಾನುವಾರ ನಡೆದ ಪಂದ್ಯದ 4, 37, 74 ಮತ್ತು 76ನೇ ನಿಮಿಷದಲ್ಲಿ ಗೋಲು ಗಳಿಸಿದರು. ಇತರ ಗೋಲುಗಳನ್ನು ಮನಿಷಾ ಕುಮಾರಿ (13), ಪೂಜಾ (18) ಹಾಗೂ ಸಂಜನಾ (90 + 1) ತಂದಿತ್ತರು.

ಉಭಯ ತಂಡಗಳ ನಡುವಿನ ಎರಡನೇ ಪಂದ್ಯ ಗುರುವಾರ ನಡೆಯಲಿದೆ.

ಮೆಟ್ರೊ ಹಾಕಿ ಕ್ಲಬ್‌ಗೆ ಗೆಲುವು

ಬೆಂಗಳೂರು: ದುಶಾಲ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಮೆಟ್ರೊ ಹಾಕಿ ಕ್ಲಬ್ ತಂಡದವರು ಕೆಎಸ್‌ಎಚ್‌ಎ ಸೂಪರ್ ಡಿವಿಷನ್ ಹಾಕಿ ಲೀಗ್‌ನಲ್ಲಿ ಗೆದ್ದರು.

ಸೋಮವಾರ ನಡೆದ ಪಂದ್ಯದಲ್ಲಿ ಮೆಟ್ರೊ ತಂಡ 4–2 ರಲ್ಲಿ ವಿ.ದಾಸಾ ಹಾಕಿ ಕ್ಲಬ್ ತಂಡವನ್ನು ಮಣಿಸಿತು. ದುಶಾಲ್ (20 ಮತ್ತು 42ನೇ ನಿ.) ಅಲ್ಲದೆ ಜಯ ಪ್ರಕಾಶ್ (45) ಮತ್ತು ಸುಧನ್ (48) ಅವರು ತಂಡದ ಗೆಲುವಿಗೆ ಕಾರಣರಾದರು.

ಇನ್ನೊಂದು ಪಂದ್ಯದಲ್ಲಿ ಸ್ಪೋರ್ಟ್ಸ್ ಹಬ್ 2–1 ಗೋಲುಗಳಿಂದ ಶ್ರೀರಾಮ್ ಹಾಕಿ ಕ್ಲಬ್ ತಂಡವನ್ನು ಮಣಿಸಿತು. ಸ್ಪೋರ್ಟ್ಸ್ ತಂಡದ ಎರಡೂ ಗೋಲುಗಳನ್ನು ಆನಂದ್ (23 ಮತ್ತು 25ನೇ ನಿ.) ಗಳಿಸಿದರು.

ಮಂಗಳವಾರದ ಪಂದ್ಯಗಳಲ್ಲಿ ಜೆಎಸ್‌ಎಚ್‌ಎ–ರೇನ್‌ಬೋ ಹಾಕಿ ಕ್ಲಬ್ ಮತ್ತು ಮೆಟ್ರೊ ಹಾಕಿ ಕ್ಲಬ್–ಶ್ರೀರಾಮ್ ಹಾಕಿ ಕ್ಲಬ್ ತಂಡಗಳು ಎದುರಾಗಲಿವೆ.

ಆಂಧ್ರದ ಕ್ರಿಕೆಟ್: ಕರ್ನಾಟಕಕ್ಕೆ ಜಯ

ಬೆಳಗಾವಿ: ಆರಂಭಿಕ ಬ್ಯಾಟರ್ ಲೋಕೇಶ ಸಿಡಿಸಿದ ಅಬ್ಬರದ ಶತಕದಿಂದಾಗಿ ಕರ್ನಾಟಕ ಅಂಧರ ಕ್ರಿಕೆಟ್ ತಂಡವು ಇಲ್ಲಿನ ಕರ್ನಾಟಕ ರಾಜ್ಯ ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ಸೋಮವಾರ ಪುರುಷರ ರಾಷ್ಟ್ರಮಟ್ಟದ ಅಂಧರ ಟಿ20 ಟೂರ್ನಿಯಲ್ಲಿ ಪಶ್ಚಿಮ ಬಂಗಾಳ ತಂಡದ ವಿರುದ್ಧ 119 ರನ್‌ಗಳಿಂದ ಜಯಿಸಿತು.

ಸಮರ್ಥನಂ ಅಂಗವಿಕಲರ ಸಂಸ್ಥೆ, ಪ್ರಜಾವಾಣಿ, 'ಇಂಡಸ್‌ಇಂಡ್ ಬ್ಯಾಂಕ್', ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಹಾಗೂ ಅಂಧರ ಕ್ರಿಕೆಟ್ ಸಂಸ್ಥೆ ಸಹಯೋಗದಲ್ಲಿ ನಡೆದ 'ನಾಗೇಶ ಟ್ರೋಫಿ' ಟೂರ್ನಿಯಲ್ಲಿ ಆತಿಥೇಯ ತಂಡ ಸತತ ಎರಡನೇ ಜಯ ಸಾಧಿಸಿತು. 'ಬಿ' ಗುಂಪಿನಲ್ಲಿ 4 ಅಂಕಗಳೊಂದಿಗೆ ಅಗ್ರಸ್ಥಾನಕ್ಕೆ ಏರಿತು.

ಟಾಸ್ ಗೆದ್ದ ಪಶ್ಚಿಮ ಬಂಗಾಳ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕರ್ನಾಟಕ ತಂಡ 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 252 ರನ್ ಗಳಿಸಿತು.


ಶತಕ ಬಾರಿಸಿದ ಕರ್ನಾಟಕ ತಂಡದ ಲೋಕೇಶ ಅವರ ಸಂಭ್ರಮ

ಲೋಕೇಶ (152; 69 ಎ, 24 ಬೌಂಡರಿ) ಅವರಿಗೆ ಉತ್ತಮ ಜೊತೆ ನೀಡಿದ ಕೊಟ್ಟ ಎಂ.ಸಾಯಿಕೃಷ್ಣ (60 ರನ್, 41 ಎಸೆತ, 10 ಬೌಂಡರಿ) ಅರ್ಧಶತಕ ಬಾರಿಸಿ, ತಂಡ ಉತ್ತಮ ಮೊತ್ತ ಕಲೆಹಾಕಲು ನೆರವಾದರು.

ಈ ಗುರಿ ಬೆನ್ನಟ್ಟಿದ ಪಶ್ಚಿಮ ಬಂಗಾಳ ತಂಡ 12 ರನ್‌ಗೆ 2 ವಿಕೆಟ್ ಕಳೆದುಕೊಂಡು ಆರಂಭದಲ್ಲೇ ಮುಗ್ಗರಿಸಿತು. ನಾಸೀರುದ್ದೀನ್ ಅಹ್ಮದ್ (56 ರನ್, 44 ಎಸೆತ, 4 ಬೌಂಡರಿ), ಪ್ರಸೆಂಜಿತ್ ಎಂ.(46 ರನ್, 61 ಎಸೆತ) ಪ್ರಯತ್ನದ ಮಧ್ಯೆಯೂ 4 ವಿಕೆಟ್ ನಷ್ಟಕ್ಕೆ 133 ರನ್ ಗಳಿಸಿ ಸೋತಿತು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 252 (ಲೋಕೇಶ 152, ಎಂ.ಸಾಯಿಕೃಷ್ಣ 60, ಎಸ್.ಕೃಷ್ಣಮೂರ್ತಿ 16, ಬಿ.ಹರೀಶ ಜಿತಾನ 5, ಸುಮನ್ ಘೋಷ್ 45ಕ್ಕೆ 1). ಪಶ್ಚಿಮ ಬಂಗಾಳ: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 133 (ಪ್ರಸಂಜಿತ ಎಂ. ಜಿತಾನ 46, ಶಂಕರ್ ಮಹಾತೋ 3, ಸುವಂದು ಮಹಾತೋ 14, ನಾಸೀರುದ್ದೀನ್ ಅಹ್ಮದ್ 46, ಉಕೆಲ್ ಕಿಸ್ಪು 8, ಆರ್.ಸುನೀಲ್ 6ಕ್ಕೆ1).

